ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 12 ಗುರುವಾರ 2026

ಸಂಪುಟ: 46 | ಸಂಚಿಕೆ: 294 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪುಲ್ವಾಮಾ ದಾಳಿಯಲ್ಲಿ ವೀರ ಮರಣ ಹೊಂದಿದ್ದ ಯೋಧರ ಗೌರವಾರ್ಥ

ಫೆ.14, ಮೈಸೂರಲ್ಲಿ ರಕ್ತದಾನ ಶಿಬಿರ



ಮೈಸೂರು,ಫೆ.11(ಜಿಎ)–ಪುಲ್ವಾಮಾ ದಾಳಿಯಲ್ಲಿ ವೀರ ಮರಣ ಹೊಂದಿದ ಸಿಆರ್‌ಪಿಎಫ್ ಯೋಧರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಪ್ರಾಜೆಕ್ಟ್ ಕ್ಲಿಕ್ಸ್ ವತಿಯಿಂದ ಫೆ.14ರಂದು ಕೆ.ಜಿ.ಕೊಪ್ಪಲಿನ ಮುಖ್ಯ ರಸ್ತೆಯಲ್ಲಿರುವ ಟಿಟಿಎಲ್ ಕಾಲೇಜಿನ ಆವರಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಾಜೆಕ್ಟ್ ಕ್ಲಿಕ್ಸ್ ಸಂಸ್ಥಾಪಕ ನಿಮಿಷಾಂಭ ಈ ವಿಷಯ ತಿಳಿಸಿ, ಅಂದು ಬೆಳಗ್ಗೆ 8.30ರಿಂದ ಮಧ್ಯಾಹ್ನ 1.30ರವರೆಗೆ ಕಾಲೇಜಿನಲ್ಲಿ ಉಚಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು.

ಸಂಸ್ಥೆ ವತಿಯಿಂದ ಕಳೆದ ಮೂರು ವರ್ಷಗಳಿಂದ ಶಿಬಿರವನ್ನು ಆಯೋಜಿಸುತ್ತಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಅಗತ್ಯವಿರುವವರಿಗೆ ರಕ್ತ ತಲುಪಿಸಿದ್ದೇವೆ. ಈ ಬಾರಿಯ ಶಿಬಿರಕ್ಕೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಮಗೆ ಸಾಥ್ ನೀಡಿದೆ ಎಂದರು.

ಅಂದು ಶಿಬಿರಕ್ಕೆ ಎನ್‌ಸಿಸಿ ಕಮಾಂಡಿಂಗ್ ಆಫೀಸರ್ ಲೆಫ್ಟಿನೆಂಟ್ ಕರ್ನಲ್ ವೈ.ಕೆ.ಸಂಜೀವ್ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ಕೆ.ಹರೀಶ್‌ಗೌಡ, ಜಯದೇವ ಆಸ್ಪತ್ರೆಯ ಮುಖ್ಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ್, ವೈದ್ಯೆ ಡಾ.ಗೀತಾ, ಟಿಟಿಎಲ್ ಕಾಲೇಜಿನ ಪ್ರಾಂಶುಪಾಲರಾದ ಬಿ.ವಿ.ಪ್ರಶಾಂತ್, ಮೈಸೂರು ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ.ಪಿ.ದಿವಾಕರ್, ಉಪಾಧ್ಯಕ್ಷರಾದ ನೀಲಕಂಠಕುಮಾರ್ ಶೆಟ್ಟಿ, ಹೆಚ್.ಎಸ್. ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಎಸ್.ನಟರಾಜ್, ಸುಬೇದಾರ್ ಸಿ.ಕೆ. ಬಸಪ್ಪ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮಹದೇವ ಪ್ರಸಾದ್, ಕಿಶೋರ್ ಉಪಸ್ಥಿತರಿದ್ದರು.

ಫೆ.15ರಂದು ಕೆ.ಜಿ.ಕೊಪ್ಪಲಿನ ಮರುಳೇಶ್ವರ ದೇವಸ್ಥಾನದಲ್ಲಿ 'ಶಿವದೀಪೋತ್ಸವ–26'



ಶಿವ ಭಕ್ತಿಗೀತೆ, ರಂಗಗೀತೆ, ಸಮೂಹ ಭಕ್ತಿಗೀತೆ, ಶಾಸ್ತ್ರೀಯ ಸಂಗೀತ, ಭರತನಾಟ್ಯ, ಕಿರು ನಾಟಕ ಕಾರ್ಯಕ್ರಮ

ಮೈಸೂರು,ಫೆ.11(ಜಿಎ)–ಮೈಸೂರಿನ ಕನ್ನೇಗೌಡನ ಕೊಪ್ಪಲಿನ ಮರುಳೇಶ್ವರ ದೇವಸ್ಥಾನದಲ್ಲಿ ಫೆ.15ರಂದು 'ಶಿವದೀಪೋತ್ಸವ 2026' ಅಂಗವಾಗಿ ಸಂಜೆ 6 ಗಂಟೆಗೆ 20 ಸಾವಿರ ದೀಪಾರಾಧನೆ ಮತ್ತು ಅಹೋರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮರುಳೇಶ್ವರ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಡಾ.ಮಹದೇವಯ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನೇಗೌಡನ ಕೊಪ್ಪಲಿನ ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಟ್ರಸ್ಟ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ವತಿಯಿಂದ ಶಿವರಾತ್ರಿಯ ಅಂಗವಾಗಿ 'ಶಿವದೀಪೋತ್ಸವ' ದೀಪಾರಾಧನೆ ಮತ್ತು ಅಹೋರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದ್ದು, ಅಂದು ಸಂಜೆ 4 ಗಂಟೆಯಿಂದ 6 ಗಂಟೆವರೆಗೂ ರಂಗೋಲಿ ಸ್ಪರ್ಧೆ ನಡೆಯಲಿದೆ ಎಂದರು.

ನಂತರ ಸಂಜೆ 6 ಗಂಟೆಯಿಂದ 20 ಸಾವಿರ ದೀಪ ಹಚ್ಚುವುದರೊಂದಿಗೆ ರಾತ್ರಿ 8 ಗಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳಾದ ಶಿವ ಭಕ್ತಿ ಗೀತೆ, ರಂಗ ಗೀತೆ, ಸಮೂಹ ಭಕ್ತಿ ಗೀತೆಗಳನ್ನು ಹಾಡುವುದು ಮತ್ತು ಶಾಸ್ತ್ರೀಯ ಸಂಗೀತ, ಭರತನಾಟ್ಯ, ಕಿರು ನಾಟಕ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ನಡೆಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಫೆ.12ರೊಳಗೆ ಕಚೇರಿಗೆ ಬಂದು ನೊಂದಣಿ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಗಾಗಿ 9900629393, 9845595409 ಸಂಪರ್ಕಿಸಿ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರೊ.ಕೆ.ಆರ್. ರಂಗಯ್ಯ, ಡಿ.ರವಿಕುಮಾರ್, ಶೋಭ ರಮೇಶ್, ರಾಣಿ ಮಹೇಶ್ ಉಪಸ್ಥಿತರಿದ್ದರು.

ವಾರ್ಡ್ ಅಧ್ಯಕ್ಷರಾಗಿ ನೇಮಕ



ಮೈಸೂರು: ಮೈಸೂರಿನ ಚಾಮರಾಜ ಕ್ಷೇತ್ರದ ದೇವರಾಜ ಬ್ಲಾಕ್ 18ನೇ ವಾರ್ಡಿನ ಅಧ್ಯಕ್ಷರನ್ನಾಗಿ ಎಂ.ಕುಮಾರ್ ಅವರನ್ನು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ನೇಮಿಸಿದೆ.

ಬೈಕ್ ಡಿಕ್ಕಿ; ಅಪರಿಚಿತ ಮಹಿಳೆ ಸಾವು

ಮೈಸೂರು,ಫೆ.11(ಪಿಎಂ)–ಬೈಕ್ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದ ಅಪರಿಚಿತ ಮಹಿಳೆಯೊಬ್ಬರು ಚಿಕಿತ್ಸೆ ಫಲಕಾರಿಯಾಗದೇ ಸೋಮವಾರ ರಾತ್ರಿ ಸಾವನ್ನಪ್ಪಿದ್ದಾರೆ.



ಸುಮಾರು 55 ರಿಂದ 60 ವರ್ಷ ವಯಸ್ಸಿನ ಸದರಿ ಮಹಿಳೆಯು ಫೆ.3ರಂದು ಬೆಳಗ್ಗೆ ಸುಮಾರು 6 ಗಂಟೆಗೆ ಮೈಸೂರು ನಗರದ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಹೂಟಗಳ್ಳಿ ಸಿಗ್ನಲ್ ಬಳಿ ರಸ್ತೆ ದಾಟುತ್ತಿದ್ದಾಗ ಬೈಕ್ ಡಿಕ್ಕಿ ಹೊಡೆದಿದೆ.

ಪರಿಣಾಮ ತಲೆಗೆ ತೀವ್ರ ಸ್ವರೂಪದ ಗಾಯವಾಗಿದ್ದ ಈ ಮಹಿಳೆಯು ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಫೆ.9ರಂದು ರಾತ್ರಿ ಸಾವನ್ನಪ್ಪಿದ್ದಾರೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ದೇಹ ಇರಿಸಲಾಗಿದೆ.

ಬೈಕ್ (ಕೆಎ–02, ಇಕ್ಯೂ–7884) ಸವಾರ ಆನಂದ್ ಎಂಬಾತನ ಅಜಾಗರೂಕತೆ ಹಾಗೂ ಅತಿವೇಗದ ಚಾಲನೆಯೇ ಈ ಅಪಘಾತಕ್ಕೆ ಕಾರಣವೆಂದು ಆರೋಪಿಸಲಾಗಿದೆ. ವಿವಿ ಪುರಂ ಸಂಚಾರ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ. ಮೃತರ ವಾರಸುದಾರರು ಇದ್ದಲ್ಲಿ ವಿವಿ ಪುರಂ ಸಂಚಾರ ಪೊಲೀಸ್ ಠಾಣೆ ದೂ.ಸಂ. 0821–2418–2418529, 948080 2262 ಹಾಗೂ ಪೊಲೀಸ್ ಕಂಟ್ರೋಲ್ ರೂಂ. ಸಂಖೆ 0821–2418339, 340 ಸಂಪರ್ಕಿಸಲು ಕೋರಲಾಗಿದೆ

ಕೇರಳ ಲಾಟರಿ ಮಾರಾಟ; ಎರಡು ಪ್ರತ್ಯೇಕ ಪ್ರಕರಣದಲ್ಲಿ ಇಬ್ಬರ ಬಂಧನ

ಮೈಸೂರು,ಫೆ.11(ಪಿಎಂ)– ಜಿಲ್ಲಾ ಅಪರಾಧಿ ಪತ್ತೆದಳ ಹಾಗೂ ಪಿರಿಯಾಪಟ್ಟಣ ಪೊಲೀಸರು ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬುಧವಾರ ಸಂಜೆ ಬಂಧಿಸಿದ್ದಾರೆ.



ಅರುಣ್



ಸ್ವಾಮಿ

ಪಿರಿಯಾಪಟ್ಟಣದ ಮಸಣಿಕಮ್ಮ ದೇವಸ್ಥಾನದ ಸಮೀಪದ ನಿವಾಸಿಯಾದ ವೃತ್ತಿಯಲ್ಲಿ ವಾಹನ ಚಾಲಕನಾದ ಅರುಣ ಅಲಿಯಾಸ್ ಅರುಣ್ ಕುಮಾರ್ (35) ಹಾಗೂ ಇದೇ ಪಿರಿಯಾಪಟ್ಟಣದ ನಿವಾಸಿಯಾದ ಸ್ವಾಮಿ (45) ಅಕ್ರಮವಾಗಿ ಕೇರಳ ರಾಜ್ಯದ ಲಾಟರಿ ಟಿಕೆಟ್ ಮಾರಾಟ ಮಾಡುತ್ತಿದ್ದಾಗ ಸಿಕ್ಕಿ ಬಿದ್ದ ಆರೋಪಿಗಳು.

ಅಡಿಷನಲ್ ಎಸ್ಪಿ ಮಲ್ಲಿಕ್ ಅವರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಈ ಇಬ್ಬರನ್ನು ಬಂಧಿಸಲಾಗಿದೆ. ಬುಧವಾರ ಸಂಜೆ ಪಿರಿಯಾಪಟ್ಟಣದ ವೆಂಕಟೇಶ್ವರ ವೇಬ್ರಿಡ್ಜ್ ಪಕ್ಕದ ಸೌದೇಡಿಪೋ ಬಳಿ ಅರುಣ ಕೇರಳ ರಾಜ್ಯ ಲಾಟರಿಯನ್ನು ಯಾವುದೇ ರಹದಾರಿ ಇಲ್ಲದೇ ಮಾರಾಟ ಮಾಡುತ್ತಿದ್ದ. ಈತನನ್ನು ಬಂಧಿಸಿದ ಪೊಲೀಸರು, ಅವನ ಬಳಿಯಿದ್ದ 32,200 ರೂ. ಮೌಲ್ಯದ ಕೇರಳ ಲಾಟರಿ, ಮೊಬೈಲ್ ಪೋನ್ ಮತ್ತು ಲಾಟರಿ ಮಾರಾಟದ 20 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಪಿರಿಯಾಪಟ್ಟಣದ ಕುಶಾಲನಗರ ರಸ್ತೆಯಲ್ಲಿರುವ ಸಿಂಚನ ಹೋಟೆಲ್‌ನಲ್ಲಿ ಕೇರಳ ರಾಜ್ಯದ ಲಾಟರಿಯನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಸ್ವಾಮಿ (45) ಎಂಬಾತನನ್ನು ಬಂಧಿಸಿದ ಪೊಲೀಸರು, ಅಕ್ರಮವಾಗಿ ಅವನ ಬಳಿಯಿದ್ದ 33 ಸಾವಿರ ರೂ. ಮೌಲ್ಯದ 55 ಸೆಟ್ ಕೇರಳ ಲಾಟರಿ, ಮೊಬೈಲ್ ಪೋನ್ ಮತ್ತು ಲಾಟರಿ ಮಾರಾಟದ 2,930 ನಗದು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಪಿರಿಯಾಪಟ್ಟಣ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿವೆ.

ನಿಧನ



ಪಾರ್ವತಮ್ಮ

ಮೈಸೂರು, ಫೆ. 11–ಕೊಳ್ಳೇಗಾಲ ತಾಲೂಕಿನ ಧನಗೆರೆ ಗ್ರಾಮದ ನಿವಾಸಿ ಪಾರ್ವತಮ್ಮ (92) ಭಾನುವಾರ (ಫೆ.8) ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಹನ್ನೊಂದು ಮೊಮ್ಮಕ್ಕಳು, ಹನ್ನೆರಡು ಮರಿಮಕ್ಕಳು ಮತ್ತು ಮರಿಮಗಳ ಮಗು ಐದನೇ ತಲೆಮಾರಿನ ಮಟಾಣಿ ತಾನ್ನಿ ಅವರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಡ್ರಗ್ಸ್ ವಿರುದ್ಧ ಮೈಸೂರು ಪೊಲೀಸರ ಕಾರ್ಯಾಚರಣೆ

ವಿವಿಧ ಠಾಣೆ ವ್ಯಾಪ್ತಿ ಹಲವರ ಬಂಧನ; ಮಾದಕ ವಸ್ತು ವಶ

ಮೈಸೂರು,ಫೆ.11(ಬಿಎಲ್‌ಯು)– ಡ್ರಗ್ಸ್ ವಿರುದ್ಧ ಮೈಸೂರು ಪೊಲೀಸರ ಕಾರ್ಯಾಚರಣೆ ಮುಂದುವರೆದಿದ್ದು, ಮಾದಕ ವಸ್ತುಗಳ ಮಾರಾಟ ಮಾಡುತ್ತಿದ್ದ ಹಲವು ಆರೋಪಿಗಳನ್ನು ಬಂಧಿಸಲಾಗಿದೆ.

ಮೈಸೂರಿನ ಮಂಡಿಮೊಹಲ್ಲಾದ ಮೊಹಮ್ಮದ್ ಕರೀಂ ಅಲಿಯಾಸ್ ಕಾಲು ಹಾಗೂ ನಿಷಾದಾ ಪಾಷ ಬಂಧಿತ ಆರೋಪಿಗಳಾಗಿದ್ದಾರೆ. ಈ ಇಬ್ಬರು ಆರೋಪಿಗಳಿಂದ 3.17 ಗ್ರಾಂ ಎಂಡಿ ಎಂಎ ವಶಪಡಿಸಿಕೊಳ್ಳಲಾಗಿದೆ. ಮೊಹಮ್ಮದ್ ಕರೀಂ ಅಲಿಯಾಸ್ ಕಾಲು ವಿರುದ್ಧ ಮೈಸೂರಿನ ಮಂಡಿ ಠಾಣೆ, ಎನ್.ಆರ್.ಪೊಲೀಸ್ ಠಾಣೆ, ಸೆನ್ ಪೊಲೀಸ್ ಠಾಣೆಯಲ್ಲಿ ಐದು ಪ್ರಕರಣ ದಾಖಲಾಗಿದೆ. ಹಾಗೆಯೇ ನಿಷಾದ್ ಪಾಷ ವಿರುದ್ಧ ಚನ್ನಪಟ್ಟಣ ಪೊಲೀಸ್ ಠಾಣೆ, ನಜರ್‌ಬಾದ್ ಪೊಲೀಸ್ ಠಾಣೆ, ಉದಯಗಿರಿ ಪೊಲೀಸ್ ಠಾಣೆಗಳಲ್ಲಿ ಐದು ಪ್ರಕರಣ ದಾಖಲಾಗಿದೆ.











ಮಾದಕ ವಸ್ತುಗಳ ಸಾಗಾಟ, ಮಾರಾಟ ಸೇರಿದಂತೆ ಇತರೆ ಅಪರಾಧ ಚಟುವಟಿಕೆ ನಡೆಸುವುದು, ಪೊಲೀಸರ ಕೈಗೆ ಸಿಕ್ಕಿ ಬಿದ್ದ ನಂತರ ಜೈಲಿಗೆ ಹೋಗುವುದು, ತರುವಾಯ ಜಾಮೀನಿನ ಮೇಲೆ ಹೊರಗೆ ಬರುವುದು ಇವರಿಗೆ ನೀರು ಕುಡಿದಷ್ಟು ಸಲೀಸಾಗಿದೆ. ಜೈಲಿನಿಂದ ಹೊರ ಬಂದ ನಂತರ ತಪ್ಪು ತಿದ್ದಿಕೊಂಡು ಒಳ್ಳೆಯ ಜೀವನ ನಡೆಸದೆ ಅಪರಾಧ ಚಟುವಟಿಕೆಗಳನ್ನು ನಡೆಸುವುದನ್ನು ಇವರು ಮೂಲ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ಇದಲ್ಲದೆ ಸಿಸಿಬಿ ಪೊಲೀಸರು ಗಾಂಜಾ ಮಾರಾಟ ಮಾಡುತ್ತಿದ್ದ ಬಂಬೂ ಬಜಾರ್ ವಾಸಿ ಸಂಜಯ್‌ನನ್ನು ಬಂಧಿಸಿ, ಆತನಿಂದ 35 ಗ್ರಾಂ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಮಂಡಿ ಠಾಣೆ ಪೊಲೀಸರು ನ್ಯೂ ಬಂಬೂ ಬಜಾರ್ ವಾಸಿ ರಾಜ್‌ಕುಮಾರ್ ಅಲಿಯಾಸ್ ಪುಟ್ಟನನ್ನು ಬಂಧಿಸಿ, 550 ಗ್ರಾಂ ಗಾಂಜಾ ವಶಡಿಸಿಕೊಂಡಿದ್ದಾರೆ. ಅಲ್ಲದೆ ಗಾಂಜಾ ಮಾರಾಟಕ್ಕೆ ಬಳಸುತ್ತಿದ್ದ ದ್ವಿಚಕ್ರ ವಾಹನ (ಕೆಎ 09 ಜೆಇ 6223) ವಶಪಡಿಸಿಕೊಂಡಿದ್ದಾರೆ.



ಮೈಸೂರಿನಲ್ಲಿ ಡ್ರಗ್ಸ್ ವಿರುದ್ಧದ ಪೊಲೀಸರ ಕಾರ್ಯಾಚರಣೆ ಮುಂದುವರೆದಿದೆ. ಮಾದಕ ವಸ್ತುಗಳ ಬಗ್ಗೆ ಮಾಹಿತಿ ಇದ್ದರೆ ಸಾರ್ವಜನಿಕರು "ವಿಮುಕ್ತಿ" ಸಹಾಯ ವಾಣಿ ಸಂಖ್ಯೆ 827794 8880ಗೆ ವಿವರ ನೀಡಬೇಕೆಂದು ಪೊಲೀಸ್ ಇಲಾಖೆ ಮನವಿ ಮಾಡಿದೆ.

ಮಹನೀಯರ ಜಯಂತಿಗಳ ಅರ್ಥಪೂರ್ಣವಾಗಿ ಆಚರಿಸಿ

ಗಣ್ಯರಿಗೆ ಬೊಕ್ಕೆ ಬದಲು ಮಹನೀಯರ ಜೀವನ ಚರಿತ್ರೆ ಪುಸ್ತಕ ನೀಡಿ



ಮೈಸೂರಿನ ಡಿಸಿ ಕಚೇರಿ ಸಭಾಂಗಣದಲ್ಲಿ ಎಡಿಸಿ ಡಾ.ಪಿ.ಶಿವರಾಜ್ ಅಧ್ಯಕ್ಷತೆಯಲ್ಲಿ ವಿವಿಧ ಮಹನೀಯರ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆ ಜರುಗಿತು.

ಮೈಸೂರು ಫೆ.11(ಎಂಟಿವೈ)– ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಿ, ಅವರ ಮೌಲ್ಯಯುತ ಸಂದೇಶ ಸಮಾಜಕ್ಕೆ ಮುಟ್ಟಿಸುವ ಪ್ರಯತ್ನ ಮಾಡಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವಿವಿಧ ಮಹನೀಯರ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಫೆ.19ರಂದು ಮಧ್ಯಾಹ್ನ 12ಕ್ಕೆ ಕಲಾಮಂದಿರದಲ್ಲಿ ಛತ್ರಪತಿ ಶಿವಾಜಿ ಜಯಂತಿ ಆಯೋಜಿಸಲಾಗಿದೆ.

ಫೆ.20ರಂದು ಬೆಳಗ್ಗೆ 11 ಗಂಟೆಗೆ ಕಿರು ರಂಗಮಂದಿರದಲ್ಲಿ ಸಂತ ಕವಿ ಸರ್ವಜ್ಞ ಜಯಂತಿ, ಮಾ.1ರಂದು ಬೆಳಗ್ಗೆ 11:30ಕ್ಕೆ ಕಲಾಮಂದಿರದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ, ಮಾ.8.ರಂದು ಬೆಳಗ್ಗೆ 11 ಗಂಟೆಗೆ ಕಿರು ರಂಗಮಂದಿರದಲ್ಲಿ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ ಆಚರಿಸಲಾಗುತ್ತಿದೆ. ಈ ಎಲ್ಲಾ ಮಹನೀಯರ ಜಯಂತಿ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿಸಬೇಕು. ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಗೀತಾ ಗಾಯನ ಆಯೋಜಿಸಿ, ಸಮುದಾಯದ ಮುಖಂಡರ ಸಲಹೆಯಂತೆ ದಿವ್ಯ ಸಾನ್ನಿಧ್ಯ ಹಾಗೂ ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಯನ್ನು ಆಹ್ವಾನಿಸಬೇಕೆಂದು ಎಡಿಸಿ ಸೂಚಿಸಿದರು.

ಜಯಂತಿಗಳ ಆಚರಣೆ ಕೇವಲ ಒಂದು ಸಮುದಾಯಕ್ಕೆ ಸೀಮಿತವಲ್ಲ. ಎಲ್ಲಾ ಸಮುದಾಯದವರು ಸೇರಿ ಜಯಂತಿಗಳ ಆಚರಣೆ ಮಾಡಬೇಕು. ಜಯಂತಿಗಳ ಆಚರಣೆಯ ಉದ್ದೇಶ ಮಹನೀಯರ ಆದರ್ಶ ಪಾಲನೆ ಮಾಡುವುದೇ ಆಗಿದೆ. ಮಹನೀಯರ ತತ್ವ ಆದರ್ಶಗಳನ್ನು ಗುಣಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಕಾರ್ಯಕ್ರಮದಲ್ಲಿ ಗಣ್ಯರಿಗೆ ಬೊಕ್ಕೆ ನೀಡದೆ, ಆಯಾ ಜಯಂತಿಗಳಲ್ಲಿ ಆ ಮಹನೀಯರ ಜೀವನ ಚರಿತ್ರೆ ಕುರಿತ ಪುಸ್ತಕಗಳನ್ನು ನೀಡಿ ಸ್ವಾಗತಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮಾತನಾಡಿ, ಜಯಂತಿಗಳ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳಿಗೆ, ಮುಖಂಡರಿಗೆ ಆಹ್ವಾನ ನೀಡಲಾಗುವುದು. ಕಲಾಮಂದಿರದಲ್ಲಿ ಗೀತಾ ಗಾಯನ ಏರ್ಪಡಿಸಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಜಯಂತಿಗಳ ಆಚರಣೆಯ ಸಂಬಂಧ ಸಮುದಾಯಗಳ ಮುಖಂಡರು ಇನ್ನಿತರರು ಪಾಲ್ಗೊಂಡಿದ್ದರು.

ಫೆ.14 ಮೈಸೂರಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಕುರಿತು ವಿಚಾರ ಸಂಕಿರಣ

ಮೈಸೂರು,ಫೆ.11(ಜಿಎ)–ಕಡಕೊಳದಲ್ಲಿರುವ ಶೇಷಾದ್ರಿಪುರಂ ತಾಂತ್ರಿಕ ಸಂಸ್ಥೆ ವತಿಯಿಂದ ಫೆ.14ರಂದು ಬೆಳಗ್ಗೆ 9.30ಕ್ಕೆ ಕಾಲೇಜು ಸಭಾಂಗಣದಲ್ಲಿ ಅಪಾಯಕಾರಿ ವಸ್ತುಗಳ ನಿರ್ವಹಣೆಗೆ ಕೃತಕ ಬುದ್ಧಿಮತ್ತೆ ಬಳಕೆಯ ಅಗತ್ಯ ಕುರಿತು ಭಾರತ–ಅಮೆರಿಕ ತಜ್ಞರ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಕೆ.ಪ್ರಹ್ಲಾದ್ ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.13ರಂದು ಪೂರ್ವಭಾವಿ ಸಭೆ ಇರಲಿದೆ. ಮುಖ್ಯವಾದ ವಿಚಾರ ಸಂಕಿರಣ ನಡೆಯುವ ಫೆ.14ರಂದು ಅಮೆರಿಕದಿಂದ ಆಗಮಿಸಿರುವ ತಜ್ಞರು, ಹವಾಮಾನ ವೈಪರೀತ್ಯ ತಡೆಗಟ್ಟುವ ಹಿನ್ನೆಲೆಯಲ್ಲಿ ಇ–ತ್ಯಾಜ್ಯ, ಪ್ಲಾಸ್ಟಿಕ್ ಮೊದಲಾದ ಅಪಾಯಕಾರಿ ವಸ್ತುಗಳನ್ನು ಹೇಗೆ ವಿಲೇವಾರಿ ಮಾಡಬೇಕೆಂಬ ಬಗ್ಗೆ ಮಾಹಿತಿ ನೀಡಲಿದ್ದಾರೆ. ಭಾರತೀಯ ತಜ್ಞರು ಸಹಾ ಮಾಹಿತಿ ನೀಡಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ಮಾಹಿತಿ ನೀಡಿದರು.

ಭಾರತ–ಅಮೆರಿಕಾ ತಜ್ಞರು ಭಾಗಿ

ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ತಂತ್ರಜ್ಞಾನ ಮತ್ತು ವಿಜ್ಞಾನ ವಿವಿಯ ಉಪಕುಲಪತಿ ಡಾ.ಎನ್.ಎನ್.ಸಂತೋಷ್ ಕುಮಾರ್, ಡಾ.ಆರ್.ವಿಶ್ವನಾಥ್ ಆಗಮಿಸಲಿದ್ದಾರೆ. ನಾಡೋಜ ಡಾ. ವೂಡೆ ಪಿ. ಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ಶೇಷ ನಾರಾಯಣ, ಪ್ರೊ.ಕೆ.ಎನ್.ರಾಜಾರಾವ್ ಉಪಸ್ಥಿತರಿದ್ದರು.

ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಫೆ.11–2026ನೇ ಸಾಲಿನ ರಾಜ್ಯ ಮಟ್ಟ ಹಾಗೂ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ಪಡೆಯಲು ರಾಜ್ಯ ಸರ್ಕಾರದ ಅರ್ಹ ಅಧಿಕಾರಿ, ನೌಕರರು ತಮ್ಮ ನಾಮನಿರ್ದೇಶನಗಳನ್ನು ಆನ್‌ಲೈನ್ ಮೂಲಕ ಮಾತ್ರ ಫೆ.25ರೊಳಗಾಗಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಶಸ್ತಿಯನ್ನು ರಾಜ್ಯ ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿನ ಎರಡು ಹಂತಗಳಿಗೂ ಅರ್ಜಿ ಸಲ್ಲಿಸಲು ಬಯಸುವವರು, ಪ್ರತಿ ಹಂತಕ್ಕೂ ಪ್ರತ್ಯೇಕವಾಗಿ ನಾಮನಿರ್ದೇಶನ ಸಲ್ಲಿಸಬೇಕು. ನಾಮನಿರ್ದೇಶನವನ್ನು ಸಲ್ಲಿಸಬಯಸುವವರು https://dparar.karnataka.gov.in/https://sarvothamaawards.karnataka.gov.in ಮೂಲಕ ಸಲ್ಲಿಸಬಹುದು. ನಾಮನಿರ್ದೇಶನವನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯಲ್ಲಿ ಸಲ್ಲಿಸಬಹುದಾಗಿದ್ದು, ಕನ್ನಡದಲ್ಲಿ ಸಲ್ಲಿಸುವವರು ನುಡಿ 6.0 ಆವೃತ್ತಿ ಮಾತ್ರ ಬಳಸುವಂತೆ ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಬಿನಿ ನಾಲೆ, ಕೆರೆ–ಕಟ್ಟೆಗಳಿಗೆ ನೀರು ಬಿಡಲು ಒತ್ತಾಯಿಸಿ ಕಾಡಾ ಮುಂದೆ ಪ್ರತಿಭಟನೆ

ಜಿಲ್ಲಾ ಉಸ್ತುವಾರಿ ಸಚಿವರು ಸಿಎಂ ಸಿದ್ದರಾಮಯ್ಯರ ಆಪ್ತರಾದರೂ ರೈತರ ಸಮಸ್ಯೆ ನಿವಾರಿಸುವಲ್ಲಿ ವಿಫಲ

ಮೈಸೂರು,ಫೆ.11(ಜಿಎ)–ಕಬಿನಿ ನಾಲೆ, ಕೆರೆ ಕಟ್ಟೆಗಳಿಗೆ ನೀರು ಬಿಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಬುಧವಾರ ಕಾಡಾ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಗನ್ ಹೌಸ್ ವೃತ್ತದ ಬಳಿಯ ಕುವೆಂಪು ಉದ್ಯಾನವನದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಜನಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗುತ್ತಾ ಕಾಡಾ ಕಚೇರಿಗೆ ಮೆರವಣಿಗೆ ಮೂಲಕ ತೆರಳಿ ಮುತ್ತಿಗೆ ಹಾಕಲು ಯತ್ನಿಸಿದರು. ಅವರನ್ನು ಪೊಲೀಸರು ತಡೆದರು.



ಕಬಿನಿ ನಾಲೆ, ಕೆರೆ ಕಟ್ಟೆಗಳಿಗೆ ನೀರು ಬಿಡಲು ಒತ್ತಾಯಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಮುಖಂಡರು ಬುಧವಾರ ಕಾಡಾ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಕಬಿನಿನಾಲೆಗಳಿಗೆ ಹಾಗೂ ಹುಲ್ಲಳ್ಳಿ, ರಾಂಪುರ ನಾಲೆಗಳಿಗೆ ನೀರು ಬಿಡುವಲ್ಲಿ ಸರ್ಕಾರ ಮತ್ತು ಜಿಲ್ಲಾಡಳಿತ ವಿಫಲವಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿಗಳ ಆಪ್ತರಾದರೂ ಜಿಲ್ಲೆಯ ರೈತರ ಸಮಸ್ಯೆಗಳ ಬಗ್ಗೆ ಗಮನ ಹರಿಸುವಲ್ಲಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು. ಕಬಿನಿ ನಾಲೆ ದುರಸ್ತಿ ಹಾಗೂ ಅದರ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಗುಣಮಟ್ಟವನ್ನು ಅಧಿಕಾರಿಗಳು ಕಾಪಾಡಬೇಕು. ತಕ್ಷಣ ಜಿಲ್ಲಾ ಉಸ್ತುವಾರಿ ಸಚಿವರು ನೀರಾವರಿ ಸಲಹಾ ಸಮಿತಿ ಸಭೆ ಮಾಡಿ ಕೆರೆ, ಕಟ್ಟೆಗಳಿಗೆ ಮತ್ತು ನಾಲೆಗಳಿಗೆ ನೀರು ಬಿಡಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಜಿಲ್ಲಾ ಉಸ್ತು ವಾರಿ ಸಚಿವರ ವಿರುದ್ಧ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕಾವೇರಿ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಫೆ.15ರಿಂದ ನಾಲೆ, ಕೆರೆಕಟ್ಟೆಗಳಿಗೆ ನೀರು ಹರಿಸುತ್ತೇವೆ ಎಂದು ಲಿಖಿತ ಭರವಸೆ ನೀಡಿದ ಬಳಿಕ ಪ್ರತಿಭಟನೆ ವಾಪಸ್ ಪಡೆಯಲಾಯಿತು.

ಪ್ರತಿಭಟನೆಯಲ್ಲಿ ಕೆರೆಹುಂಡಿ ರಾಜಣ್ಣ, ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್, ಹೆಚ್. ಗುಂಡ್ಲ ಚಿದಂಬರ, ಗಣೇಶ್, ಮುದ್ದಹಳ್ಳಿ ಮಧು, ಸುಜ್ಜಲೂರು ಜಯಸ್ವಾಮಿ, ಬಿದರಳ್ಳಿ ಮಾದಪ್ಪ, ದೇವಿರಮ್ಮನಹಳ್ಳಿ ಸಿದ್ದಬಸಪ್ಪ, ಶ್ರೀಕಂಠಸ್ವಾಮಿ, ದೇವಿರಮ್ಮನಹಳ್ಳಿ ಹುಂಡಿ ನವೀನ್, ಶ್ಯಾನಾಡ್ರಹಳ್ಳಿ ಬಸವರಾಜು, ನಾಗರಾಜಪ್ಪ ಅಂಡುವಿನಹಳ್ಳಿ, ಮಹೇಶ್ ಕುರಹಟ್ಟಿ, ರಾಜೇಶ್, ಪುನೀತ್, ಕಸುವಿನ ಹಳ್ಳಿ ಗುರು, ಮೊಳಕುಂಡಿ ಸೋಮ, ಮಾದಾಪುರ ಪುನೀತ್ ಪಾಲ್ಗೊಂಡಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.2.2026 ಗುರುವಾರ, ಮಳೆ ನಕ್ಷತ್ರ: ಧನಿಷ್ಠ 6.02.2026ರಿಂದ 18.02.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ ಹಾಗೂ ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಪ್ರಜಾಪಿತ ಬ್ರಹ್ಮಕುಮಾರಿ ಸಂಚಾಲಕರಾದ ಬಿ.ಕೆ. ರಶ್ಮಿ ಅವರಿಂದ ಗೀತೆಯ ಮೌಲ್ಯಗಳು ಕುರಿತು ಪ್ರವಚನ, ಸಂಜೆ 7 ರಿಂದ ರೋಟರಿ ಜಯಪ್ರಕಾಶನಗರದ ಅಧ್ಯಕ್ಷ ಪಿ. ರವಿಶಂಕರ್ ಅವರಿಂದ ಪ್ರಯತ್ನದಿಂದ ಪರಮಾತ್ಮ ಕುರಿತು ಉಪನ್ಯಾಸ, ರಾತ್ರಿ 8 ರಿಂದ ಶ್ರೀಮತಿ ಇಂದ್ರಾಣಿ ಮತ್ತು ತಂಡದಿಂದ ಸುಗಮ ಸಂಗೀತ, ಸ್ಥಳ: ವಿದ್ಯಾಲಯದ ಆವರಣ, ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 8 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕೊಲೆಸ್ಟ್ರಾಲ್ ಚಿಕಿತ್ಸಾ ಶಿಬಿರ, ಪಾರ್ಕಿನ್‌ಸನ್ಸ್ ಕಾಯಿಲೆ, ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಂಡಿ ನೋವು, ಮೂಲವ್ಯಾಧಿ ಕುರಿತು ತಪಾಸಣೆ, ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೂಸಾ 2.0 ಪ್ರಾಯೋಜಿತ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಶ್ರೀ ವಿದ್ಯಾ ಗಣಪತಿ ಗೆಳೆಯರ ಬಳಗ :** 15ನೇ ವರ್ಷದ ಶಬರಿಮಲೆ ಯಾತ್ರೆ ಪ್ರಯುಕ್ತವಾಗಿ ಬೆಳಗ್ಗೆ 10.30ಕ್ಕೆ ಮಹಾಶಾಂತಿ ಪೂಜೆ, ಮಹಾ ಮಂಗಳಾರತಿ, ಮಧ್ಯಾಹ್ನ ಅನ್ನ ಸಂತರ್ಪಣೆ ಕಾರ್ಯಕ್ರಮ, ಸ್ಥಳ: ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಗಾಂಧಿನಗರ.
- **ನಿನಾದ ಯುಕ್ತ ಫೌಂಡೇಷನ್ ಟ್ರಸ್ಟ್ :** ದಾಸ ಸಂಭ್ರಮ ಹರಿದಾಸರ ಪದಗಳ ಗೀತ ಗಾಯನ, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್, ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷ ಡಾ. ನಾಗರಾಜ್ ವಿ. ಬೈರಿ, ಉದ್ಘಾಟನೆ : ಉದ್ಯಮಿ ಡಾ. ಎಂ. ಜಗನ್ನಾಥ್ ಶೆಣೈ, ಅತಿಥಿಗಳು : ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಸಾಹಿತಿ ಡಾ. ಜಯಪ್ಪ ಹೊನ್ನಾಳಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ ಭವನ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ
- **ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ :** ರಂಗ ಮತ್ತು ನೃತ್ಯೋತ್ಸವದ ಸಮಾರೋಪ ಮತ್ತು ಸನ್ಮಾನ ಸಮಾರಂಭ, ಸಮಾರೋಪ ನುಡಿ : ರಂಗಾಯಣ ನಿವೃತ್ತ ಉಪನಿರ್ದೇಶಕ ಮ.ಗು. ಸದಾನಂದಯ್ಯ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸನ್ಮಾನಿತರು : ಸೋಬಾನೆ ಕಲಾವಿದೆ ಶ್ರೀಮತಿ ಮಹಾದೇವಮ್ಮ, ಜನಪದ ಹಾಡುಗಾರರಾದ ಶ್ರೀಮತಿ ಮಹಾದೇವಮ್ಮ ಮತ್ತು ತಂಡ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕರಾದ ಪ್ರೊ.ವಿಜಯಲಕ್ಷ್ಮಿ ಮನಾಪುರ, ಸ್ಥಳ: ಶ್ರೀರಂಗ ವೇದಿಕೆ, ರಂಗಾಯಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಡಾ. ಪಿ. ಎಸ್. ಮುರಳೀಧರ್, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.05 ಗರ್ಭಕಂಠದ ಕ್ಯಾನ್ಸರ್ ಕುರಿತು ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಡಾ. ಕೆ.ಜೆ. ಏಸುದಾಸ್ – ಹಾಡುಗಾರಿಕೆ, 11.00 ಸುತ್ತ ಮುತ್ತ, ಪ್ರಸ್ತುತಿ–ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ ಹಾಗೂ ಅರ್ಚನಾ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ತನುಶ್ರೀ .ಆರ್, 12.45 ಚಿತ್ರಗೀತೆಗಳು, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ICC T20 ಪುರುಷರ ವಿಶ್ವಕಪ್ ಪಂದ್ಯಾವಳಿ–2026 ಭಾರತ ಹಾಗೂ ನಮೀಬಿಯಾ ತಂಡಗಳ ನಡುವೆ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುವ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 6.50 ಕೃಷಿರಂಗ, ಹಣ್ಣು–ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಮಾಗಿ ಉಳುಮೆ ಪ್ರಾಮುಖ್ಯತೆ ಕುರಿತ ನೇರ ಫೋನ್–ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ–ಕೃಷಿ ಇಲಾಖೆಯ ಉಪನಿರ್ದೇಶಕರಾದ ಡಾ. ಜಿ.ಎಚ್. ಯೋಗೀಶ್ ಮತ್ತು ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ.ಕೆ. ರಾಮೇಗೌಡ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ICC T20 ಪುರುಷರ ವಿಶ್ವಕಪ್ ಪಂದ್ಯಾವಳಿ ವೀಕ್ಷಕ ವಿವರಣೆ ಮುಂದುವರಿಯುತ್ತದೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ


ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 12 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 294 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಸಿದ್ದರಾಮಯ್ಯ ಮಾತಿನಂತೆ ನಡೆಯುವ ಭರವಸೆ ಇವತ್ತಿಗೂ ಇದೆ

- ಡಿ.ಕೆ.ಶಿವಕುಮಾರ್ ಸಹೋದರ, ಮಾಜಿ ಸಂಸದ ಡಿ.ಕೆ. ಸುರೇಶ್ ವಿಶ್ವಾಸ
- ಪಕ್ಷದ ಕಚೇರಿಯ ಕಸ ಗುಡಿಸಿ, ಬಾವುಟ ಕಟ್ಟಿದವರಿಗಿಂತ ಹೊರಗಿನಿಂದ ಬಂದವರಿಗೇ ಅಧಿಕಾರ ನೀಡಿ ಗೌರವಿಸುವುದೇ ಕಾಂಗ್ರೆಸ್ ಆದ್ಯತೆ ಆಗಿದೆ!: ಪರೋಕ್ಷ ಟಾಂಗ್

ಬೆಂಗಳೂರು, ಫೆ.11(ಕೆಎಂಶಿ)– ಅಧಿಕಾರ ಹಂಚಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆಯುತ್ತಾರೆ ಎಂಬ ಭರವಸೆ ನನಗೆ ಇವತ್ತಿಗೂ ಇದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ ಸುರೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಾನು ಹಾಗೂ ಸಿದ್ದರಾಮಯ್ಯ ಕದ್ದು ಮುಚ್ಚಿ ಮಾತನಾಡಿಕೊಂಡಿಲ್ಲ ಎಂಬುದಾಗಿ ಶಿವಕುಮಾರ್ ಹೇಳಿದ್ದು, ಅದರ ಬಗ್ಗೆ ನನ್ನನ್ನು ಕೇಳಿದರೆ, ನಾನು ಏನು ಹೇಳಲಿ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ.

ಅನ್ಯರಿಗೆ ಆದ್ಯತೆ: ಪಕ್ಷದ ಕಚೇರಿ ಕಸ ಗುಡಿಸಿ, ಬಾವುಟ ಕಟ್ಟಿದವರಿಗಿಂತ ಹೊರಗಿನಿಂದ ಬಂದವರಿಗೆ ಅಧಿಕಾರ ನೀಡಿ ಗೌರವಿಸುವುದೇ ಕಾಂಗ್ರೆಸ್‌ನಲ್ಲಿ ಆದ್ಯತೆ ಆಗಿದೆ ಎಂದು ಡಿ.ಕೆ.ಸುರೇಶ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇದೇ ವೇಳೆ ಪರೋಕ್ಷ ಟಾಂಗ್ ನೀಡಿದ್ದಾರೆ.


ಡಿ.ಕೆ. ಸುರೇಶ್

ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್‌ನ ಗುರಿ. ಪಕ್ಷ ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಬಿಜೆಪಿ, ಜನತಾದಳ, ಬಿಎಸ್‌ಪಿ ಸೇರಿದಂತೆ ಎಲ್ಲ ಪಕ್ಷದಿಂದ ಬಂದವರೂ ಇದ್ದಾರೆ. ನಮ್ಮಲ್ಲಿ ಮೊದಲ ಆದ್ಯತೆ ಅವರಿಗೆ, ಆಮೇಲೆ ಕಾಂಗ್ರೆಸ್ಸಿಗರಿಗೆ ಎಂದು ಕುಟುಕಿದ್ದಾರೆ. ■ 6ನೇ ಪುಟಕ್ಕೆ

ನಾಯಕತ್ವ ಬದಲಾವಣೆ ಬಗ್ಗೆ ಪದೇ ಪದೆ ಕೇಳಬಾರದು...!

ಬೆಂಗಳೂರು, ಫೆ. 11(ಕೆಎಂಶಿ)– ನಾಯಕತ್ವ ಬದಲಾವಣೆ ಬಗ್ಗೆ ಪದೇ ಪದೆ ಕೇಳಬಾರದು, ಈ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಿದರೆ ಅದರಂತೆ ನಾನು ಮತ್ತು ಉಪಮುಖ್ಯಮಂತ್ರಿ ಇಬ್ಬರೂ ನಡೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಗರಂ ಆಗಿ ನುಡಿದಿದ್ದಾರೆ.



ಸುದ್ದಿಗಾರರು ಕೇಳಿದ ಪ್ರಶ್ನೆಗೆ, ಅದು ಬಿಟ್ಟು ಬೇರೆ ಏನಿಲ್ಲವಾ, ಅದನ್ನೇ ಏಕೆ ಕೇಳುತ್ತೀರಾ ಎಂದು ಸಿಟ್ಟಾಗಿ ನುಡಿದರು. ಕೊಟ್ಟ ಮಾತಿನ ಬಗ್ಗೆ ಕೇಳಿದಾಗ, ಅದನ್ನು ಯಾರು ಹೇಳಿದರೋ ಅವರನ್ನೇ ಕೇಳಿ ಎಂದು ಖಾರವಾಗಿಯೇ ನುಡಿದಿದ್ದಾರೆ. 2026–27ನೇ ರಾಜ್ಯ ಆಯವ್ಯಯ ಮಂಡನೆ ದಿನಾಂಕವನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದು ಇಂದಿಲ್ಲಿ ತಿಳಿಸಿದ್ದಾರೆ.

ಬಜೆಟ್ ಸಿದ್ಧತೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳೊಂದಿಗೆ ಸಭೆಗಳನ್ನು ನಡೆಸಲಾಗುತ್ತಿದೆ. ಕಾಂಗ್ರೆಸ್ ಶಾಸಕರು ವಿದೇಶ ಪ್ರವಾಸ ಕೈಗೊಳ್ಳುತ್ತಿರುವ ಕುರಿತು ಪ್ರತಿಕ್ರಿಯಿಸಿ, ಎಂಎಲ್‌ಎ ಮತ್ತು ಎಂಎಲ್‌ಸಿಗಳು ತಮ್ಮ ಸ್ವಂತ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದಾರೆ ಎಂದರು.

'ಜನಗಣಮನ'ಕ್ಕೂ ಮುನ್ನ 'ವಂದೇ ಮಾತರಂ' ಕಡ್ಡಾಯ

ಕಾಂಗ್ರೆಸ್ ಕೈಬಿಟ್ಟಿದ್ದ ಚರಣಗಳ ಮರುಸೇರ್ಪಡೆ, ಹಾಡುವಾಗ ಎದ್ದು ನಿಲ್ಲದಿದ್ದರೆ ಶಿಕ್ಷೆ–ದಂಡಕ್ಕೆ ಅರ್ಹ

ನವದೆಹಲಿ, ಫೆ.11– 'ಜನಗಣಮನ'ಕ್ಕೂ ಮುನ್ನ 'ವಂದೇ ಮಾತರಂ' ಹಾಡುವುದನ್ನು ಕೇಂದ್ರ ಸರ್ಕಾರ ಕಡ್ಡಾಯ ಮಾಡಿದ್ದು, 1937ರಲ್ಲಿ ಕಾಂಗ್ರೆಸ್ ಕೈಬಿಟ್ಟಿದ್ದ ಚರಣಗಳ ಮರು ಸೇರ್ಪಡೆಗೊಳಿಸಿದೆ. 'ವಂದೇ ಮಾತರಂ' ಗೀತೆ ಕುರಿತು ಕೇಂದ್ರ ಗೃಹ ಸಚಿವಾಲಯವು ಹೊಸ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ರಾಷ್ಟ್ರಗೀತೆ 'ಜನ ಗಣ ಮನ' ಹಾಡುವಾಗ ಪಾಲಿಸುವ ಶಿಷ್ಟಾಚಾರಗಳನ್ನು 'ವಂದೇ ಮಾತರಂ'ಗೂ ಕಡ್ಡಾಯಗೊಳಿಸಿದೆ.

'ವಂದೇ ಮಾತರಂ' ಗೀತೆ ಪ್ರಸಾರವಾಗುವಾಗ ಅಥವಾ ಹಾಡುವಾಗ ಪ್ರತಿಯೊಬ್ಬರೂ ಎದ್ದು ನಿಂತು ಗೌರವ ಸೂಚಿಸುವುದು ಕಡ್ಡಾಯವಾಗಿದೆ. ಎಲ್ಲಾ ಸರ್ಕಾರಿ ಸಮಾರಂಭಗಳು ಮತ್ತು ಶಾಲೆಗಳಲ್ಲಿ 'ಜನ ಗಣ ಮನ' ಹಾಡಿದ ತಕ್ಷಣವೇ 'ವಂದೇ ಮಾತರಂ' ಗೀತೆಯನ್ನು ಹಾಡಬೇಕೆಂದು ತಿಳಿಸಲಾಗಿದೆ.

ಆದೇಶದ ಪ್ರಕಾರ, ರಾಷ್ಟ್ರಗೀತೆಗೂ ಮುನ್ನ ವಂದೇ ಮಾತರಂನ 6 ಚರಣಗಳನ್ನು ಹಾಡಬೇಕು. ಹಾಗೆಯೇ ಗೀತೆಯನ್ನು ನುಡಿಸಿದರೆ ಅಥವಾ ಹಾಡಿದರೆ ಎಲ್ಲರೂ ಕಡ್ಡಾಯವಾಗಿ ಎದ್ದು ನಿಲ್ಲಬೇಕು. ಆರು ಚರಣಗಳನ್ನು ವಂದೇ ಮಾತರಂ ಗೀತೆಯ 3.10 ನಿಮಿಷಗಳ ಗೀತೆಯನ್ನು ನುಡಿಸಬೇಕು ಅಥವಾ ಹಾಡಬೇಕು. ಇದರಲ್ಲಿ ತ್ರಿವರ್ಣ ಧ್ವಜ ಹಾರಿಸುವಾಗ, ಸರ್ಕಾರಿ ಕಾರ್ಯಕ್ರಮಗಳಿಗೆ ರಾಷ್ಟ್ರಪತಿಗಳ ಆಗಮನದ ಸಮಯದಲ್ಲಿ, ಅವರ ಭಾಷಣಗಳು ಮತ್ತು ರಾಷ್ಟ್ರವನ್ನುದ್ದೇಶಿಸಿ ■ 6ನೇ ಪುಟಕ್ಕೆ

ದೇಶಭಕ್ತಿ ಗೀತೆ 'ವಂದೇ ಮಾತರಂ'

ದೇಶಭಕ್ತಿ ಗೀತೆಯಾಗಿರುವ ವಂದೇ ಮಾತರಂ ಗೀತೆಯನ್ನು ಬಂಕಿಮ್ ಚಂದ್ರ ಅವರು 1875ರಲ್ಲಿ ರಚಿಸಿದ್ದು, ಇದರ ಹಿಂದೆ ಒಂದು ಕುತೂಹಲಕಾರಿ ಕಥೆ ಇದೆ. ಬ್ರಿಟಿಷ್ ಆಡಳಿತಗಾರರು ಪ್ರತಿ ಸಮಾರಂಭದಲ್ಲಿ ಇಂಗ್ಲೆಂಡ್ ರಾಣಿಗೆ ಗೌರವ ಸಲ್ಲಿಸುವ ಸೇವ್ ದಿ ಕ್ವೀನ್ ಎಂಬ ಹಾಡನ್ನು ಹಾಡುವುದನ್ನು ಕಡ್ಡಾಯಗೊಳಿಸಿದ್ದರು. ಇದು ಬಂಕಿಮ್ ಚಂದ್ರ ಸೇರಿದಂತೆ ಅನೇಕ ದೇಶವಾಸಿಗಳನ್ನು ಕೆರಳಿಸಿತು. ಇದಕ್ಕೆ ಪ್ರತಿಕ್ರಿಯೆಯಾಗಿ, ಅವರು 1874ರಲ್ಲಿ ವಂದೇ ಮಾತರಂ ಎಂಬ ಹಾಡನ್ನು ರಚಿಸಿದರು. ಈ ಹಾಡಿನ ಪ್ರಮುಖ ವಿಷಯವೆಂದರೆ ಭಾರತದ ಭೂಮಿಯನ್ನು ತಾಯಿ ಎಂದು ಸಂಬೋಧಿಸುವುದು.


ಬಂಕಿಮ್ ಚಂದ್ರ

ಈ ಹಾಡನ್ನು ನಂತರ ಅವರ 1882ರ ಕಾದಂಬರಿ ಆನಂದಮಠದಲ್ಲಿ ಸೇರಿಸಲಾಯಿತು. ಐತಿಹಾಸಿಕ ಮತ್ತು ಸಾಮಾಜಿಕ ರಚನೆಗಳಿಂದ ಹೆಣೆಯಲಾದ ಈ ಕಾದಂಬರಿಯು ದೇಶದಲ್ಲಿ ರಾಷ್ಟ್ರೀಯತೆಯ ಚೈತನ್ಯವನ್ನು ಜಾಗೃತಗೊಳಿಸಲು ಗಮನಾರ್ಹ ಕೊಡುಗೆ ನೀಡಿತು.

ವಂದೇ ಮಾತರಂ ಅನ್ನು ಮೊದಲ ಬಾರಿಗೆ ಹಾಡಿದ್ದು 1896ರಲ್ಲಿ, ಕೋಲ್ಕತ್ತಾದಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಮೊದಲ ■ 6ನೇ ಪುಟಕ್ಕೆ

ಹಿರಿಯ ನಟಿ ಸುಧಾರಾಣಿ 'ನಂದಿನಿ' ರಾಯಭಾರಿ

ಬೆಂಗಳೂರು, ಫೆ.11– ರಾಜ್ಯದ ಹೆಮ್ಮೆಯ ಬ್ರ್ಯಾಂಡ್ 'ನಂದಿನಿ' ಉತ್ಪನ್ನಗಳ ನೂತನ ಪ್ರಚಾರ ರಾಯಭಾರಿಯನ್ನಾಗಿ ಹಿರಿಯ ನಟಿ ಸುಧಾರಾಣಿ ಅವರನ್ನು ನೇಮಿಸಲಾಗಿದೆ.



ಈ ಬಗ್ಗೆ ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿದ್ದಾರೆ. ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟದ ಪ್ರಮುಖ ಭಾಗವಾದ ಬೆಂಗಳೂರು ಹಾಲು ಒಕ್ಕೂಟ ನಟಿ ಸುಧಾರಾಣಿ ಅವರನ್ನು ನಂದಿನಿ ಉತ್ಪನ್ನಗಳ ನೂತನ ಪ್ರಚಾರದ ರಾಯಭಾರಿಯನ್ನಾಗಿ ನೇಮಿಸಲಾದ ಬಗ್ಗೆ ಅಧಿಕೃತವಾಗಿ ಘೋಷಿಸಿದೆ.

ನಂದಿನಿ ಉತ್ಪನ್ನಗಳಿಗೆ ಪ್ರಚಾರ ರಾಯಭಾರಿಯಾಗಿ ಶ್ರೀಮತಿ ಸುಧಾರಾಣಿ ಅವರು ಆಯ್ಕೆಯಾಗಿದ್ದು, ಬಮೂಲ್ ಕುಟುಂಬಕ್ಕೆ ಅವರನ್ನು ಪ್ರೀತಿಯಿಂದ ಸ್ವಾಗತಿಸುತ್ತೇವೆ ಎಂದು ಡಿ.ಕೆ.ಸುರೇಶ್ ಅವರು ಬರೆದುಕೊಂಡಿದ್ದಾರೆ.

ಶಾಲಾ ಬಸ್ ಹರಿದು ತಂದೆಯ ಕಣ್ಣೆದುರೇ ವಿಲವಿಲ ಒದ್ದಾಡಿ ಪ್ರಾಣಬಿಟ್ಟ ಕಂದಮ್ಮಗಳು...!

ಬೆಂಗಳೂರು, ಫೆ.11– ಬೆಂಗಳೂರಿನಲ್ಲಿ ಬೈಕ್‌ಗೆ ಶಾಲಾ ಬಸ್‌ವೊಂದು ಡಿಕ್ಕಿ ಹೊಡೆದಿದ್ದರಿಂದ ಕೆಳಗೆ ಬಿದ್ದ ಮಕ್ಕಳ ಮೇಲೆ ಬಸ್ ಹರಿದ ಪರಿಣಾಮ ಇಬ್ಬರು ಮಕ್ಕಳು ಸ್ಥಳದಲ್ಲೇ ಸಾವನ್ನಪ್ಪಿರುವ ದಾರುಣ ಘಟನೆ ಬೆಂಗಳೂರಿನಲ್ಲಿ ನಡೆದಿದೆ.



ಮೃತ ಮಕ್ಕಳನ್ನು 2 ವರ್ಷದ ವರ್ಷಾ ಹಾಗೂ 4 ವರ್ಷದ ಭಾನು ಎಂದು ಗುರುತಿಸಲಾಗಿದೆ. ಹೆಣ್ಣೂರು ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯ ಥಣಿಸಂದ್ರದ ಪೊಲೀಸ್ ಕ್ವಾರ್ಟರ್ಸ್ ಬಳಿ ಪೊಲೀಸ್ ಪೇದೆ ನಾಗನಗೌಡ ತನ್ನ ಮಗಳು ■ 6ನೇ ಪುಟಕ್ಕೆ

ಬಿಲ್ ಹಣಕ್ಕೆ ಈಗ ಡಬಲ್ ಕಮಿಷನ್; ಮಧ್ಯವರ್ತಿಗಳಂತೂ ಜಾಸ್ತಿ ಇದ್ದಾರೆ!

- ರಾಜ್ಯ ಗುತ್ತಿಗೆದಾರರ ಸಂಘದ ಗಂಭೀರ ಆರೋಪ
- ಬಾಕಿ 37 ಸಾವಿರ ಕೋಟಿ ಗುತ್ತಿಗೆ ಹಣ ಬಿಡುಗಡೆಗೆ ಆಗ್ರಹಿಸಿ ಮಾ.5ರಂದು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಬಾರೀ ಪ್ರತಿಭಟನೆ
- ಅಂದಿನಿಂದಲೇ ರಾಜ್ಯಾದ್ಯಂತ ಎಲ್ಲಾ ಕಾಮಗಾರಿ ಸ್ಥಗಿತ

ಮೈಸೂರು, ಫೆ.11(ಪಿಎಂ)– ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿರುವ 37 ಸಾವಿರ ಕೋಟಿ ಗುತ್ತಿಗೆ ಹಣ ಬಿಡುಗಡೆಗೆ ಆಗ್ರಹಿಸಿ ಮಾ.5ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ರಾಜ್ಯಾದ್ಯಂತ ಚಾಲ್ತಿಯಲ್ಲಿರುವ ಸರ್ಕಾರದ ಎಲ್ಲಾ ಕಾಮಗಾರಿಗಳನ್ನು ಸ್ಥಗಿತಗೊಳಿಸಿ, ಸುಮಾರು 30 ಸಾವಿರ ಗುತ್ತಿಗೆದಾರರು ಅಂದು ಪ್ರತಿಭಟನೆ ನಡೆಸಲಿದ್ದು, ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಹೋರಾಟ ಮುಂದುವರೆಯಲಿದೆ.

ಮೈಸೂರಿನ ಬೋಗಾದಿ ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಈ ವಿಷಯ ತಿಳಿಸಿದರು. ನಮ್ಮ ಸಂಘದಲ್ಲಿ ಇಡೀ ರಾಜ್ಯದಲ್ಲಿ 1 ಲಕ್ಷದ 30 ಸಾವಿರ ಗುತ್ತಿಗೆದಾರರು ಇದ್ದೇವೆ. ಎಲ್ಲಾ ಇಲಾಖೆಗಳು ■ 6ನೇ ಪುಟಕ್ಕೆ


ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಮಾತನಾಡಿದರು.

ಪರ್ಸೆಂಟೇಜ್ ಎಂದು ಹೇಳುವ ತಪ್ಪು ಮಾಡೋಲ್ಲ; ಹಿಂದಿಗಿಂತ ಈಗ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ!

ಮೈಸೂರು,ಫೆ.11(ಪಿಎಂ)– ಬಾಕಿ ಬಿಲ್ ಸಂಬಂಧ 37 ಸಾವಿರ ಕೋಟಿಯಲ್ಲಿ ಹಿಂದಿನ ಸರ್ಕಾರ, ಈಗಿನ ಸರ್ಕಾರದ್ದು ಎಷ್ಟು ಇದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ್ ಹಿಂದಿನ ಸರ್ಕಾರದ ಅವಧಿಯಲ್ಲಿ 52 ಸಾವಿರ ಕೋಟಿ ಬಿಲ್ ಬಾಕಿ ಇತ್ತು. ಹಂತ ಹಂತವಾಗಿ ಬಿಡುಗಡೆಯಾಗಿ ಈಗ 37 ಸಾವಿರ ಕೋಟಿ ಬಾಕಿ ಉಳಿದಿದೆ. ಹಿಂದಿನ ಸರ್ಕಾರ, ಈಗಿನ ಸರ್ಕಾರ ಎರಡೂ ಸೇರಿದಂತೆ 37 ಸಾವಿರ ಕೋಟಿ ಇದ್ದು, ಅದನ್ನು ವಿಭಾಗ ಮಾಡಲಾಗದು ಎಂದರು.

ಪರ್ಸೆಂಟೇಜ್ ಎಂದು ಹೇಳುವ ತಪ್ಪು ಮಾಡೋಲ್ಲ: ಹಿಂದಿನ ಸರ್ಕಾರದಲ್ಲಿ 40 ಪರ್ಸೆಂಟ್ ಕಮಿಷನ್ ಆರೋಪ ಇತ್ತು. ಈಗಿನ ಸರ್ಕಾರದಲ್ಲಿ ಇನ್ನು ಜಾಸ್ತಿ ಎಂದು ನಿಮ್ಮವರೇ ಆರೋಪಿಸುತ್ತಿದ್ದಾರೆ ಎಂಬುದಕ್ಕೆ ಉತ್ತರಿಸಿದ ಅವರು, ಪರ್ಸೆಂಟೇಜ್ ಎಂದು ಹೇಳುವ ಮೂಲಕ ಹಿಂದಿನ ಅಧ್ಯಕ್ಷರು ತಪ್ಪು ಮಾಡಿದ್ದಾರೆ. ನಾವು ಈಗ 40, 50 ಪರ್ಸೆಂಟ್ ಎಂದು ಹೇಳುವ ತಪ್ಪು ಮಾಡುವುದಿಲ್ಲ. ಏಕೆಂದರೆ ಒಮ್ಮೆ ಅನುಭವಿಸಿದ್ದೇವೆ. ಇನ್ನೊಮ್ಮೆ ಆ ತಪ್ಪು ಆಗಬಾರದು. ಹಣ ಬಿಡುಗಡೆ ವಿಚಾರದಲ್ಲಿ ಹಿಂದಿನ ಸರ್ಕಾರಕ್ಕಿಂತ ಈ ಸರ್ಕಾರದಲ್ಲಿ ಹೆಚ್ಚು ತೆಗೆದುಕೊಳ್ಳುತ್ತಿದ್ದಾರೆ ಎಂದು ದೂರಿದರು.

ಹಿಂದಿನ ಸರ್ಕಾರದ 40 ಪರ್ಸೆಂಟ್ ಕಮಿಷನ್ ಸಂಬಂಧ ನ್ಯಾ.ನಾಗಮೋಹನ್‌ದಾಸ್ ತನಿಖೆ ಮಾಡಿದ್ದರು. ಯಾವುದನ್ನು ಸಾಬೀತು ಮಾಡಲು ಆಗಲೇ ಇಲ್ಲ. ಲಂಚ ಕೊಡುವುದಕ್ಕೆ ಸಾಕ್ಷ್ಯ ಕೊಡಲಾಗುತ್ತದೆಯೆ ■ 6ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ನೀರ ಬಿಟ್ಟು ನೆಲದ ಮೇಲೆ ದೋಣಿ ಸಾಗದು.
ಅದೇ ರೀತಿ ಇನ್ನೊಂದು ಉದಾಹರಣೆ ಕೊಡು ತಿಮ್ಮ.
ಮರಿತಿಮ್ಮ : ಎಣ್ಣೆ ಬಿಟ್ಟು ನೀರಿನಲ್ಲಿ ಬೋಂಡ ಬೇಯದು!

ಮೈಸೂರು ಮಿತ್ರ

ಗುರುವಾರ, ಫೆಬ್ರವರಿ 12, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ನಿಮಗಾಗಿ ಮಾಡಿಕೊಂಡ ಕೆಲಸಗಳು ನಿಮ್ಮೊಂದಿಗೆ ಮುಗಿದು ಹೋಗಿ ಬಿಡುತ್ತವೆ. ಆದರೆ ಇತರರಿಗಾಗಿ ಮಾಡಿದ ಕೆಲಸಗಳು ನಿಮ್ಮ ನಂತರವೂ ಉಳಿದಿರುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು	ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯೋದೆಲ್ಲ ಚಿನ್ನ ಅಲ್ಲ.

ನಿಮ್ಮ ಪತ್ರಗಳು

ಭಾರತೀಯ ರಿಸರ್ವ್ ಬ್ಯಾಂಕಿನ ಕ್ರಮ ಸ್ವಾಗತಾರ್ಹ

ಮಾನ್ಯರೆ,

ಸೈಬರ್ ವಂಚನೆಯ ಸಂತ್ರಸ್ತರಿಗೆ ಗರಿಷ್ಠ ರೂ. 25,000 ಪರಿಹಾರ ನೀಡುವುದಾಗಿ ಭಾರತದ ರಿಸರ್ವ್ ಬ್ಯಾಂಕ್ ಪ್ರಕಟಿಸಿರುವುದು ಸ್ವಾಗತಾರ್ಹವಾಗಿದೆ. ಅದರೆ, ಅನೇಕ ಸಂದರ್ಭಗಳಲ್ಲಿ ಕಳೆದುಕೊಂಡ ಮೊತ್ತ ಹಲವಾರು ಲಕ್ಷಗಳನ್ನು ಮೀರುತ್ತಿರುವುದರಿಂದ ಆರ್‌ಬಿಐ ನೀಡುವ ಪರಿಹಾರ 'ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಅನ್ನುವ ಹಾಗಿದೆ. ಆದರೂ ಸಹಾ ಇದೊಂದು ಒಳ್ಳೆಯ ಉಪಕ್ರಮವಾಗಿದ್ದು, ಮುಂದಿನ ದಿನಗಳಲ್ಲಿ ಈ ಪರಿಹಾರದ ಮೊತ್ತ ಹೆಚ್ಚಾಗುವ ಸಾಧ್ಯತೆಯಿದೆ. ದೇಶಾದ್ಯಂತ ಸೈಬರ್ ವಂಚನೆ ದಿನೇ ದಿನೆ ಹೆಚ್ಚುತ್ತಿದ್ದು ಹಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಕೂಡ ಹೆಚ್ಚುತ್ತಿದೆ. ಅಮಾಯಕರನ್ನು 'ಡಿಜಿಟಲ್ ಅರೆಸ್ಟ್' ಮೂಲಕ ತಮ್ಮ ಬಲೆಗೆ ಕೆಡವಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಲಪಟಾಯಿಸುವ ವಂಚಕರ ಜಾಲ ಇಡೀ ದೇಶಾದ್ಯಂತ ಹರಡಿರುವುದು ಅತ್ಯಂತ ಕಳವಳಕಾರಿಯಾದ ವಿಚಾರವಾಗಿದೆ.

ಇದರ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಕೂಡ ತೀವ್ರ ಕಳವಳ ವ್ಯಕ್ತಪಡಿಸಿ, ಡಿಜಿಟಲ್ ಅರೆಸ್ಟ್ ಪ್ರಕರಣಗಳ ಸಂಬಂಧ ಸಕಾಲಿಕ ಕ್ರಮ ಕೈಗೊಳ್ಳುವಂತೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಇತರ ಬ್ಯಾಂಕುಗಳಿಗೆ ಇತ್ತೀಚೆಗೆ ನಿರ್ದೇಶನ ನೀಡಿದೆ. ಡಿಜಿಟಲ್ ವಂಚನೆಗಳಿಂದ ದೇಶಾದ್ಯಂತ 54 ಸಾವಿರ ಕೋಟಿಗಳಿಗಿಂತ ಅಧಿಕ ಹಣ ದೋಚಿರುವುದನ್ನು ಸಂಪೂರ್ಣ ದರೋಡೆ ಅಥವಾ ಡಕಾಯಿತಿ ಪ್ರಕರಣವೆಂದು ಹೇಳಿರುವ ಸುಪ್ರೀಂ ಕೋರ್ಟ್ ಭವಿಷ್ಯದಲ್ಲಿ ಇಂತಹ ಪ್ರಕರಣಗಳನ್ನು ತಡೆಯಲು ಮಾರ್ಗೋಪಾಯಗಳನ್ನು ಸೂಚಿಸುವುದಕ್ಕೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಿದೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಗಳು ತುರ್ತು ಕ್ರಮ ತೆಗೆದುಕೊಳ್ಳುವುದು ತೀರಾ ಅಗತ್ಯವಾಗಿದೆ. ಅದೇ ರೀತಿ ಸಾರ್ವಜನಿಕರು, ಇಂತಹ ಸೈಬರ್ ವಂಚನೆಯ ಬಗ್ಗೆ ಸಾಕಷ್ಟು ಜಾಗೃತರಾಗಿರುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಜನರ ನಿರೀಕ್ಷೆಗಳಿಗೆ ದೂರವಾಗುತ್ತಿರುವ ಶಾಸನ ಸಭೆಗಳು

ಮಾನ್ಯರೆ,

ಲೋಕಸಭೆ ಮತ್ತು ವಿಧಾನಸಭೆಗಳು ಜನರ ಸಮಸ್ಯೆಗಳನ್ನು ಚರ್ಚಿಸಲು, ನೀತಿಗಳನ್ನು ರೂಪಿಸಲು ಹಾಗೂ ದೇಶ, ರಾಜ್ಯದ ಅಭಿವೃದ್ಧಿಗೆ ದಿಕ್ಕು ನೀಡಲು ಈ ಸದನಗಳನ್ನು ಸ್ಥಾಪಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಾಸನಸಭೆಗಳ ಕಾರ್ಯವೈಖರಿ ಜನರ ನಿರೀಕ್ಷೆಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿ ಸಾಗುತ್ತಿರುವುದು ಬೇಸರದ ಸಂಗತಿಯಾಗಿದೆ.

ಎಲ್ಲ ರಾಜಕೀಯ ಪಕ್ಷಗಳ ಸದಸ್ಯರು ಅಭಿವೃದ್ಧಿ, ಆಡಳಿತ, ಉದ್ಯೋಗ, ಆರೋಗ್ಯ, ಶಿಕ್ಷಣ, ರೈತರ ಸಮಸ್ಯೆಗಳು, ಬಡತನ ನಿವಾರಣೆ ಮುಂತಾದ ಮೂಲಭೂತ ವಿಚಾರಗಳ ಬಗ್ಗೆ ಚರ್ಚೆ ನಡೆಸಬೇಕಾದ ಸಮಯದಲ್ಲಿ, ವೈಯಕ್ತಿಕ ವ್ಯಕ್ತಿಗಳ ವಿರುದ್ಧದ ಆರೋಪಗಳು ಮತ್ತು ರಾಜಕೀಯ ಪಕ್ಷಗಳ ನಡುವಿನ ಭ್ರಷ್ಟಾಚಾರ ಆರೋಪಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು, ಸದನಗಳು ಜನಸೇವೆಯ ಕೇಂದ್ರಗಳಾಗುವ ಬದಲು ಆರೋಪ, ಪ್ರತ್ಯಾರೋಪಗಳ ವೇದಿಕೆಯಾಗಿವೆ.

ಭ್ರಷ್ಟಾಚಾರ ಕುರಿತ ಚರ್ಚೆಗಳು ಅಗತ್ಯವಾದರೂ ಅದಕ್ಕೆ ಪ್ರಾಮುಖ್ಯತೆ ನೀಡಿ ಸದನದ ಸಮಯವನ್ನು ವ್ಯರ್ಥ ಮಾಡುವುದು ಸದನವನ್ನು ಬಹಿಷ್ಕಾರ ಅಥವಾ ಮುಂದೂಡುತ್ತಲೇ ಇದ್ದರೆ ಜನತೆಗೆ ಯಾವುದೇ ಪ್ರಯೋಜನ ನೀಡುವುದಿಲ್ಲ. ವೈಯಕ್ತಿಕ ದ್ವೇಷ, ರಾಜಕೀಯ ಪ್ರತಿಷ್ಠೆ, ಅಸಭ್ಯ ವರ್ತನೆ, ಹಾಗೂ ಅವಾಚ್ಯ ಶಬ್ದಗಳಲ್ಲಿ ನಿಂದನೆಯಿಂದ ಶಾಸನಸಭೆಗಳ ಗೌರವ ಮತ್ತು ಪ್ರಾಮುಖ್ಯತೆ ಕುಸಿಯುತ್ತಿದೆ. ಇದರ ಪರಿಣಾಮವಾಗಿ ಅಮೂಲ್ಯವಾದ ಸಾರ್ವಜನಿಕ ಹಣ ಹಾಗೂ ಸಮಯ ವ್ಯರ್ಥವಾಗುತ್ತಿದೆ.

ದಯವಿಟ್ಟು ಎಲ್ಲಾ ಜನಪ್ರತಿನಿಧಿಗಳು ಪಕ್ಷಭೇದವಿಲ್ಲದೆ ತಮ್ಮ ಜವಾಬ್ದಾರಿಯನ್ನು ಅರಿತು, ಸದನದ ಗೌರವವನ್ನು ಕಾಪಾಡುತ್ತಾ ತುರ್ತು ಅಗತ್ಯವಿರುವ ಜನರ ಸಮಸ್ಯೆಗಳೇ ಚರ್ಚೆಯ ಕೇಂದ್ರಬಿಂದುವಾಗಬೇಕು.

–ವಿನೋದ್ ಶಂಕರ್, ಅವಿಯಾನ ಫೌಂಡೇಶನ್, ಮೈಸೂರು

ಕೊರಿಯನ್ ಆಟ ಬಲ್ಲವರ್ಯಾರು

ಮಾನ್ಯರೆ,

ಗಾಜಿಯಾಬಾದ್‌ನಲ್ಲಿ ಮೂವರು ಸಹೋದರಿಯರು 'ಕೊರಿಯನ್ ಲವರ್ ಗೇಮ್' ಎಂಬ ಆನ್‌ಲೈನ್ ಗೇಮ್ ವ್ಯಸನಕ್ಕೆ ಬಿದ್ದು ತಮ್ಮ ಅಮೂಲ್ಯವಾದ ಜೀವವನ್ನೇ ಕಳೆದುಕೊಂಡಿರುವುದು ದುರದೃಷ್ಟಕರ. ಈ ಮೊಬೈಲ್ ಎಂಬ ಮಾಯಾವಿ ಹೀಗೆ ಜೀವನ ಹಾಗೂ ಜೀವ ಎರಡನ್ನೂ ಕಸಿದುಕೊಳ್ಳುವ ಹಂತಕ್ಕೆ ತಲುಪಿರುವುದು ವಿಷಾದನೀಯ. ಇದರಿಂದ ಎಷ್ಟು ಉಪಯೋಗ ಉಂಟೋ ಅದಕ್ಕಿಂತ ಜಾಸ್ತಿ ಅಪಾಯ ಉಂಟು. ಇದನ್ನು ಅರಿತು ಮಿತವಾಗಿ ಬಳಸಿದರೆ ಮಾತ್ರ ಇಂಥಹ ಅನಾಹುತಗಳಿಂದ ಪಾರಾಗಬಹುದು. ಮೊದಲೆಲ್ಲಾ ಮಕ್ಕಳು ಅತ್ತರೆ, ಊಟ ಮಾಡಿಸಲಿಕ್ಕೆ, ಸೂರ್ಯ–ಚಂದ್ರ – ನಕ್ಷತ್ರ ತೋರಿಸುವುದು, ಸಣ್ಣ ಸಣ್ಣ ಕಥೆ ಹೇಳುವುದು,ಜೋಗುಳ ಹಾಡುವುದು ಮಾಡುತ್ತಿದ್ದರು ಪೋಷಕರು. ಇತ್ತೀಚಿನ ಬಿಡುವಿಲ್ಲದೆ ಓಡುವ ದಿನಗಳಲ್ಲಿ ಅಳುವ ಮಕ್ಕಳಿಗೆ ಮೊಬೈಲ್ ಕೊಟ್ಟು ಸಮಾಧಾನ ಮಾಡುವುದು ಸಾಮಾನ್ಯ ಆಗಿದೆ. ಅಲ್ಲಿಂದಲೇ ಮಕ್ಕಳಿಗೆ ಅದರ ವ್ಯಸನ ಆರಂಭವಾಗುತ್ತದೆ. ಶಾಲಾ–ಕಾಲೇಜುಗಳಲ್ಲೂ ಬಹುತೇಕ ಪಾಠಗಳು ಮೊಬೈಲ್ ಮೂಲಕವೇ ನಡೆಯುವುದರಿಂದ ವಿದ್ಯಾರ್ಥಿಗಳಿಗೆ ಇಂದು ಮೊಬೈಲ್ ಅವಶ್ಯಕತೆ ಎಂಬಂತಾಗಿದೆ. ಪೋಷಕರು ಇದರ ಬಗ್ಗೆ ಸ್ವಲ್ಪ ಗಮನಹರಿಸಿ ಮಕ್ಕಳು ಇಂಥಹ ವ್ಯಸನಗಳಿಗೆ ಬೀಳದಂತೆ ಎಚ್ಚರಿಕೆ ವಹಿಸಬೇಕು. ಇಂಥಹ ಜೀವ ತೆಗೆಯುವಂತಹ ಆಟಗಳಿಗೆ ಕಾನೂನಾತ್ಮಕವಾಗಿಯೂ ಕಡಿವಾಣ ಹಾಕಬೇಕಾದ ಅಗತ್ಯ ಇದೆ.

–ರಾಘವೇಂದ್ರ ಜೋಯಿಸ್, ಮೈಸೂರು

ಪತ್ರಿಕಾ ವಿತರಕರ ಬದುಕು ಹಸನಾಗಿಸಿ

ಮಾನ್ಯರೆ,

ಪ್ರತಿ ಮುಂಜಾನೆ ಇಡೀ ಲೋಕವನ್ನೇ ನಮ್ಮ ಕೈಗಿಡುವ ಪತ್ರಿಕಾ ವಿತರಕರು ಅಕ್ಷರಶಃ ಸಮಾಜದ ಅದೃಶ್ಯ ಕಾಯಕಯೋಗಿಗಳು. ಮಳೆ, ಗಾಳಿ, ಚಳಿ ಎನ್ನದೆ ಜ್ಞಾನದೀವಿಗೆ ಹಂಚುವ ಇವರ ಬದುಕು ಇಂದಿಗೂ ಆರ್ಥಿಕ ಅನಿಶ್ಚಿತತೆಯಲ್ಲಿದೆ. ಸರಾಸರಿ 15 ರಿಂದ 20 ಕಿ.ಮೀ ಸೈಕಲ್ ತುಳಿಯುವ ಇವರಿಗೆ ಕನಿಷ್ಠ ಆರೋಗ್ಯ ವಿಮೆಯೂ ಇಲ್ಲದಿರುವುದು ವಿಷಾದನೀಯ. ಕೇವಲ ಎಂಟು ಸಾವಿರ ಮಾಸಿಕ ಆದಾಯದಲ್ಲಿ ಸಂಸಾರ ನಿಭಾಯಿಸುವ ಇವರ ಶ್ರಮಕ್ಕೆ ಬೆಲೆ ಕಟ್ಟಲಾಗದು. ಈ ಹಿನ್ನೆಲೆಯಲ್ಲಿ ಸರ್ಕಾರ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಲಿ. ಇದು ಸರ್ಕಾರದ ನೈತಿಕ ಜವಾಬ್ದಾರಿ ಆಗುತ್ತದೆ. ಈ ನಿಧಿಯು ಅವರ ಮಕ್ಕಳ ಶಿಕ್ಷಣ ಮತ್ತು ತುರ್ತು ಚಿಕಿತ್ಸೆಗೆ ಆಸರೆಯಾಗಬೇಕು ಸರ್ಕಾರವು ಮುಂಬರುವ ಬಜೆಟ್‌ನಲ್ಲಿ ಈ ಶ್ರಮಜೀವಿಗಳಿಗೆ ಭದ್ರತೆ ನೀಡುವ ಮೂಲಕ ಪ್ರಜಾಪ್ರಭುತ್ವದ ಅಡಿಪಾಯವನ್ನು ಗಟ್ಟಿಗೊಳಿಸಲಿ.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಶತಮಾನದ ಹೊಸ್ತಿಲಲ್ಲಿ (ವಿ)ಚಿತ್ರರಂಗ!

ಇದೇ ಮಾರ್ಚ್ ಮೂರಕ್ಕೆ ಕನ್ನಡದ ಮೊದಲ ವಾಕ್ಚಿತ್ರ ಸತಿ ಸುಲೋಚನಾ ಬಿಡುಗಡೆಯಾಗಿ 92 ವರ್ಷಗಳಾಗುತ್ತವೆ! ಬೆಂಗಳೂರಿನ ಮೊದಲ ಚಿತ್ರ ಮಂದಿರ ದೊಡ್ಡಣ್ಣ ಹಾಲ್ (ಪ್ಯಾರಾಮೌಂಟ್)ನಲ್ಲಿ ಬಿಡುಗಡೆಯಾದ ಈ ಚಿತ್ರಕ್ಕೆ ಆ ಕಾಲದಲ್ಲಿ 40000 ರೂ. ಖರ್ಚಾಗಿತ್ತು. ವೈ.ವಿ.ರಾವ್ ಅವರು ನಿರ್ದೇಶಿಸಿದ್ದ ಈ ಚಿತ್ರದ ನಿರ್ಮಾಪಕರು ಚಮನ್ ಲಾಲ್ ಡೂಂಗಾಜಿ. 8 ವಾರಗಳ ಕಾಲ ಪ್ರದರ್ಶನ ಕಂಡಿದ್ದ ಈ ಚಿತ್ರ ಚಂದನವನದ ಸುವರ್ಣಯುಗಕ್ಕೆ ಮುನ್ನುಡಿ ಬರೆಯಿತು.



ಇದಕ್ಕೂ ಮೊದಲೇ ಕನ್ನಡದ ನೆಲದಲ್ಲಿ ಮೂಕಿ ಚಿತ್ರಗಳು ತಯಾರಾಗಿದ್ದವು. ಲಭ್ಯವಿರುವ ಇತಿಹಾಸದ ಪ್ರಕಾರ, 1921ರಲ್ಲಿ ನಿರ್ಮಾಣವಾದ ಮೊದಲ ಮೂಕಿಚಿತ್ರದ ನಿರ್ಮಾಪಕರು ಕಂಠೀರವ ನರಸರಾಜ ಒಡೆಯರ್ ಅವರು! 'ನಿರುಪಮಾ' ಹೆಸರಿನ ಈ ಚಿತ್ರದಲ್ಲಿ ಎ.ವಿ. ವರದಾಚಾರ್ ಅವರು ನಾಯಕ ನಟನಾಗಿ ಕಾಣಿಸಿಕೊಂಡಿದ್ದರು.

ಹಾಗೆ ನೊಡಿದರೆ, 1921–1933ರವರೆಗೆ ಕನ್ನಡ ನೆಲದಲ್ಲಿಯೇ ಹಲವಾರು ಮೂಕಿ ಚಿತ್ರಗಳು ತಯಾರಾಗಿ, ಭಾಷೆಯ ಹಂಗಿಲ್ಲದಿದ್ದುದರಿಂದ ರಾಷ್ಟ್ರಾದ್ಯಂತ ಪ್ರದರ್ಶನಗೊಂಡಿದ್ದವು. ಆರ್.ನಾಗೇಂದ್ರರಾಯರೂ ಹಲವು ಮೂಕಿಚಿತ್ರಗಳಲ್ಲಿ ನಟಿಸಿದ್ದರು. ಬೆಂಗಳೂರಿನ ಸೂರ್ಯ ಫಿಲಮ್ ಕಂಪನಿ ಕೂಡ 40 ಮೂಕಿ ಚಿತ್ರಗಳನ್ನು ನಿರ್ಮಾಣ ಮಾಡಿತ್ತು.

ನಂತರ ನಮ್ಮ ಗುಬ್ಬಿ ವೀರಣ್ಣನವರೂ ಮೂಕಿ ಚಿತ್ರಗಳನ್ನು ನಿರ್ಮಿಸಿದರು. ಹೆಚ್ಚು ಜನರಿಗೆ ಗೊತ್ತಿಲ್ಲದ ಸಂಗತಿ ಎಂದರೆ, 'ದೇವುಡು' ಅವರ ಪ್ರೋತ್ಸಾಹದಿಂದ ಈ ಕ್ಷೇತ್ರಕ್ಕೆ ಬಂದ ವೀರಣ್ಣನವರು ದೇವುಡು ಅವರ ಕೃತಿಗಳನ್ನು ಆಧರಿಸಿಯೇ ಎರಡು ಚಿತ್ರಗಳನ್ನು ತಯಾರಿಸಿದ್ದು! ದೇವುಡು ಅವರ 'ಕಳ್ಳರ ಕೂಟ' ನಾಟಕ ಆಧರಿಸಿ ಹಿಸ್ ಲವ್ ಅಫೇರ್ (1930) ಮತ್ತು ಅವರ ಕತೆಯೊಂದನ್ನು ಆಧರಿಸಿ ಸಾಂಗ್ ಆಫ್ ಲೈಫ್ ಅನ್ನು 1931ರಲ್ಲಿ ನಿರ್ಮಿಸಿದರು.

ಮೂಕಿ ಚಿತ್ರಗಳ ಕಾಲದ ಸೂಪರ್ ಹಿಟ್ ಚಿತ್ರ ಎನ್ನಬಹುದಾದ 'ವಸಂತಸೇನಾ' 1925ರಲ್ಲಿ ಮೂಡಿಬಂತು. ಕನ್ನಡಕೊಬ್ಬರೇ ಆದ ಕೈಲಾಸಂ ಈ ಚಿತ್ರದ ಸೂತ್ರಧಾರಿ! ಶಕಾರನ ಪಾತ್ರದಲ್ಲಿ ನಟಿಸಿದ್ದ ಕೈಲಾಸಂರ ಈ ಚಿತ್ರ ಆಗಿನ ಕಾಲದಲ್ಲಿಯೇ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಯಾರಾದ ಅದ್ದೂರಿ ಚಿತ್ರ ಮಾತ್ರವಲ್ಲ; ಶ್ರೀರಂಗಪಟ್ಟಣ, ಬೇಲೂರು, ಹಳೇಬೀಡು ಮತ್ತು ಲಾಲ್ ಬಾಗ್‌ಗಳಲ್ಲಿ ಈ ಚಿತ್ರದ ಚಿತ್ರೀಕರಣವಾಗಿತ್ತು.. ಕರ್ನಾಟಕದಲ್ಲಿ ಮಾತ್ರವಲ್ಲದೆ, ದೇಶ–ವಿದೇಶಗಳಲ್ಲಿ ಪ್ರದರ್ಶನಗೊಂಡು 5ಲಕ್ಷ ಗಳಿಸಿದ ಈ ಚಿತ್ರ ಕನ್ನಡದ ಮೊದಲ ಪ್ಯಾನ್ ಇಂಡಿಯಾ ಚಿತ್ರ ಎನ್ನಲಡ್ಡಿಯಿಲ್ಲ.

ಕಾರಂತರೂ 'ಡೊಮಿಂಗೋ' ಮತ್ತು 'ಭೂತರಾಜ್ಯ' ಎಂಬ ಚಿತ್ರಗಳನ್ನು ನಿರ್ಮಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಂತರ, 1934ರಲ್ಲಿ 'ಸತಿ ಸುಲೋಚನಾ'ದಿಂದ ಆರಂಭವಾದ ವಾಕ್ಚಿತ್ರಗಳ ಯುಗ ಸೃಷ್ಟಿಸಿದ ಮಾಯೆಯಿಂದ ಬಹುಶಃ ನಾವ್ಯಾರೂ ಇನ್ನೂ ಹೊರಬಂದಿಲ್ಲ.

ಚಲನಚಿತ್ರಗಳ ಯುಗ ಆರಂಭವಾದ ಕಾಲದಲ್ಲಿ ಎಲ್ಲೋ ಒಂದೋ ಎರಡೋ ಇರುತ್ತಿದ್ದ ಚಿತ್ರಮಂದಿರಗಳಲ್ಲಿ ಸಿನಿಮಾ ವೀಕ್ಷಿಸಲು ಜನರು ಚಕ್ಕಡಿ ಕಟ್ಟಿಕೊಂಡು ಬರುತ್ತಿದ್ದರು ಎಂದರೆ ಈಗಿನ ಕಾಲದ ಮಕ್ಕಳಿಗೆ ನಂಬುವುದೇ ಕಷ್ಟ. ಹೌದಲ್ಲವೇ ಮತ್ತೆ ಇಂದು ಇಡೀ ವಿಶ್ವವೇ ಅವರ ಮುಷ್ಠಿಯಲ್ಲಿ ಫೋನ್ ಮೂಲಕ ಬಂಧಿಯಾಗಿದೆ. Anything under the Sun ಅವರಿಗೆ ಕೂತಲ್ಲೇ ನಿಂತಲ್ಲೇ ಮಲಗಿದಲ್ಲೇ ಸಿಗುತ್ತಿದೆ. ಇರಲಿ!

ಪೌರಾಣಿಕ ಚಿತ್ರಗಳೊಂದಿಗೆ ಪ್ರಾರಂಭವಾದ ಚಲನಚಿತ್ರಗಳ ಯುಗ ರಾಮಾಯಣ, ಮಹಾಭಾರತ, ಭಾಗವತಗಳ ಪ್ರಸಿದ್ಧ ಕತೆಗಳನ್ನು ಜನರಿಗೆ ಪರದೆಗಳ ಮೇಲೆ ಕಟ್ಟಿಕೊಟ್ಟಿತು. ಜನ ಯಾವ ಪರಿ ಮೋಡಿಗೆ ಒಳಗಾಗಿದ್ದರೆಂದರೆ, ಪುರಾಣದ ಬಹುತೇಕ ಪಾತ್ರಗಳನ್ನು ಮಾಡಿದ್ದ ರಾಜ್‌ಕುಮಾರ್ ಅನ್ನು ಮನಃಪೂರ್ವಕವಾಗಿ ಆರಾಧಿಸುತ್ತಿದ್ದರು. ನಂತರ ಸಾಕಷ್ಟು ಐತಿಹಾಸಿಕ ಚಿತ್ರಗಳು ಬಂದವು. ಆಗಲೂ ಅಷ್ಟೇ, ಪುಲಿಕೇಶಿ, ಶ್ರೀಕೃಷ್ಣದೇವರಾಯ, ಮಯೂರ, ರಣಧೀರ ಕಂಠೀರವ ಎಂದರೆ ರಾಜ್‌ಕುಮಾರ್, ಕಿತ್ತೂರು ಚೆನ್ನಮ್ಮ ಎಂದರೆ ಬಿ.ಸರೋಜದೇವಿ, 'ಒನಕೆ ಓಬವ್ವ' ಎಂದರೆ ಜಯಂತಿ, 'ಜಕಣಾಚಾರಿ' ಎಂದರೆ ಕಲ್ಯಾಣ್‌ಕುಮಾರ್ ಎನ್ನುವ ಹಾಗೆ ನಮ್ಮ ಮನಸ್ಸಿನಲ್ಲಿ ಕುಳಿತುಬಿಟ್ಟರು.

'ಕರುಣೆಯೇ ಕುಟುಂಬದ ಕಣ್ಣು' ಚಿತ್ರದೊಂದಿಗೆ ಸಾಂಸಾರಿಕ ಚಿತ್ರಗಳ ಯುಗ ಆರಂಭವಾದಾಗ ಆದರ್ಶ ಅಪ್ಪ, ಅಮ್ಮ, ಮಗ ಸಾಧ್ವಿ, ಸೊಸೆ,ಮಗಳು, ತಂಗಿಯ ಪಾತ್ರಗಳೆಂದರೆ ನಮಗೆ ಅಶ್ವತ್ಥ್, ಪಂಡರೀ ಬಾಯಿ, ಎಂ.ವಿ.ರಾಜಮ್ಮ, ಜಯಶ್ರೀ, ರಾಜ್‌ಕುಮಾರ್, ರಾಜೇಶ್, ಗಂಗಾಧರ್ ಲೀಲಾವತಿ, ಭಾರತಿ, ಜಯಂತಿ, ಕಲ್ಪನಾ, ಲಕ್ಷ್ಮಿ, ಕಲಾ, ರಮಾದೇವಿ, ಬಿ.ಜಯಾ ಎನ್ನುವಂತಾದರು. ಚುರುಕಿನ ಹೆಣ್ಣು ಮಕ್ಕಳೆಂದರೆ, ಆರತಿ, ಮಂಜುಳಾ ಹೀಗೆ 70, 80, 90ರ ದಶಕಗಳಲ್ಲಿಯೂ ಕನ್ನಡ ಚಲನಚಿತ್ರ ರಂಗ ಅದೆಷ್ಟು ಸಮೃದ್ಧವಾಗಿತ್ತು! ಕುಮಾರತ್ರಯರ ಜೊತೆಗೆ ಶ್ರೀನಾಥ್, ವಿಷ್ಣುವರ್ಧನ್, ಅಂಬರೀಷ್, ರವಿಚಂದ್ರನ್, ಅನಂತನಾಗ್, ಶಂಕರ್ ನಾಗ್, ಕುಮಾರ್ ಬಂಗಾರಪ್ಪ, ಶಿವರಾಜ್‌ಕುಮಾರ್, ಶಶಿಕುಮಾರ್, ಸುನೀಲ್, ಶ್ರೀಧರ್, ಸಾಯಿ ಕುಮಾರ್, ರಾಘವೇಂದ್ರ ರಾಜ್ ಕುಮಾರ್, ಕಾಶೀನಾಥ್, ರಮೇಶ್, ಜಗ್ಗೇಶ್‌ರಂತಹ ಹೀರೋಗಳಿದ್ದರು. ಜಯಮಾಲ, ಭವ್ಯಾ, ಸುಮಲತಾ, ಮಾಧವಿ, ಮಾಲಾಶ್ರೀ, ಸುಧಾರಾಣಿ, ಶ್ರುತಿ, ಪ್ರೇಮಾ, ಸುಹಾಸಿನಿ, ವಿಜಯಲಕ್ಷ್ಮಿ, ಅನುಪ್ರಭಾಕರ್ ಅವರಂತಹಾ Homely ನಾಯಕಿಯರಿದ್ದರು. ವಿವಿಧ ವರ್ಗಗಳ ಪ್ರೇಕ್ಷಕರ ಅಭೀಪ್ಸೆಗೆ ತಕ್ಕಂತೆ ಚಿತ್ರಗಳು ತಯಾರಾಗಿ ಆಯಾ ವರ್ಗದ ಮನತಣಿಯುತ್ತಿತ್ತು.

> ಸದಭಿರುಚಿಗೆ ಹೆಸರಾದ ನಾವು ಕನ್ನಡಿಗರು ಮತ್ತೆ ನಮ್ಮ ಅಭಿರುಚಿಯನ್ನು ಸರಿಪಡಿಸಿಕೊಳ್ಳಬೇಕಾಗಿ ಬಂದಿದೆ. ಅದು ಹೇಗೆ ಎಂಬುದು ಯಕ್ಷ ಪ್ರಶ್ನೆಯೇ. ಏಕೆಂದರೆ ಇಂದು ತಯಾರಾಗುತ್ತಿರುವ ಸಿನಿಮಾಗಳು ಅದಕ್ಕೆ ಪೂರಕವಾಗಿ ಖಂಡಿತಾ ಇಲ್ಲ. ಚಂದನವನ ಛಿದ್ರವಾಗದಿದ್ದರೆ ಸಾಕು. ಆದರೂ ಇಂದಿಗೂ ಸಿನಿಮಾದ ಹುಚ್ಚು ಹಿಡಿಸಿಕೊಂಡು ರಂಗಪ್ರವೇಶ ಮಾಡಿ, ಅತ್ಯುತ್ತಮ ಚಿತ್ರಗಳನ್ನು ತಯಾರಿಸುತ್ತಿರುವ ಯುವಪಡೆ ನಮ್ಮ ಆಶಾಕಿರಣ. ಎಐ ತಂತ್ರಜ್ಞಾನವನ್ನು ಉತ್ತಮವಾಗಿ ಬಳಸಿಕೊಂಡು ಮೌಲ್ಯಯುತ ಸತ್ವಯುತ ಚಿತ್ರಗಳನ್ನು ತಯಾರಿಸುವ ಕಲೆಗಾರರು ಈಗಲೂ ಇದ್ದಾರೆ. ಅವರುಗಳಿಂದಾದರೂ, ಚಂದನವನ ತನ್ನ ಏಕತಾನತೆಯನ್ನು ಕೊಡವಿಕೊಂಡು, ತನ್ನ ಶತಮಾನೋತ್ಸವದ ಹೊತ್ತಿಗೆ ತನ್ನ ವೈಭವದ ದಿನಗಳಿಗೆ ಮರಳಲಿ, ಮತ್ತೆ ನಳನಳಿಸಲಿ ಎಂಬುದೇ ಪ್ರತಿ ಕನ್ನಡ ಚಿತ್ರಪ್ರೇಮಿಯ ಆಶಯ.

ಇದಲ್ಲದೆ, ಹೊಸ ಅಲೆಯ ಚಿತ್ರಗಳಿಂದ ನಮ್ಮ ಕನ್ನಡ ಚಿತ್ರರಂಗ ಇಡೀ ದೇಶವನ್ನೇ ತನ್ನೆಡೆಗೆ ತಿರುಗಿ ನೋಡುವಂತೆ ಮಾಡಿತು. ರಾಷ್ಟ್ರ ಪ್ರಶಸ್ತಿಗಳ ಸರಮಾಲೆಯೇ ಕನ್ನಡ ಚಿತ್ರರಂಗವನ್ನು ಸಿಂಗರಿಸಿತು.

2000ದ ಇಸವಿಯ ನಂತರವೂ ಪುನೀತ್, ಉಪೇಂದ್ರ, ಸುದೀಪ್, ಯಶ್, ದರ್ಶನ್, ಗಣೇಶ್, ಚಿರಂಜೀವಿ ಸರ್ಜಾ, ನೆನಪಿರಲಿ ಪ್ರೇಮ್, ಅಜಯ್ ರಾವ್, ವಿಜಯರಾಘವೇಂದ್ರ, ಅವರಂತಹ ಹೀರೋಗಳಿಗೆ, ರಮ್ಯಾ ರಕ್ಷಿತಾ, ರಾಧಿಕಾ ಪಂಡಿತ್, ಪೂಜಾ ಗಾಂಧಿ ಅವರಂತಹ ಹೀರೋಯಿನ್‌ಗಳು ಇದ್ದರು.

ಹಿಂದಿನ ಆ ದಶಕಗಳ ಸಿನಿಮಾಗಳಲ್ಲಿನ ವಿಷಯ ವೈವಿಧ್ಯವನ್ನು ಒಮ್ಮೆ ನೆನಪಿಸಿಕೊಳ್ಳಿ. 'ಆಪರೇಷನ್ ಡೈಮಂಡ್ ರಾಕೆಟ್', 'ಜೇಡರ ಬಲೆ' ಯಂತಹಾ ಚಿತ್ರಗಳಲ್ಲಿ ನಟಿಸಿದ ರಾಜ್‌ಕುಮಾರ್, 'ಚಂದವಳ್ಳಿಯ ತೋಟ', 'ಹಸಿರು ತೋರಣ', 'ಕುಲವಧು'ವಿನಂತಹ ಸಾಂಸಾರಿಕ ಚಿತ್ರಗಳಲ್ಲಿಯೂ ನಟಿಸುತ್ತಿದ್ದರು. ಅಂಬರೀಷ್, ವಿಷ್ಣುವರ್ಧನ್, ರವಿಚಂದ್ರನ್ ಕೂಡ 'ಮಿಡಿದ ಹೃದಯ', 'ಹೃದಯ ಹಾಡಿತು', 'ಹೊಂಬಿಸಿಲು', 'ಜೀವನದಿ', 'ಸಾವಿರ ಸುಳ್ಳು', 'ನಾನು ನನ್ನ ಹೆಂಡತಿ' ಅಂತಹ ಚಿತ್ರಗಳಲ್ಲಿ ನಟಿಸಿದರೂ, 'ಭರ್ಜರಿ ಬೇಟೆ', 'ಸಿಂಗಾಪುರ್‌ನಲ್ಲಿ ರಾಜಾಕುಳ್ಳ', 'ಬ್ರಹ್ಮ ವಿಷ್ಣು ಮಹೇಶ್ವರ', 'ಅಂತ', 'ಸಾಹಸ ಸಿಂಹ'ದಂತಹ ಚಿತ್ರಗಳಲ್ಲಿ ನಟಿಸಿದರು. ಅಂಬರೀಷ್ 'ರಂಗನಾಯಕಿ' ಚಿತ್ರದ ಪಾತ್ರದಲ್ಲಿ ಕಳೆದೇ ಹೋದರು. ವಿಷ್ಣು ಅವರ 'ಲಾಲಿ' ಚಿತ್ರ ಇಂದಿಗೂ ನಮ್ಮನ್ನು ಭಾವುಕರನ್ನಾಗಿ ಮಾಡುತ್ತದೆ. ರವಿಚಂದ್ರನ್ ಕೂಡ ವೈವಿಧ್ಯಮಯ ಪಾತ್ರಗಳಲ್ಲಿ ಅದೆಂತಹ ಸಶಕ್ತ ಅಭಿನಯ ನೀಡಿದರು.

ದರ್ಶನ್, ಪುನೀತ್, ಸುದೀಪ್ ಆಕ್ಷನ್ ಚಿತ್ರಗಳಲ್ಲಿ ನಟಿಸಿದರೂ ಸಾಂಸಾರಿಕ ಕಥೆಯುಳ್ಳ ಚಿತ್ರಗಳಲ್ಲಿ ಕೂಡ ನಟಿಸಿದರು. ಇನ್ನು ಅನಂತನಾಗ್, ರಮೇಶ್, ಗಣೇಶ್ ಅವರು ಅತ್ಯುತ್ತಮ ಸಾಂಸಾರಿಕ ಚಿತ್ರಗಳನ್ನು ನೀಡಿದವರು. ಜಗ್ಗೇಶ್, ಅನಂತನಾಗ್, ಕಾಶಿನಾಥ್ ಅವರೆಲ್ಲಾ ಉತ್ತಮ ಹಾಸ್ಯ ಚಿತ್ರಗಳನ್ನು ನೀಡಿದರು. ಅಂದು ಪ್ರೇಕ್ಷಕನಿಗೆ ಆಯ್ಕೆ ಇತ್ತು. ಸಾಂಸಾರಿಕ, ಹೊಡೆದಾಟ ಅಥವಾ ಹಾಸ್ಯಮಯ ಚಿತ್ರಗಳ ನಡುವೆ ತನಗೆ ಬೇಕಾದುದ್ದನ್ನು ಆರಿಸಿಕೊಂಡು ವೀಕ್ಷಿಸಲು ಅವನಿಗೆ ಸ್ವಾತಂತ್ರ್ಯವಿತ್ತು. ವೈವಿಧ್ಯಮಯ ವಿಷಯಗಳನ್ನೊಳಗೊಂಡ ಚಿತ್ರಗಳು ತಯಾರಾಗುತ್ತಿದ್ದವು.

ಶ್ರುತಿ, ಮಾಲಾಶ್ರೀ ತವರು ಸೀರಿಸ್‌ನ ಲೆಕ್ಕವಿಲ್ಲದಷ್ಟು ಚಿತ್ರಗಳಲ್ಲಿ ನಟಿಸಿ ಮಹಿಳಾ ಪ್ರೇಕ್ಷಕರ ಮನೆಮಗಳಂತಾಗಿದ್ದರು. ಭವ್ಯಾ, ಸುಧಾರಾಣಿ, ಪ್ರೇಮಾ ಎಂತಹ ಪಾತ್ರಕ್ಕೂ ಸೈ ಎನುವಂತಿದ್ದರು.

ಇಂದು ಕನ್ನಡ ಚಿತ್ರರಂಗಕ್ಕೆ ಏನಾಗಿದೆ?

ಕಳೆದ ದಶಕಗಳಿಂದ ಕನ್ನಡಚಲನಚಿತ್ರ ರಂಗದ ರೂಪು ರೇಷೆಯೇ ಬದಲಾಗಿದೆ. ಚಿತ್ರರಂಗದ ವ್ಯಾಕರಣವೇ ಬದಲಾಗಿದೆ. ಸಿನಿಮಾ ಎಂದರೆ ಹೊಡಿ–ಬಡಿ, ಕೊಚ್ಚು, ಕೊಲ್ಲು, ಕಡಿ ಎಂಬಂತಹ ಅಮಾನುಷ ವರ್ತನೆಗಳ ವಿಜೃಂಭಣೆಯೇ ಸಿನಿಮಾ ಎಂಬರ್ಥ ಬಂದಿದೆ. ಸಿನಿಮಾಗಳು ಯಾವುದೇ ನೈತಿಕ ಮೌಲ್ಯ ಕಟ್ಟಿಕೊಡುವ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಅಳಿದುಳಿದ ಮೌಲ್ಯಗಳನ್ನೂ ಅಪ್ರಸ್ತುತ, ಅನವಶ್ಯಕ ಎಂದು ಬಿಂಬಿಸಿ ಯುವಜನತೆಯ ದಾರಿ ತಪ್ಪಿಸುತ್ತಿವೆ. ಈಗ ಬಿಡುಗಡೆಯಾಗುತ್ತಿರುವ ಚಿತ್ರಗಳನ್ನೇ ಗಮನಿಸಿ. ಚಿತ್ರದ ನಾಯಕ ಟಪೋರಿಯಾಗಿರುತ್ತಾನೆ, ರೌಡಿಯಾಗಿರುತ್ತಾನೆ, ಭೂಗತ ಲೋಕದ ದೊರೆಯಾಗಿರುತ್ತಾನೆ ಅಥವಾ ಅವನಿಗಾಗಿ ಕೆಲಸ ಮಾಡುವವನಾಗಿರುತ್ತಾನೆ. ಕಾಲೇಜಿನ ಮೆಟ್ಟಿಲನ್ನೇ ಇನ್ನೂ ಸರಿಯಾಗಿ ಹತ್ತಿರುವುದಿಲ್ಲ. ಹುಡುಗಿಯ ಹಿಂದೆ ಬಿದ್ದು ಅವಳನ್ನು ಕಾಡಿ ತನ್ನ ಜೊತೆಗಾತಿಯಾಗಲು ಒಪ್ಪಿಸುತ್ತಾನೆ. ಮೊದಲು ಹೇಳಿದ ವಿಧದ ನಾಯಕರೂ ಅಷ್ಟೇ, ತನಗೆ ಇಷ್ಟವಾದ ಹುಡುಗಿಯನ್ನು ಪೀಡಿಸಿ ಎಮೋಷನಲ್ ಬ್ಲ್ಯಾಕ್ಮೇಲ್ ಮಾಡಿ ತಮ್ಮನ್ನು ಪ್ರೀತಿಸುವಂತೆ ಮಾಡುತ್ತಾರೆ. ನಿಮಗೇ ಸರಣಿ ಸರಣಿ ಚಿತ್ರಗಳು ನೆನಪಾಗುತ್ತಿರಬಹುದು.

ಏನನ್ನಾದರೂ ಸಾಧಿಸಬೇಕೆಂಬ ಕಿಚ್ಚು ಹೊತ್ತಿಸುವಂತಹ ಸಂದೇಶ ಕೊಡುವ ಚಿತ್ರಗಳು ಎಲ್ಲಿ ಬರುತ್ತಿವೆ? ಬಂಗಾರದ ಮನುಷ್ಯ ನೋಡಿದ ಅನೇಕ ಯುವಕರು ಹಳ್ಳಿಗೆ ಮರಳಿದರು. ವಿಷ್ಣುವರ್ಧನ್‌ರ ಯಜಮಾನ ಸಿನಿಮಾ ನೋಡಿದ ಹಲವು ಒಡೆದ ಕುಟುಂಬಗಳು ಒಂದಾದವು. ಇಂದಿನ ಸಿನಿಮಾಗಳನ್ನು ನೋಡಿ ನಮ್ಮ ಯುವಜನತೆ ರೌಡಿಸಮ್‌ಗೆ ಇಳಿಯಬೇಕು. ಇಲ್ಲ ಭೂಗತ ಲೋಕ ಪ್ರವೇಶಿಸಲು ಉತ್ಸುಕರಾಗಬೇಕು, ಹಾಗಿರುತ್ತವೆ ನಿರೂಪಣೆ.



ಆದರೆ ಇಂದು! ತಾವು ಆರಾಧಿಸುವ ನಾಯಕನಲ್ಲಿ ಈ ರೀತಿಯ ಆದರ್ಶಗಳೆಲ್ಲಿದ್ದಾವೆ? ಜೀವನದ ಒಂದು ಹಂತದಲ್ಲಿ ಅನುಭವಿಸಿದ ನೋವು ಅವಮಾನ ದುಃಖಗಳಿಂದ ನಾಯಕ ತಪ್ಪುದಾರಿ ಹಿಡಿದ ಎಂದು ಒಂದು ಕಾರಣ ತೋರಿಸಿ, ಅವನು ಮೆರೆಯುವ ಕ್ರೌರ್ಯವನ್ನೇ ಹಸಿಹಸಿಯಾಗಿ ತೋರಿಸಿ ಪ್ರೇಕ್ಷಕರನ್ನು ಸೀಟಿನ ತುದಿಗೆ ತಂದು ಕೂರಿಸಿ ಗೆದ್ದೆವೆಂದು ಬೀಗುತ್ತಾರೆ. ಹಿಂದೆಲ್ಲಾ ಚಿತ್ರಗಳಲ್ಲಿ ಫೈಟಿಂಗ್ ಸೀನ್ ಬಂದರೆ ಡಿಶುಂ ಡಿಶುಂ ಹೊಡೆದಾಟಗಳು ಮಾತ್ರ ಇದ್ದದ್ದು. ಅದನ್ನು ಎಲ್ಲರೂ ಉತ್ಸಾಹದಿಂದ ನೋಡುತ್ತಿದ್ದರು. ಆದರೆ ಇಂದು **ಸುತ್ತಿಗೆ, ಕೊಡಲಿ, ಮುಳ್ಳುತಂತಿ, ತಲ್ವಾರ್**ಗಳ ಬಳಕೆ ಸಾಮಾನ್ಯವೆಂಬಂತಾಗಿಬಿಟ್ಟಿದೆ. ಸೆನ್ಸಾರ್ ಇಲ್ಲದೆ ಆ ಹೊಡೆದಾಟದ ದೃಶ್ಯಗಳನ್ನು ತೋರಿಸಿ ನೋಡುಗರಲ್ಲಿ ಅಶಾಂತಿಯನ್ನು ಉಂಟು ಮಾಡುತ್ತಿದ್ದಾರೆ. ಹಿಂಸೆಯನ್ನು ಪ್ರಚೋದಿಸುತ್ತಿದ್ದಾರೆ. ಅವನು ಎಂತಹ ಕ್ರೂರಿ, ಕಾನೂನು ಪಾಲಿಸದ ಭೂಗತ ದೊರೆಯಾದರೂ, ಅವನ ಎಲ್ಲ ಅನ್ಯಾಯ ಅನಾಚಾರಗಳಿಗೆ ಅಮ್ಮನ ಸೆಂಟಿಮೆಂಟ್ ಹಾಕಿ ಜೈ ಎನಿಸಿಬಿಡುವ ಕುಟಿಲ ಜಾಣತನ ಬೇರೆ!

ಈಗಿನ ಯಾವುದೇ ಚಿತ್ರ ನೋಡಿ, ಗಳಿಗೆಗೊಮ್ಮೆ ಎಂಬಂತೆ ಧೂಮಪಾನ ಮತ್ತು ಮದ್ಯಪಾನ ಹಾನಿಕರ ಎಂಬ ಸೂಚನೆ ಚಿತ್ರದುದ್ದಕ್ಕೂ ಓಡುತ್ತಿರುತ್ತದೆ. ಹಾಗಂತ ಅಲ್ಲಿ ಧೂಮಪಾನ ಮದ್ಯಪಾನ ಮಾಡುವುದು ಖಳನಾಯಕನಲ್ಲ, ನಾವು ಆರಾಧಿಸುವ ನಾಯಕರೇ! ಸಂದೇಶದ ಮನೆ ಹಾಳಾಯಿತು. ಕುಡಿತವನ್ನು ವಿಜೃಂಭಿಸುವ ಹಾಡುಗಳಂತೂ ಈಗ ಕಡ್ಡಾಯ ಎಂಬಂತಾಗಿದೆ.

ಇನ್ನು ಹೆಣ್ಣನ್ನು ಅಂದರೆ ಹೀರೋಯಿನ್‌ಗಳನ್ನು ತೋರಿಸುವ ಪರಿಯಂತೂ ಅಸಹ್ಯಕರ. ಅಶ್ಲೀಲತೆ ರಸಿಕತೆ ನಡುವೆ ಅತಿಸಣ್ಣ ಗೆರೆಯಿರುತ್ತದೆ. ಅದರ ಅರಿವೇ ಇಲ್ಲದೇ, ಹೀರೋಯಿನ್‌ಗಳನ್ನು ತೋರಿಸುವ ಪರಿ ಹೇಯ. ಕಾಲೇಜಿಗೆ ಹೋಗುವ ನಮ್ಮ, ನಿಮ್ಮ ಅಕ್ಕಪಕ್ಕದ ಮನೆಯ ಹುಡುಗಿ ಎಲ್ಲಿ ಅಷ್ಟು ಕನಿಷ್ಟ ಬಟ್ಟೆ ತೊಟ್ಟು ಮಣಗಟ್ಟಲೆ ಮೇಕಪ್ ಹಾಕಿಕೊಂಡು ಹೋಗುತ್ತಾಳೆ. ಸಿನಿಮಾದಲ್ಲಿ ಇದು ಸಾಧ್ಯ! ನೈಜತೆಯ ಸ್ಪರ್ಶವೇ ಇಲ್ಲದ ಪಾತ್ರ ಚಿತ್ರಣಗಳು.

ಮಾಸ್ತಿ ಅವರ ಸುಬ್ಬಣ್ಣ ನೀಳ್ಗಥೆಯನ್ನು ಚಿತ್ರ ಮಾಡಬೇಕೆಂದು, ಅದರಲ್ಲಿ ರಾಜ್‌ಕುಮಾರ್‌ರೇ ನಟಿಸಬೇಕೆಂದು ಕೃತಿಯನ್ನು ಪಾರ್ವತಮ್ಮ ಅವರಿಗೆ ಓದಲು ನೀಡಿದರಂತೆ. ಕೃತಿ ಓದಿದ ಅವರು, ಇಲ್ಲಿ ನಾಯಕ ಮನೆ, ವೃದ್ಧ ತಂದೆ ತಾಯಿ ಎಲ್ಲರನ್ನೂ ಬಿಟ್ಟು ಪಲಾಯನ ಮಾಡುತ್ತಾನೆ. ಕರ್ತವ್ಯದಿಂದ ವಿಮುಖನಾಗುತ್ತಾನೆ. ಇದರಲ್ಲಿ ಡಾ.ರಾಜ್ ನಟಿಸಿದರೆ ಸಮಾಜಕ್ಕೆ ತಪ್ಪು ಸಂದೇಶ ನೀಡಿದಂತಾಗುತ್ತದೆ ಎಂದು ತಿರಸ್ಕರಿಸಿದರಂತೆ. ಆ ಸಾಮಾಜಿಕ ಜವಾಬ್ದಾರಿಯನ್ನು ಇಂದು ಯಾರು ನಿಭಾಯಿಸುತ್ತಿದ್ದಾರೆ.

ಒಳ್ಳೆಯ ಚಿತ್ರಗಳು ಬರುತ್ತಲೇ ಇಲ್ಲವೆಂದಲ್ಲ. ಆದರೆ ಈಗಂತೂ ಈ ಪ್ಯಾನ್ ಇಂಡಿಯಾ ಸಿನಿಮಾಗಳ ಅಬ್ಬರದಲ್ಲಿ ಅವು ಚಿತ್ರಮಂದಿರದವರೆಗೂ ಬರಲಾಗುತ್ತಿಲ್ಲ. ಒಟಿಟಿ ಇದೆಯಾದರೂ ಅವುಗಳಲ್ಲಿ ಕನ್ನಡ ಸಿನಿಮಾಗಳಿಗೆ ಅಂತಹ ಪ್ರಾಮುಖ್ಯತೆ ಇಲ್ಲ. ರಿಮೇಕ್, ಸವಕಲು ಕಥೆ ಅಥವಾ ತರ್ಕವೇ ಇಲ್ಲದ ಅತಿರಂಜಿತ ಸಿನಿಮಾಗಳನ್ನು ತಯಾರಿಸುವ ಮಂದಿ ನಮ್ಮ ಅಭಿರುಚಿಯನ್ನು ಎತ್ತ ಕೊಂಡೊಯ್ಯುತ್ತಿದ್ದಾರೆ? ಕನ್ನಡ ಸಂಸ್ಕೃತಿಯ ಗಂಧವೇ ಇಲ್ಲದಂತಹ ಚಿತ್ರಗಳ ಅಗತ್ಯವಾದರೂ ಏನಿದೆ? ಸಿನಿಮಾದಂತಹ ಪ್ರಬಲ ಮಾಧ್ಯಮ ಇಂದು ಆದರ್ಶ, ನೈತಿಕತೆ, ಮೌಲ್ಯ, ಜವಾಬ್ದಾರಿಯನ್ನು ಕಳೆದುಕೊಂಡು ಕೇವಲ ವ್ಯಾವಹಾರಿಕವಾಗಿ ಬಿಟ್ಟರೆ ಎಷ್ಟು ಅಪಾಯಕಾರಿಯಾಗಿ ಪರಿಣಮಿಸುತ್ತದೆ ಎಂಬುದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ.

ಮಕ್ಕಳ ಚಿತ್ರಗಳಂತೂ ಇಂದು ಬರುತ್ತಲೇ ಇಲ್ಲ. ಎಲ್ಲೋ ಚಿತ್ರೋತ್ಸವಗಳಲ್ಲಿ ಬಿಡುಗಡೆಯಾಗಿ ಪ್ರಶಸ್ತಿಯನ್ನೂ ತೆಗೆದುಕೊಳ್ಳುತ್ತವೆ. ಆದರೆ ಚಿತ್ರ ಮಾತ್ರ ಅದೃಶ್ಯ! ಮಕ್ಕಳಿಗೂ ಇವೇ ಅಸಹಜತೆ, ಅಶ್ಲೀಲತೆ, ಅತಿಮಾನುಷ, ಅಮಾನುಷ, ಅನಾಚಾರಗಳಿಂದ ತುಂಬಿದ ಅಡಲ್ಟ್ ಮೂವಿ ನೋಡುವ ಕರ್ಮ.

ಸದಭಿರುಚಿಗೆ ಹೆಸರಾದ ನಾವು ಕನ್ನಡಿಗರು ಮತ್ತೆ ನಮ್ಮ ಅಭಿರುಚಿಯನ್ನು ಸರಿಪಡಿಸಿಕೊಳ್ಳಬೇಕಾಗಿ ಬಂದಿದೆ. ಅದು ಹೇಗೆ ಎಂಬುದು ಯಕ್ಷ ಪ್ರಶ್ನೆಯೇ. ಏಕೆಂದರೆ ಇಂದು ತಯಾರಾಗುತ್ತಿರುವ ಸಿನಿಮಾಗಳು ಅದಕ್ಕೆ ಪೂರಕವಾಗಿ ಖಂಡಿತಾ ಇಲ್ಲ. ಚಂದನವನ ಛಿದ್ರವಾಗದಿದ್ದರೆ ಸಾಕು. ಆದರೂ ಇಂದಿಗೂ ಸಿನಿಮಾದ ಹುಚ್ಚು ಹಿಡಿಸಿಕೊಂಡು ರಂಗಪ್ರವೇಶ ಮಾಡಿ, ಅತ್ಯುತ್ತಮ ಚಿತ್ರಗಳನ್ನು ತಯಾರಿಸುತ್ತಿರುವ ಯುವಪಡೆ ನಮ್ಮ ಆಶಾಕಿರಣ. ಎಐ ತಂತ್ರಜ್ಞಾನವನ್ನು ಉತ್ತಮವಾಗಿ ಬಳಸಿಕೊಂಡು ಮೌಲ್ಯಯುತ ಸತ್ವಯುತ ಚಿತ್ರಗಳನ್ನು ತಯಾರಿಸುವ ಕಲೆಗಾರರು ಈಗಲೂ ಇದ್ದಾರೆ. ಅವರಿಂದಾದರೂ, ಚಂದನವನ ತನ್ನ ಏಕತಾನತೆಯನ್ನು ಕೊಡವಿಕೊಂಡು, ತನ್ನ ಶತಮಾನೋತ್ಸವದ ಹೊತ್ತಿಗೆ ತನ್ನ ವೈಭವದ ದಿನಗಳಿಗೆ ಮರಳಲಿ, ಮತ್ತೆ ನಳನಳಿಸಲಿ ಎಂಬುದೇ ಪ್ರತಿ ಕನ್ನಡ ಚಿತ್ರಪ್ರೇಮಿಯ ಆಶಯ. ಇತ್ತೀಚೆಗೆ ಯಶ್‌ರ ಬಹು ನಿರೀಕ್ಷಿತ ಟಾಕ್ಸಿಕ್ ಚಿತ್ರದ ಟ್ರೇಲರ್ ಬಿಡುಗಡೆ ಹುಟ್ಟು ಹಾಕಿದ ಚರ್ಚೆ ಈ ಎಲ್ಲ ವಿಷಯಗಳ ಪರಾಮರ್ಶೆಗೆ ಕಾರಣವಾಯಿತು.

ಉತ್ತಮ ಫಲಿತಾಂಶಕ್ಕಾಗಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಸಜ್ಜುಗೊಳಿಸಿ

ಅಧಿಕಾರಿಗಳಿಗೆ ಜಿ.ಪಂ ಸಿಇಓ ಸೂಚನೆ

ಮೈಸೂರು,ಫೆ.11(ಎಂಟಿವೈ)–ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಮೀಪಿಸುತ್ತಿದ್ದು, ಜಿಲ್ಲೆಯಲ್ಲಿ ಫಲಿತಾಂಶ ವೃದ್ಧಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಪಂ ಸಿಇಓ ಯುಕೇಶ್‌ಕುಮಾರ್ ಸೂಚನೆ ನೀಡಿದ್ದಾರೆ.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಎರಡನೇ ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ವಿಶ್ಲೇಷಣಾ ಸಭೆಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸ್ಥಳೀಯ ರಜೆ ನೀಡದೇ, ಉಳಿದಿರುವ ದಿನಗಳಲ್ಲಿ ಫಲಿತಾಂಶ ವೃದ್ಧಿಗೆ ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು. ಜಾತ್ರೆ, ಹಬ್ಬಗಳಿಗೆ ಸಿದ್ಧತೆ ಮಾಡಿಕೊಳ್ಳುವಂತೆ ಪರೀಕ್ಷೆಗೆ ಸಜ್ಜಾಗಬೇಕು. ಈಗಾಗಲೇ ನಡೆದಿರುವ ಮೊದಲ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಶೇ.40ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಶಾಲೆಗಳ ಫಲಿತಾಂಶ ಸುಧಾರಿಸಿದೆ. ಇದು ಎರಡನೇ ಪೂರ್ವಭಾವಿ ಪರೀಕ್ಷೆಯ ಫಲಿತಾಂಶದಲ್ಲಿ ಸುಧಾರಣೆ ಆಗಿರುವುದು ಕಂಡು ಬಂದಿದೆ ಎಂದರು.



ಮೈಸೂರು ಜಿ.ಪಂ. ಸಭಾಂಗಣದಲ್ಲಿ ಎಸ್‌ಎಸ್‌ಎಲ್‌ಸಿ ಎರಡನೇ ಪೂರ್ವಭಾವಿ ಪರೀಕ್ಷೆಯ ಫಲಿತಾಂಶ ವಿಶ್ಲೇಷಣಾ ಸಭೆಯಲ್ಲಿ ಜಿ.ಪಂ ಸಿಇಓ ಯುಕೇಶ್ ಕುಮಾರ್ ಮಾತನಾಡಿದರು.

ಈ ಹಿಂದೆ ಫಲಿತಾಂಶ ಕ್ಷೀಣಿಸಿರುವ ಶಾಲೆಗಳ ಮೇಲೆ ತಾಲೂಕು ಮಟ್ಟದ ಅಧಿಕಾರಿಗಳು ನಿಗಾ ಇಡಬೇಕು. ಹೆಚ್ಚು ಮಕ್ಕಳು ನೋಂದಣಿಯಾಗಿರುವ ಶಾಲೆಗಳಿಗೆ ನಿರಂತರ ಭೇಟಿ ನೀಡಿ ಅವಲೋಕಿಸಬೇಕು. ಮೊದಲ ಮೂರು ಸ್ಥಾನದೊಳಗೆ ಮೈಸೂರು ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಇರುವಂತೆ ಎಲ್ಲರೂ ಪರಿಶ್ರಮಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಡಿಡಿಪಿಐ ಡಿ.ಉದಯ್ ಕುಮಾರ್, ಡಯಟ್ ಪ್ರಾಂಶುಪಾಲ ನಾಗರಾಜಯ್ಯ, ಎಲ್ಲಾ ಬಿಇಓಗಳು, ಶಿಕ್ಷಣ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮಾ.8, ಕನ್ನಡ ರಸ ಪ್ರಶ್ನೆ ಸ್ಪರ್ಧೆ

ಮೈಸೂರು,ಫೆ.11(ಜಿಎ)–ಮೈಸೂರಿನ ಕನಸು ರಂಗ ತಂಡದ ವತಿಯಿಂದ ಕನ್ನಡ ರಸಪ್ರಶ್ನೆ ಸ್ಪರ್ಧೆ ನಡೆಸಲಾಗುತ್ತದೆ ಎಂದು ತಂಡದ ಮುಖ್ಯಸ್ಥ ಪಿ.ಶ್ರೇಯಸ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.8ರಂದು ಬೆಳಗ್ಗೆ 10 ಗಂಟೆಯಿಂದ ಗೋಕುಲಂನ 3ನೇ ಹಂತದಲ್ಲಿರುವ ಸಾಂಸ್ಕೃತಿಕ ಭವನದಲ್ಲಿ ಸ್ಪರ್ಧೆಗಳು ನಡೆಯಲಿವೆ. ನಮ್ಮ ದೇಶದ ಧರ್ಮ, ಸಂಸ್ಕೃತಿ, ಪುರಾಣಗಳು ಮತ್ತು ಸಾಹಿತ್ಯ, ಕನ್ನಡ ಸಂಗೀತ, ಕನ್ನಡ ಜಾನಪದ ಲೋಕ, ಇಡೀ ವಿಶ್ವದ ಕ್ರೀಡೆ, ಪ್ರಚಲಿತ ವಿದ್ಯಮಾನ, ರಾಜಕೀಯ ಕುರಿತಂತೆ ಕನ್ನಡ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿದೆ. ಪ್ರವೇಶ ಶುಲ್ಕ 200 ರೂ.ಗಳಾಗಿವೆ. ಮಾಹಿತಿಗೆ 97392 72627 ಅನ್ನು ಸಂಪರ್ಕಿಸಿ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಲ್ಲಿ ಪೂರ್ಣ ಪ್ರಮಾಣದ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭಿಸಿ

ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗೆ ಸಂಸದ ಯದುವೀರ್ ಮನವಿ



ಮೈಸೂರಿನಲ್ಲಿ ಪೂರ್ಣ ಪ್ರಮಾಣದ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭಿಸಬೇಕೆಂದು ಸಂಸದ ಯದುವೀರ್ ಅವರು ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿಗೆ ಬುಧವಾರ ಮನವಿ ಸಲ್ಲಿಸಿದರು.

ನವದೆಹಲಿ, ಫೆ.11(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪೂರ್ಣ ಪ್ರಮಾಣದ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ತೆರೆಯಬೇಕೆಂದು ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ನವದೆಹಲಿಯಲ್ಲಿ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಕೊಡಗಿನಲ್ಲಿ ಮೆಗಾ ಪಾಸ್ ಪೋರ್ಟ್ ಮೇಳ ಆಯೋಜಿಸಿ

ಕೊಡಗಿನಲ್ಲಿ ಮೆಗಾ ಪಾಸ್‌ಪೋರ್ಟ್ ಮೇಳ ಆಯೋಜಿಸಬೇಕು ಎಂದು ಇದೇ ವೇಳೆ ಯದುವೀರ್ ಮನವಿ ಸಲ್ಲಿಸಿದ್ದಾರೆ. ಕೊಡಗಿನ ಜನರು ಪಾಸ್‌ಪೋರ್ಟ್ ಪಡೆಯಲು ಮೈಸೂರು ಅಥವಾ ಬೆಂಗಳೂರಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೊಡಗಿನಲ್ಲಿ ಮೆಗಾ ಪಾಸ್‌ಪೋರ್ಟ್ ಮೇಳ ಆಯೋಜಿಸುವಂತೆ ಕೋರಿದರು. ಯದುವೀರ್ ಅವರು ಸಲ್ಲಿಸಿದ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ, ಈ ಬಗ್ಗೆ ಪರಿಶೀಲಿಸಲಾಗುವುದು ಎಂದು ಭರವಸೆ ನೀಡಿದರು.

ಮೈಸೂರು ವೇಗವಾಗಿ ಬೆಳೆಯುತ್ತಿರುವ ನಗರ. ಇಲ್ಲಿಂದ ದೇಶ–ವಿದೇಶಗಳಿಗೆ ತೆರಳುವವರ ಸಂಖ್ಯೆ ದಿನ ಕಳೆದಂತೆ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮೈಸೂರಲ್ಲಿ ಈಗಿರುವ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ತತ್ಕಾಲ್ ಸೇವೆ ಒಳಗೊಂಡಂತೆ ಪೂರ್ಣ ಪ್ರಮಾಣದ ಕೇಂದ್ರವಾಗಿ ಮೇಲ್ದರ್ಜೆಗೇರಿಸಬೇಕು ಎಂದು ಕೋರಿದರು.

ಮೈಸೂರಿನಲ್ಲಿ ಉನ್ನತ ಶಿಕ್ಷಣ, ಐಟಿ ವಲಯ, ಪ್ರವಾಸೋದ್ಯಮ ಬೆಳವಣಿಗೆ ಸಾಧಿಸುತ್ತಿದೆ. ಇದರಿಂದ ಮೈಸೂರಿಗೆ ಬಂದು ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಪೂರ್ಣ ಪ್ರಮಾಣದ ಪಾಸ್ ಪೋರ್ಟ್ ಸೇವಾ ಕೇಂದ್ರದ ಅಗತ್ಯವಿದೆ ಎಂದು ಮನದಟ್ಟು ಮಾಡಿದರು. ಈಗ ಮೈಸೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಸ್‌ಪೋರ್ಟ್ ಸೇವಾ ಕೇಂದ್ರ ಕಿರಿದಾಗಿದೆ. ಇದರಿಂದ ಸಾರ್ವಜನಿಕರ ಅಗತ್ಯ ಪೂರೈಸಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಮೈಸೂರು ಭಾಗದ ಜನರು ಬೆಂಗಳೂರಿಗೆ ತೆರಳಬೇಕಾದ ಅನಿವಾರ್ಯತೆ ಇದೆ ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಪೂರ್ಣ ಪ್ರಮಾಣದ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭಿಸುವುದು ಅತ್ಯಗತ್ಯವಾಗಿದೆ ಎಂದರು.

PUBLIC NOTICE

Notice is hereby issued to the General Public that (1) Sri H. V. HARISH, S/O. Late H.G. Venugopal, Residing at # 274, 16th Main, Saraswathipuram, Mysuru-570 009 and (2) Sri. V. SREEVATHSA, S/o Dr. S. Venkatachar, Residing at # A3/14, 2nd Cross, Ramakrishnanagar 'K' Block, Mysuru - 570 023 have agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within TEN (10) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

All that piece and parcel of commercial property bearing No. 1057 CH-8, 1057/A CH-8/A, E-aasthi No. 4-4-529-192, measuring East to West 130 feet (39.624079 mts) and North to South 40 feet (12.192024 mts), totally measuring 5200 square feet (483.0977 sq mts) situated at Vishnuvardhana road, Chamarajapuram, Chamaraja Mohalla, Mysuru comprising of building threon & bounded on:-
East by: Galli ; West by: Vishnuvardhana road ; North by: Property bearing No. 1058 ; South by: Property bearing No. 1056.

Place: Mysuru Sd/- M. SANJAY JAIN
Date : 12/02/2026 Advocate

ವಿದ್ಯಾರ್ಥಿಗಳು ಕಾನೂನುಬಾಹಿರ ಕೃತ್ಯದಲ್ಲಿ ಭಾಗಿಯಾಗದಂತೆ ಕುಟುಂಬ, ಶಿಕ್ಷಣ ಸಂಸ್ಥೆಗಳು ಎಚ್ಚರ ವಹಿಸಬೇಕು

- ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಸಲಹೆ
- ವಿದ್ಯಾರ್ಥಿಗಳು ಭವಿಷ್ಯಕ್ಕೆ ಅನುಕೂಲಕಾರಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಕಿವಿಮಾತು

ಮೈಸೂರು, ಫೆ.11(ಎಂಕೆ)– ಶಾಲಾ–ಕಾಲೇಜು ವಿದ್ಯಾರ್ಥಿಗಳು ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಸಿಲುಕದಂತೆ ಕುಟುಂಬ ಹಾಗೂ ಶಿಕ್ಷಣ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿರುವ ಸೆನೆಟ್ ಭವನದಲ್ಲಿ ಸ್ವಯಂ–ಡಿಜಿಟಲ್ ಲರ್ನಿಂಗ್ ಅಂಡ್ ಮಾನಿಟರಿಂಗ್ ಸೆಲ್ ವತಿಯಿಂದ ಆಯೋಜಿಸಿದ್ದ ಪುನಶ್ಚೇತನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಮೈಸೂರು ವಿವಿ ಶ್ರಮಿಸುತ್ತಿದ್ದು, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಉಪನ್ಯಾಸಕರು, ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಪಡೆದವರು ದೊಡ್ಡ ದೊಡ್ಡ ಸ್ಥಾನಗಳನ್ನು ಪಡೆದಿರುವುದನ್ನು ಗಮನಿಸಿ, ಅವರಂತೆ ಸಾಗಲು ಹೊಸ ಹೊಸ ವಿಷಯಗಳತ್ತ ವಿದ್ಯಾರ್ಥಿಗಳು ಗಮನಹರಿಸಬೇಕು. ಹಾಗೆಯೇ ವಿಷಯ ಆಯ್ಕೆ ಮುಖ್ಯವಾಗಿದ್ದು, ತಮ್ಮ ಮುಂದಿನ ಭವಿಷ್ಯಕ್ಕೆ ಅನುಕೂಲಕರವಾದ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಉನ್ನತ ಸ್ಥಾನಕ್ಕೆ ಬೆಳೆಯುವಂತೆ ಕಿವಿಮಾತು ಹೇಳಿದರು.



ಮೈಸೂರು ವಿಶ್ವವಿದ್ಯಾನಿಲಯ ಸ್ವಯಂ ಡಿಜಿಟಲ್ ಲರ್ನಿಂಗ್ ಅಂಡ್ ಮಾನಿಟರಿಂಗ್ ಸೆಲ್ ವತಿಯಿಂದ ಆಯೋಜಿಸಿದ್ದ ಪುನಶ್ಚೇತನ ಕಾರ್ಯಾಗಾರವನ್ನು ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಪದವಿ ಎಂಬುದು ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸುವ ಮುಖ್ಯ ಘಟ್ಟವಾಗಿದ್ದು, ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ಪಡೆಯುವ ಮೂಲಕ ಕೌಶಲ್ಯತೆ ರೂಢಿಸಿಕೊಳ್ಳಿ. ಹಾಗೆಯೇ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿ ಒಂದಲ್ಲ ಒಂದು ಬಗೆಯ ಪ್ರತಿಭೆ ಇರುತ್ತದೆ. ಅಂತಹ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ಇಂತಹ ಪುನಶ್ಚೇತನ ಕಾರ್ಯಾಗಾರಗಳು ಒಳ್ಳೆಯ ವೇದಿಕೆಯಾಗಿವೆ

ಪರೀಕ್ಷಾ ಪೂರ್ವ ತಯಾರಿ ಅಗತ್ಯ: ಪದವಿ ಅಧ್ಯಯನದ ಜೊತೆ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ನಡೆಸುವುದು ಮುಖ್ಯ. ಏಕಾಏಕಿ ಪರೀಕ್ಷೆ ಬರೆಯಲು ಸಾಧ್ಯವಿಲ್ಲ. ಪರೀಕ್ಷೆಗೆ ಪೂರ್ವ ತಯಾರಿ ಅತೀ ಮುಖ್ಯವಾಗಿದ್ದು, ತರಬೇತಿ ಸಂಸ್ಥೆಗಳ ಮಾರ್ಗದರ್ಶನ ಪಡೆಯುವಂತೆ ತಿಳಿಸಿದರಲ್ಲದೆ ಬದಲಾಗುತ್ತಿರುವ ಜಗತ್ತಿನ ಜೊತೆಗೆ ನಾವು ಕೂಡ ಬದಲಾಗಬೇಕು. ಹೊಸತನ್ನು ಕಲಿಯಬೇಕು ಎಂದು ಹೇಳಿದರು.

ಯುಜಿಸಿ ಮೂಕ್ಸ್‌ನಲ್ಲಿ ನೋಂದಣಿ ಯಾಗಿ: ಯುಜಿಸಿ ಮೂಕ್ಸ್ ವೆಬ್‌ಸೈಟ್‌ನಲ್ಲಿ ಐಐಟಿ ಸೇರಿದಂತೆ ದೇಶದ ಪ್ರತಿಷ್ಠಿತ ವಿದ್ಯಾಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರ ಉಪನ್ಯಾಸವನ್ನು ವೀಕ್ಷಿಸಲು ಅವಕಾಶ ಇದೆ ಹಾಗಾಗಿ ವಿದ್ಯಾರ್ಥಿಗಳು ಯುಜಿಸಿ ಮೂಕ್ಸ್‌ನಲ್ಲಿ ನೋಂದಣಿ ಮಾಡುವ ಮೂಲಕ ಈ ಸೌಲಭ್ಯ ಪಡೆದುಕೊಳ್ಳಬೇಕು. ಯುಜಿಸಿ ಮೂಕ್ಸ್‌ನಲ್ಲಿ ವಿಭಿನ್ನವಾದ ಕಲಿಕೆಯನ್ನು ನೀವು ಆಸ್ವಾದಿಸಬಹುದು. ಯುಜಿಸಿ ನೀಡಿರುವ ಈ ಅವಕಾಶವನ್ನು ವಿದ್ಯಾರ್ಥಿಗಳು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು. ಯುಜಿಸಿ ಮೂಕ್ಸ್ ವೆಬ್‌ಸೈಟ್‌ನಲ್ಲಿರುವ ಪಾಠವನ್ನು ಎಷ್ಟು ಬಾರಿ ಬೇಕಾದರೂ ಕೇಳಿಸಿಕೊಳ್ಳಲು ಅವಕಾಶವಿದ್ದು, ವಿದ್ಯಾರ್ಥಿಗಳು ತಮ್ಮ ಬಿಡುವಿನ ಸಮಯದಲ್ಲಿ ಆಲಿಸಬಹುದು. ಎಂದರು.

ಇದಕ್ಕೂ ಮುನ್ನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಪ್ರಾಧ್ಯಾಪಕಿ ಪ್ರೊ.ಸಪ್ನ, ಪ್ರೊ.ಕುಮಾರ್ ವಿಶೇಷ ಉಪನ್ಯಾಸ ನೀಡಿದರು. ಮೈಸೂರು ವಿವಿ ಕುಲಸಚಿವ(ಪರೀಕ್ಷಾಂಗ) ಪ್ರೊ.ಎನ್. ನಾಗರಾಜ ಮತ್ತಿತರರು ಉಪಸ್ಥಿತರಿದ್ದರು.

ಇಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕಾರ್ಮಿಕ ಸಂಘಟನೆಗಳಿಂದ ಕರೆ

ನವದೆಹಲಿ, ಫೆ.11– ಕೇಂದ್ರ ಸರ್ಕಾರದ ಕಾರ್ಮಿಕ, ಕೃಷಿ ಮತ್ತು ಆರ್ಥಿಕ ನೀತಿಗಳನ್ನು ವಿರೋಧಿಸಿ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಲಾಗಿದೆ. ಈ ಮುಷ್ಕರದಲ್ಲಿ ಕನಿಷ್ಠ 30 ಕೋಟಿ ಕಾರ್ಮಿಕರು ಭಾಗವಹಿಸಲಿದ್ದಾರೆ ಎಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್ ಹೇಳಿದ್ದಾರೆ. ಮುಷ್ಕರವು ದೇಶದಾದ್ಯಂತ 600 ಜಿಲ್ಲೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ.

ಮುಷ್ಕರಕ್ಕೆ ಕಾರಣವೇನು: ಸಂಯುಕ್ತ ಕಿಸಾನ್ ಮೋರ್ಚಾದ ಸಂಪೂರ್ಣ ಬೆಂಬಲದೊಂದಿಗೆ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐಎನ್‌ಟಿಯುಸಿ), ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ), ಹಿಂದ್ ಮಜ್ದೂರ್ ಸಭಾ (ಎಚ್‌ಎಂಎಸ್), ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ ಸೇರಿದಂತೆ 10 ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯು ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಕರೆ ನೀಡಿದೆ.

ಪ್ರಮುಖವಾಗಿ, ಕಳೆದ ವರ್ಷ (2025ರ ನವೆಂಬರ್) ಜಾರಿಗೆ ತಂದ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸುವಂತೆ ಆಗ್ರಹಿಸಿ ಈ ಬಂದ್‌ಗೆ ಕರೆ ನೀಡಲಾಗಿದೆ. ಜತೆಗೆ ಬಿತ್ತನೆ ಬೀಜಗಳ ಮಸೂದೆ–2025, ವಿದ್ಯುತ್ ತಿದ್ದುಪಡಿ ಮಸೂದೆ ಮತ್ತು ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಹಾಗೂ ಪ್ರಗತಿ ನಿಟ್ಟಿನಲ್ಲಿ ಭಾರತ ಪರಿವರ್ತನೆ (ಶಾಂತಿ) ಮಸೂದೆಯನ್ನು ಹಿಂಪಡೆಯಬೇಕು ಎಂಬ ಬೇಡಿಕೆಗಳು ಸೇರಿವೆ.

ಅಲ್ಲದೇ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮರುಸ್ಥಾಪನೆ, ವಿಕ್ಸಿತ್ ಭಾರತ–ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಕಾಯ್ದೆ 2025 ರದ್ದತಿ ಮತ್ತು ಭಾರತ–ಅಮೆರಿಕ ನಡುವಿನ ಪ್ರಸ್ತಾವಿತ ವ್ಯಾಪಾರ ಒಪ್ಪಂದ ರದ್ದುಗೊಳಿಸುವಂತೆಯೂ ಬೇಡಿಕೆಯಿಟ್ಟಿವೆ.

ವರದಿಗಳ ಪ್ರಕಾರ, ಒಡಿಶಾ ಮತ್ತು ಅಸ್ಸಾಂ ಸಂಪೂರ್ಣ ಬಂದ್ ಆಗಲಿದೆ. ಇತರ ರಾಜ್ಯಗಳ ಮೇಲೂ ಮುಷ್ಕರದ ಪರಿಣಾಮ ಬೀರಲಿದೆ ಎಂದು ಕೌರ್ ಹೇಳಿದ್ದಾರೆ.

ಶಾಲಾ ಮತ್ತು ಕಾಲೇಜುಗಳು: ದೇಶದಾದ್ಯಂತ ಶಾಲಾ–ಕಾಲೇಜುಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಬಂದಿಲ್ಲ. ಆದಾಗ್ಯೂ, ಕೇರಳ ಸೇರಿದಂತೆ ಕೆಲವು ರಾಜ್ಯಗಳಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿ ಸಂಘಟನೆಗಳು ಬಂದ್‌ಗೆ ತಮ್ಮ ಬೆಂಬಲ ಘೋಷಿಸಿವೆ. ಹಾಗಾಗಿ ಇಲ್ಲಿ ಶಾಲಾ–ಕಾಲೇಜುಗಳು ಮುಚ್ಚುವ ಸಾಧ್ಯತೆಯಿದೆ. ಅದೇ ರೀತಿ, ಸ್ಥಳೀಯ ಸಂಸ್ಥೆಗಳು ಬಂದ್‌ಗೆ ಬೆಂಬಲ ನೀಡಿದರೆ ಇತರ ರಾಜ್ಯಗಳ ಮೇಲೂ ಪರಿಣಾಮ ಬೀರಬಹುದು ಎಂದು ವರದಿಯಾಗಿದೆ.

ಸಾರಿಗೆ ಮತ್ತು ಬ್ಯಾಂಕಿಂಗ್ ಸೇವೆ: ಪ್ರತಿಭಟನೆ ಮತ್ತು ಸಂಭವನೀಯ ರಸ್ತೆ ತಡೆಯಿಂದಾಗಿ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಸೇವೆಗಳು ಸಹ ವ್ಯತ್ಯಯಗೊಳ್ಳಬಹುದು. ಜತೆಗೆ ಮಾರುಕಟ್ಟೆ, ಅಂಗಡಿಗಳು ಮತ್ತು ರೆಸ್ಟೋರೆಂಟ್‌ಗಳು ಸಹ ಮುಚ್ಚಲ್ಪಡಬಹುದು.

ಬ್ಯಾಂಕಿಂಗ್ ಸೇವೆಗಳ ಮೇಲೆ ಬಂದ್ ಬಿಸಿ ತಟ್ಟುವ ಸಾಧ್ಯತೆಯಿದೆ. ಬ್ಯಾಂಕ್ ಆಫ್ ಬರೋಡಾ, ಎಸ್‌ಬಿಐ, ಪಿಎನ್‌ಬಿ ಮತ್ತು ಇನ್ನೂ ಅನೇಕ ಬ್ಯಾಂಕುಗಳು ಸೇವೆಗಳಲ್ಲಿ ವ್ಯತ್ಯಯವಾಗುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಆದರೆ, ಆಸ್ಪತ್ರೆ ಮತ್ತು ಆಂಬುಲೆನ್ಸ್ ಸೇವೆಗಳು, ವಿಮಾನ ನಿಲ್ದಾಣಗಳು ಎಂದಿನಂತೆ ಕಾರ್ಯ ನಿರ್ವಹಿಸಲಿವೆ, ಎಟಿಎಂ ಮತ್ತು ಆನ್‌ಲೈನ್ ಬ್ಯಾಂಕಿಂಗ್ ಸೇವೆ ಲಭ್ಯವಿರಲಿದೆ.

PUBLIC NOTICE

NOTICE to General public is hereby given that Sri. Sujith Samuel Mathew S/o Joseph Mathew, Major, R/at No. 371, 4th Main, Vijayanagar, Mysuru has agreed to enter into the Agreement to sale and execute the General Power of Attorney of the Schedule Mentioned property to my Client M/s Green Leaf Ventures, No. 65, MLA Layout, 3rd Main, R.T.Nagar Bengaluru-560012 Rep: by Managing Partners free from all encumbrances. Any person having any right, title, interest, claim or demand of any nature whatsoever in respect of the schedule property, is hereby required to make the same known in writing along with the documentary proof thereof, to the undersigned within Fifteen days from the date of publication hereof, failing which the negotiations shall be completed, without any reference to such claims and the claims if any, shall be deemed to have been given up or waived.

SCHEDULE PROPERTY

All the Piece and parcel of the land Converted Vide Conversion order No. ALN64:87-88 dated 05.04.1988 to an extent of 15 Guntas and DC converted vide conversion order ALN (3) CR 378/2012-13 dated 26.02.2013 bearing Sy.No.2/1 measuring 2 Acers 15 Guntas and 2/2 measuring 15 Guntas in total measuring 2 Acers 30 Guntas, situated at Jayapura Village and Hobli, Mysuru Taluk and District.

Sd/- Narendra.D.V.Gowda
Advocate. No. 2858/1, 2nd Floor,
11 Main, Jayanagar, Mysuru-14
Date: 11-02-2026 Ph: 9845850819

ಕರ್ನಾಟಕ ಸರ್ಕಾರ

ಸಹಾಯಕ ಕೃಷಿ ನಿರ್ದೇಶಕರ ಕಾರ್ಯಾಲಯ, ನಂಜನಗೂಡು

Ph: 08221 - 295684 E mail -adananjangud@gmail.com

ಸಂಖ್ಯೆ:ಸಕೃನಿ/ನಂ/ಕೃ.ಉ.ಯಂ/ವಿಲೇ/ಟೆಂ.ಪ್ರ/2025–26 ದಿ: 09.02.2026

ಟೆಂಡರ್ ಪ್ರಕಟಣೆ

ಈ ಮೂಲಕ ಸಮಸ್ತ ಸಾರ್ವಜನಿಕರು/ಸಂಸ್ಥೆಯವರಿಗೆ ತಿಳಿಯಪಡಿಸುವುದೇನೆಂದರೆ ಸಹಾಯಕ ಕೃಷಿ ನಿರ್ದೇಶಕರು ನಂಜನಗೂಡು ತಾಲ್ಲೂಕುರವರ ಕಚೇರಿ ವ್ಯಾಪ್ತಿಯ ಬಿಳಿಗೆರೆ ಹೋಬಳಿಯಲ್ಲಿರುವ ಕೃಷಿ ಯಂತ್ರಧಾರೆ ಯೋಜನೆಯಡಿ ಬಾಡಿಗೆ ಆಧಾರಿತ ಸೇವಾ ಕೇಂದ್ರವಾದ ಶ್ರೀ ಕ್ಷೇತ್ರ ಧರ್ಮಸ್ಥಳ ರೂರಲ್ ಡೆವಲಪ್‌ಮೆಂಟ್ ಸಂಸ್ಥೆರವರಿಗೆ ಸಬ್ಸಿಡಿ ಮೊತ್ತದಲ್ಲಿ ಒದಗಿಸಲಾಗಿದ್ದ ಟ್ರಾಕ್ಟರ್/ಮಿನಿಟ್ರಾಕ್ಟರ್ ಹಾಗೂ ಇತರೆ ಕೃಷಿ ಯಂತ್ರೋಪಕರಣಗಳು ನಿರುಪಯುಕ್ತಗೊಂಡಿರುವುದರಿಂದ ಅವುಗಳನ್ನು ವಿಲೇವಾರಿ ಮಾಡಲು ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ದಿ: 26.02.2026ರ ಮದ್ಯಾಹ್ನ 1.00ಕ್ಕೆ ವಿಲೇವಾರಿ ಮಾಡಲಾಗುವುದು. ಆಸಕ್ತರು ಹೆಚ್ಚಿನ ವಿವರ ಹಾಗೂ ಮಾಹಿತಿಗಾಗಿ ಸರ್ಕಾರಿ ಕೆಲಸದ ದಿನಗಳಲ್ಲಿ ಈ ಕಚೇರಿಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಸಹಿ/– ಸಹಾಯಕ ಕೃಷಿ ನಿರ್ದೇಶಕರು, ನಂಜನಗೂಡು

DIPR/DDMYS/1641/KSMCA/932/2025-26

ಸಾರ್ವಜನಿಕ ತಿಳುವಳಿಕೆ ನೋಟೀಸು

ದಿವಂಗತ ಮಮ್ತಾಜ್ ಅಹಮದ್ ಸಿದ್ದಿಕಿ ಹಾಗೂ ಅವರ ಪತ್ನಿ ದಿವಂಗತ ಆರಿಫಾ ಸುಲ್ತಾನ ರವರ ಮಗನಾದ ಇರ್ಫಾನ್ ಅಹಮದ್ ಸಿದ್ದಿಕಿ ಅವರು ನನ್ನ ಕಕ್ಷಿದಾರನಾಗಿ ನನಗೆ ಪೂರೈಸಿದ ಮಾಹಿತಿಯಂತೆ ಈ ನೋಟಿಸನ್ನು ಸಾರ್ವಜನಿಕರ ಅವಗಾಹನೆಗಾಗಿ ನೀಡುತ್ತಿದ್ದೇನೆ. ನನ್ನ ಕಕ್ಷಿದಾರನ ತಾಯಿ ಆರಿಫಾ ಸುಲ್ತಾನ ನನ್ನ ಕಕ್ಷಿದಾರನೊಂದಿಗೆ ಸಮಪಾಲಿನ ಪಾಲುದಾರರಾಗಿ ಮೆ. ಕರ್ನಾಟಕ ಆಗ್ರೋ ಪ್ರಾಡಕ್ಟ್ಸ್ ಹೆಸರಿನ ಪಾಲುದಾರಿಕೆ ಸಂಸ್ಥೆಯನ್ನು ನಡೆಸುತ್ತಿದ್ದರು. ಆ ಸಂಸ್ಥೆಯ ಆದಾಯದಿಂದ ಈ ಕೆಳಕಂಡ ಜಮೀನುಗಳನ್ನು 1985 ರಿಂದ 1993ರ ಅವಧಿಯಲ್ಲಿ ಆರಿಫಾ ಸುಲ್ತಾನ ಅವರ ಹೆಸರಿನಲ್ಲಿ ಖರೀದಿಸಿದ್ದು, ಸಂಸ್ಥೆಯ ಸಮಪಾಲುದಾರನಾದ ಇರ್ಫಾನ್ ಅಹಮದ್ ಸಿದ್ದಿಕಿ ಅವರಿಗೂ ಈ ಕೆಳಕಂಡ ಜಮೀನುಗಳಲ್ಲಿ ಸಮಪಾಲಿನ ಮಾಲೀಕತ್ವ ಇರುತ್ತದೆ. ಆ ಜಮೀನುಗಳೆಂದರೆ, ಶ್ರೀರಾಂಪುರ ಗ್ರಾಮದ ಸರ್ವೇ ನಂಬರ್ 144ರಲ್ಲಿ 03 ಎಕರೆ 15 ಗುಂಟೆ, ಹಾಲಾಳು ಗ್ರಾಮದ ಸರ್ವೇ ನಂಬರ್ 2ರಲ್ಲಿ 06 ಎಕರೆ 12 ಗುಂಟೆ, ಶ್ರೀರಾಂಪುರ ಗ್ರಾಮದ ಸರ್ವೇ ನಂಬರ್ 150ರಲ್ಲಿ 03 ಎಕರೆ 16 ಗುಂಟೆ ಹಾಗೂ ಪರಸಯ್ಯನಹುಂಡಿ ಗ್ರಾಮದ ಎರಡು ಸರ್ವೇ ನಂಬರ್‌ಗಳಲ್ಲಿ, ಅಂದರೆ ಸರ್ವೇ ನಂಬರ್ 198ರಲ್ಲಿ 21 ಗುಂಟೆ ಹಾಗೂ ಸರ್ವೇ ನಂಬರ್ 199/1ಬಿ2 ರಲ್ಲಿ 01 ಎಕರೆ 29 ಗುಂಟೆ ಈ ಎಲ್ಲಾ ಜಮೀನುಗಳು ಕಸಬಾ ಹೋಬಳಿ ಮೈಸೂರು ತಾಲ್ಲೂಕಿನ ಇರುವಂತಹ ಜಮೀನುಗಳಾಗಿವೆ. ಸದರಿ ಜಮೀನುಗಳು ಸುಮಾರು ಮೂರು ದಶಕಗಳಿಂದ ನನ್ನ ಕಕ್ಷಿದಾರರ ಸ್ವಾಧೀನಾನುಭಾವದಲ್ಲಿರುತ್ತವೆ. ನನ್ನ ಕಕ್ಷಿದಾರರ ತಾಯಿ ಅಧಿಕವಾದ ರಕ್ತದೊತ್ತಡ ಹಾಗೂ ಅತಿಯಾದ ಸಕ್ಕರೆ ಕಾಯಿಲೆಗಳಿಂದ ಬಳಲುತ್ತಿದ್ದು, ಅವರು ಯಾವುದೇ ಸೂಕ್ತವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಮನಸ್ಥಿತಿಯಲ್ಲಿ ಇರಲಿಲ್ಲ. ಅಂತಹ ಸಂಧಿಗ್ಧ ಸಂದರ್ಭದಲ್ಲಿ ನನ್ನ ಕಕ್ಷಿದಾರರ ಸಹೋದರಿಯರಾದ ಹಸನತ್ ಜಹಾನ್, ಮುಸ್ರತ್ ಜಹಾನ್ ಸಿದ್ಧಿಕ, ಆಸ್ಮ ಸಿದ್ಧಿಕ ಹಾಗೂ ಆಯೇಷಾ ಸಿದ್ಧಿಕ ಇವರುಗಳು ಅರೀಫಾ ಸುಲ್ತಾನರನ್ನು ಬೆಂಗಳೂರಿನಲ್ಲಿ ಸೆರೆಯಾಳಿನಂತೆ ಜುಲೈ 2021 ರಿಂದ ಇಟ್ಟು ಕೊಂಡು ಅರೀಫಾ ಸುಲ್ತಾನರವರು ಬರೆದುಕೊಟ್ಟರೆಂಬಂತೆ ಬಿಂಬಿಸುತ್ತ ಐದು ದಾನಪತ್ರಗಳನ್ನು ಮೇಲ್ಕಾಣಿಸಿದ ಜಮೀನುಗಳ ಬಗ್ಗೆ ಸೃಷ್ಟಿಸಿಕೊಂಡು ಆ ಮುಖೇನ ಮೇಲ್ಕಾಣಿಸಿದ ಜಮೀನುಗಳಲ್ಲಿನ ವಿವಿಧ ಭಾಗಗಳಿಗೆ ತಾವು ಮಾಲೀಕರಾಗಿದ್ದೇವೆ ಎಂದು ಸುಳ್ಳನ್ನು ಹರಿಬಿಟ್ಟಿದ್ದು ತತ್ಸಂಬಂಧ ನನ್ನ ಕಕ್ಷಿದಾರರು ಅವರ ನಾಲ್ಕು ಜನ ಸಹೋದರಿಯರು ಹಾಗೂ ಇನ್ನೊಬ್ಬರ ಮೇಲೆ ಮೈಸೂರಿನ ನಾಲ್ಕನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರ ಘನ ನ್ಯಾಯಾಲಯದಲ್ಲಿ ಓ.ಎಸ್. ನಂ. 548/2025 ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ ಹಾಲಿ ಚಾಲ್ತಿಯಲ್ಲಿರುತ್ತದೆ. ಈ ಮೇಲ್ಕಾಣಿಸಿದ ಯಾವುದೇ ಸರ್ವೇ ನಂಬರ್ ಜಮೀನುಗಳು ಕೂಡ ನನ್ನ ಕಕ್ಷಿದಾರರ ಸಹೋದರಿಯರಾದ ಹಸನತ್ ಜಹಾನ್, ಮುಸ್ರತ್ ಜಹಾನ್ ಸಿದ್ಧಿಕ, ಆಸ್ಮ ಸಿದ್ಧಿಕ ಹಾಗೂ ಆಯೇಷಾ ಸಿದ್ಧಿಕರವರ ಸ್ವಾಧೀನದಲ್ಲಿ ಇರುವುದಿಲ್ಲ. ದಾವೆಯ ತೀರ್ಪಿನ ಬಗ್ಗೆ ಅಶಂಕೆಯನ್ನು ಹೊಂದಿರುವ ನನ್ನ ಕಕ್ಷಿದಾರರ ಸಹೋದರಿಯರು ದಾವೆಯ ತೀರ್ಪಿಗೂ ಮುಂಚಿತವಾಗಿ ಹೇಗಾದರೂ ಪ್ರಯತ್ನಿಸಿ ಮೇಲ್ಕಾಣಿಸಿದ ಜಮೀನುಗಳನ್ನು ಮಾರಾಟ ಮಾಡಿ ಕೈತೊಳೆದು ಕೊಂಡು ಹೋಗುವ ಹುನ್ನಾರದಲ್ಲಿ ಇದ್ದಾರೆಂದು ನನ್ನ ಕಕ್ಷಿದಾರರಿಗೆ ಬಂದಿರುವ ಮಾಹಿತಿಯ ಕಾರಣದಿಂದ ಈ ತಿಳುವಳಿಕೆ ನೋಟೀಸನ್ನು ಸಾರ್ವಜನಿಕರ ಹಿತಾಸಕ್ತಿಯನ್ನು ರಕ್ಷಿಸಿರುವ ಕಾರಣದಿಂದ ನೀಡಲಾಗಿದೆ. ಸಾರ್ವಜನಿಕರಲ್ಲಿ ಯಾರೇ ಅದರೂ ಈ ಜಮೀನುಗಳ ವಿಚಾರದಲ್ಲಿ ನನ್ನ ಕಕ್ಷಿದಾರರ ಸಹೋದರಿಯರೊಂದಿಗೆ ವ್ಯವಹರಿಸಿದ್ದಲ್ಲಿ ಅದರಿಂದ ಅವರಿಗೆ ಆಗುವ ಕಷ್ಟ–ನಷ್ಟಗಳಿಗೆ ಅವರೇ ಜವಾಬ್ದಾರರಾಗುತ್ತಾರೆ.

Sd/- K.R NAGARJA, B.Sc., LL.B.
Advocate, KAR/395/1981
No. 99. 1st Floor, Main Road,
Date : 08-02-2026 L.I.C Colony, Srirampura 2nd Stage, Mysore-570034

ಮೈಸೂರು ಮಿತ್ರ

ಕುಡಿಯುವ ನೀರಿಗೆ ತೊಂದರೆ ಆಗದಂತೆ ಎಚ್ಚರವಹಿಸಿ

ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಕಟ್ಟಾದೇಶ

ನಾಗಮಂಗಲ, ಫೆ.11– ತಾಲೂಕಿನ ಯಾವುದೇ ಗ್ರಾಮದಲ್ಲೂ ಕುಡಿಯುವ ನೀರಿಗೆ ಹಾಹಾಕಾರವಾಗದಂತೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ತಾಕೀತು ಮಾಡಿದ್ದಾರೆ.

ಪಟ್ಟಣದ ಕೃಷಿ ಇಲಾಖೆ ಸಭಾಂಗಣದಲ್ಲಿ ನಡೆದ ತಾಲೂಕಿನ ಗ್ರಾ. ಪಂ. ಅಭಿವೃದ್ಧಿ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಳೆದೆರಡು ವರ್ಷಗಳಿಂದ ಸರಿಯಾದ ಸಮಯಕ್ಕೆ ಮುಂಗಾರು ಮಳೆಯಾಗುತ್ತಿರುವುದರಿಂದ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಕಂಡು ಬಂದಿಲ್ಲವಾದರೂ ಅಧಿಕಾರಿಗಳು ಸುಮ್ಮನೆ ಕೂರದೆ ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಯಾವ ಯಾವ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆಯೋ ಅಂತಹ ಗ್ರಾಮಗಳನ್ನು ಗುರುತಿಸಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು.

ತಾಲೂಕಿನಲ್ಲಿ ಇ– ಸ್ವತ್ತು ಹೊಂದಿರದ 68 ಸಾವಿರ ಮನೆಗಳಲ್ಲಿ ಈಗಾಗಲೇ 16 ಸಾವಿರ ಮನೆ ಗಳಿಗೆ ಇ–ಸ್ವತ್ತು ನೀಡಲಾಗಿದೆ ಇನ್ನುಳಿದ 52 ಸಾವಿರ ಮನೆಗಳ ಇ–ಸ್ವತ್ತನ್ನು ಶೀಘ್ರದಲ್ಲಿ ವಿತರಿಸುವ ಕ್ರಮವನ್ನು ಗ್ರಾಮ ತಾಲೂಕು ಜಿಪಂ ಅಧಿಕಾರಿಗಳು ವಹಿಸಬೇಕು ದಾಖಲೆಗಳ ನೀಡುವಿಕೆಯನ್ನು ಸರಳೀಕರಿಸಿ ಈ ಸ್ವತ್ತುಗಳನ್ನು ತ್ವರಿತವಾಗಿ ನೀಡಬೇಕು ಅಧಿಕಾರಿಗಳು ಪಂಚಾಯಿತಿಗಳಿಗೆ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಸ್ಥಳದಲ್ಲೇ ಸಾಧ್ಯವಾದಷ್ಟು ಪರಿಹರಿಸಬೇಕು. ಸಾರ್ವಜನಿಕರನ್ನು ಕಚೇರಿಗಳಿಗೆ ಅಲೆದಾಡಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.



ಕೃಷಿ ಇಲಾಖೆ ಸಭಾಂಗಣದಲ್ಲಿ ನಡೆದ ಜಿಲ್ಲಾ ಉಸ್ತುವಾರಿ ಸಚಿವರು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿದರು.

ಪಟ್ಟಣದ ತಾಪಂ ಕಚೇರಿ ಶಿಥಿಲಗೊಂಡ ಕಾರಣ ಕಚೇರಿಯನ್ನು ಕೆಡವಿ 5 ಕೋಟಿ ರೂ ಅಂದಾಜಿನಲ್ಲಿ ನೂತನವಾಗಿ ಕಟ್ಟಡವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಇದಕ್ಕೆ 1.5 ಕೋಟಿ ರೂ ಬಿಡುಗಡೆಯಾಗಿದ್ದು, ಅತಿ ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ. ಶಿಥಿಲಾವಸ್ಥೆಯಲ್ಲಿರುವ ತಾಲೂಕಿನ ಪಾಲ ಅಗ್ರಹಾರ ಹಾಗೂ ಆರಣಿ ಗ್ರಾಪಂ ಕಟ್ಟಡ ಕೆಡವಿ ನೂತನ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.

ತಾಲೂಕಿನ ಯಾವುದೇ ಗ್ರಾಮದಲ್ಲಿ ಯಾರಿ ಗಾದರೂ ನಿವೇಶನ ಇಲ್ಲದಿದ್ದರೆ ಅಂತಹವರಿಗೆ ನಿವೇಶನ ನೀಡಲು ಸರ್ಕಾರ ನಿರ್ಧರಿಸಿದೆ. ಈಗಾಗಲೇ ನಿವೇಶನ ರೈತ ಫಲಾನುಭವಿಗಳ ವರದಿ ತಯಾರಿಸಿದ್ದು ಮತ್ತೊಮ್ಮೆ ಸರ್ವೆ ನಡೆಸಿ ಇನ್ನು ಹೆಚ್ಚಿನ ನಿವೇಶನ ಅವಶ್ಯಕತೆ ಇದ್ದರೆ ತಾಲೂಕು ಮತ್ತು ಜಿ. ಪಂ. ಅಧಿಕಾರಿಗಳು ಪ್ರತಿ ಗ್ರಾಮಕ್ಕೂ ಭೇಟಿ ನೀಡಿ ಪರಿಶೀಲಿಸಿ ನಿವೇಶನ ರೈತರನ್ನು ಪಟ್ಟಿ ಮಾಡಿ ವರದಿ ನೀಡುವಂತೆ ಸೂಚಿಸಿ ಈ ವರದಿ ಆಧಾರದ ಮೇಲೆ ಅವಶ್ಯವಿರುವವರಿಗೆ ಸರ್ಕಾರಿ ಜಾಗದಲ್ಲಿ ನಿವೇಶನ ಹಂಚಿಕೆ ಮಾಡ ಲಾಗುವುದು ಎಂದರು.

> ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವ 540 ಸಿಬ್ಬಂದಿಗಳನ್ನು ಜ.26 ರಿಂದ ಪೂರ್ವಾನ್ವಯವಾಗುವಂತೆ ಖಾಯಂಗೊಳಿಸಲಾಗುವುದು ಇದರಲ್ಲಿ ನಾಗಮಂಗಲ ತಾಲೂಕಿನ 86 ಮಂದಿ ನೌಕರರು ಖಾಯಂಗೊಳ್ಳಲಿದ್ದಾರೆ 20 ವರ್ಷಗಳಿಂದ ನೆನೆಗುದ್ದಿಗೆ ಬಿದ್ದಿದ್ದ ನೌಕರರ ಕಾಯಂ ಕನಸನ್ನು ರಾಜ್ಯ ಸರ್ಕಾರ ನನಸು ಮಾಡಿದೆ 86 ಕುಟುಂಬಗಳ ಜೀವನ ಭದ್ರತೆಯನ್ನು ಸರ್ಕಾರ ಖಾಯಂಗೊಳಿಸಿದೆ.
>
> –ಚಲುವರಾಯ ಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ

ನಿರಾಪೇಕ್ಷಣಾ ಪತ್ರ ಬೇಡ: ವಿದ್ಯುತ್ ಸರಬರಾಜು ಪಡೆದುಕೊಳ್ಳಲು 1,200 ಚದರ ಅಡಿ ಅಳತೆಯಲ್ಲಿ ಮನೆ ಕಟ್ಟುವವರಿಗೆ ನಿರಾಪೇಕ್ಷಣಾ ಪತ್ರದ ಅವಶ್ಯಕತೆ ಇರುವುದಿಲ್ಲ ಮನೆಯಲ್ಲಿರುವ ಜಾಗದ ಒಡೆತನ ಅಥವಾ ಜಾಗ ತಮ್ಮದೇ ಎಂದು ದೃಢೀಕರಿಸುವ ಯಾವುದಾದರೂ ದಾಖಲೆ ನೀಡಿದರು ವಿದ್ಯುತ್ ಸರಬರಾಜು ನೀಡಬೇಕು ಎಂದು ಸೂಚಿಸಿದರು.

ತಾಪಂ ಸಿಇಒ ಸತೀಶ್. ಚೆಸ್ಕಾಂ ಇಇ ಮಂಜುನಾಥ್. ಎಇಇ ತಿಲಕ್. ಕೃಷಿ ಇಲಾಖೆ ಅಧಿಕಾರಿ ಹರೀಶ್ ಮೊದಲಾದ ಅಧಿಕಾರಿಗಳು ಉಪಸ್ಥಿತರಿದ್ದರು.

ಕೃಷಿ ಭೂಮಿಯಲ್ಲಿ ಅಕ್ರಮ ಸಾಕಾಣಿಕೆ ಕೇಂದ್ರ; ದೂರು



ಕೃಷಿ ಭೂಮಿಯಲ್ಲಿ ಅಕ್ರಮ ಸಾಕಾಣಿಕೆ ಕೇಂದ್ರ ನಡೆಸಲಾಗುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು ತಹಸೀಲ್ದಾರ್‌ಗೆ ದೂರು ನೀಡಿದರು.

ಶ್ರೀರಂಗಪಟ್ಟಣ, ಫೆ.11–ತಾಲೂಕಿನ ಪಾಲಹಳ್ಳಿ ಗ್ರಾ ಪಂ. ವ್ಯಾಪ್ತಿ ಕೆಂಪಲಿಂಗಾ ಪುರ ಗ್ರಾಮದ ಕೃಷಿ ಭೂಮಿಯಲ್ಲಿ ಅಕ್ರಮವಾಗಿ ನಾಯಿ ಮತ್ತು ಕುದುರೆ ಸಾಕಾಣಿಕೆ ಕೇಂದ್ರವನ್ನು ನಡೆಸಲಾಗುತ್ತಿದೆ ಎಂದು ಆರೋಪಿಸಿ ರೈತ ಮುಖಂಡ ಕೆ.ಎಸ್. ನಂಜುಂಡೇಗೌಡರ ನೇತೃತ್ವದಲ್ಲಿ ಗ್ರಾಮಸ್ಥರು ತಹಸೀಲ್ದಾರ್‌ಗೆ ದೂರು ನೀಡಿದ್ದಾರೆ.

ಕೆಂಪಲಿಂಗಾಪುರದ ಸರ್ವೆ ನಂ. 32/1ರ ಕೃಷಿ ಭೂಮಿಯಲ್ಲಿ ಯಾವುದೇ ಪರವಾನಗಿ ಪಡೆಯದೆ ಅಕ್ರಮವಾಗಿ ಶೆಡ್ ನಿರ್ಮಿಸಿ, ಸುಮಾರು 30ರಿಂದ 40 ವಿವಿಧ ತಳಿಗಳ ನಾಯಿಗಳನ್ನು ತಳಿ ಅಭಿವೃದ್ಧಿ ಉದ್ದೇಶಕ್ಕಾಗಿ ಸಾಕಲಾಗುತ್ತಿದೆ. ಇದರಿಂದ ಹೊರ ಬರುವ ಪ್ರಾಣಿಗಳ ತ್ಯಾಜ್ಯ ಮತ್ತು ತೊಳೆದ ನೀರನ್ನು ಪಕ್ಕದ ರೈತರ ಜಮೀನುಗಳಿಗೆ ನೇರವಾಗಿ ಬಿಡುತ್ತಿರುವುದರಿಂದ ಬೆಳೆಗಳು ನಾಶವಾಗುತ್ತಿವೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಾಕಾಣಿಕೆ ಕೇಂದ್ರದ ಮಾಲೀಕರು ನಾಯಿ ಸಾಕಾಣಿಕೆಗೆ ಸಂಬಂಧಿಸಿದಂತೆ ಯಾವುದೇ ಅನುಮತಿ ಪತ್ರ ಅಥವಾ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಹೊಸದಾಗಿ ಕಟ್ಟಡ ನಿರ್ಮಿಸಲು ಅಥವಾ ತಳಪಾಯ ತೆಗೆದಿರುವ ಜಾಗಕ್ಕೆ ಯಾವುದೇ ಅಧಿಕೃತ ಅನುಮತಿ ಪಡೆದಿರುವ ಬಗ್ಗೆ ದಾಖಲೆಗಳು ಇಲ್ಲದಿರುವುದು ಸ್ಥಳ ಪರಿಶೀಲನೆಯ ವೇಳೆ ಕಂಡುಬಂದಿದೆ. ಪ್ರಾಣಿಗಳ ಮಲ ಮೂತ್ರ ಹಾಗೂ ಅವನ್ನು ತೊಳೆದ ನೀರು ರೈತರ ಜಮೀನುಗಳಿಗೆ ಮತ್ತು ಕಿರು ಕಾಲುವೆಗಳಿಗೆ ಸೇರುತ್ತಿದ್ದು, ನೀರನ್ನು ಶುದ್ಧೀಕರಿಸಲು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಪಂಚಾಯಿತಿ ವರದಿಯಲ್ಲಿ ದೃಢಪಟ್ಟಿದೆ.

ರೈತ ಮುಖಂಡ ಕೆ.ಎಸ್. ನಂಜುಂಡೇಗೌಡ ರೈತರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಕೂಡಲೇ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಗ್ರಾಮಸ್ಥರಾದ ಕೃಷ್ಣಣ್ಣ, ಪಾಲಹಳ್ಳಿ ಚಂದ್ರು, ವಿನಯ್, ಜಗದೀಶ್, ಕೇಶವ, ನಂದೀಶ್, ರಾಜು, ಪ್ರಸನ್ನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನೇಣು ಬಿಗಿದುಕೊಂಡು ರೈತ ಆತ್ಮಹತ್ಯೆ



ಪಾಂಡವಪುರ,ಫೆ.11–ಸಾಲಗಾರರ ಕಾಟ ತಾಳಲಾರದೆ ರೈತನೋರ್ವ ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಸೀತಾಪುರದಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಗ್ರಾಮದ ಲಿಂಗರಾಜು(48) ಆತ್ಮಹತ್ಯೆ ಮಾಡಿಕೊಂಡ ರೈತ. ಮೃತರಿಗೆ ಪತ್ನಿ ಭಾರತಿ, ಪುತ್ರಿ ಚಂದ್ರಿಕಾ, ಪುತ್ರ ಮಹದೇವುರನ್ನು ಅಗಲಿದ್ದಾರೆ. ಮೃತ ಲಿಂಗರಾಜು ಅವರಿಗೆ ಎಕರೆ ಜಮೀನು ಇದ್ದು, ಮಗಳ ಮದುವೆಗೆಂದು ಖಾಸಗಿಯಾಗಿ 8 ಲಕ್ಷ ಸಾಲ ಮಾಡಿದ್ದರೆನ್ನಲಾಗಿದೆ. ಸಾಲಗಾರರ ಕಾಟ ಹೆಚ್ಚಾದ ಹಿನ್ನೆಲೆಯಲ್ಲಿ ಮಂಗಳವಾರ ಸಂಜೆ 6 ಗಂಟೆ ಸಮಯದಲ್ಲಿ ಜಮೀನಿಗೆ ನೀರು ಹಾಯಿಸುವುದಾಗಿ ಹೇಳಿ ಹೋದವರು ರಾತ್ರಿ 9 ಗಂಟೆಯಾದರೂ ಮನೆಗೆ ಬರಲಿಲ್ಲ. ಇದರಿಂದ ಗಾಬರಿಗೊಂಡ ಮಗ ಮಹದೇವು ಹುಡುಕಿಕೊಂಡು ಹೋದಾಗ, ಜಮೀನಿನಲ್ಲಿದ್ದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿದುಬಂದಿದೆ. ಈ ಸಂಬಂಧ ಮೃತ ಲಿಂಗರಾಜು ಅವರ ಪತ್ನಿ ಭಾರತಿ ಅವರು ಕ್ಯಾತನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ದೆಹಲಿ ನಾಯಕರ ಸೂಚನೆ ಪಾಲನೆ ಮಾಡಬೇಕು

ಪಾಂಡವಪುರ, ಫೆ.11–ನಾನು ಎನ್‌ಡಿಎ ಮೈತ್ರಿ ಪರವಾಗಿದ್ದೇನೆ. ಮೈತ್ರಿಯ ರೀತಿರಿವಾಜುಗಳನ್ನು ತೀರ್ಮಾನಿಸೋದು ದೆಹಲಿಯ ನಾಯಕರು ಹಾಗಾಗಿ ಅವರ ಸೂಚನೆಯನ್ನು ನಾನೂ ಸೇರಿದಂತೆ ಎಲ್ಲಾ ಮೈತ್ರಿಯ ನಾಯಕರು ಪಾಲನೆ ಮಾಡಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಂಗೌಡ ಹೇಳಿದರು.

ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತ ಅಶೋಕ್ ಅವರ ಮನೆಗೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಮೈತ್ರಿ ವಿಚಾರವಾಗಿ ಹಾದಿಬೀದಿಯಲ್ಲಿ ಚರ್ಚಿಸೋದು ಬೇಡ ನಾಲ್ಕು ಗೋಡೆ ಮಧ್ಯೆ ಚರ್ಚಿಸಬೇಕೆಂಬ ಸಲಹೆಕೊಟ್ಟಿರುವುದರಿಂದ ನಾನು ಸೈಲೆಂಟ್ ಆಗಿದ್ದೇನೆ. ಜೆಡಿಎಸ್‌ನವರು ಸಹ ಮುಂದಿನ ಮುಖ್ಯಮಂತ್ರಿ, ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಚರ್ಚಿಸಬಾರದು, ಆ ವಿಚಾರವಾಗಿ ದೆಹಲಿಯ ನಾಯಕರು ಚರ್ಚಿಸಿ ತೀರ್ಮಾನಿಸಲಿದ್ದಾರೆ ಎಂದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಕಾರ್ಯಕರ್ತರನ್ನು ಉದ್ದೇಶದಿಂದ ಮಾತನಾಡಿದಾಗ ನಮ್ಮ ಕಾರ್ಯಕರ್ತರಿಗೆ ಸ್ವಲ್ಪಗೊಂದಲ ಇತ್ತು. ಹಾಗಾಗಿ ಗೊಂದಲ ಬಗೆಹರಿಸುವ ಕೆಲಸ ಮಾಡಿದ್ದೇವೆ ಅಷ್ಟೆ, ಚಿಕ್ಕವರೇ ಆಗಲಿ, ದೊಡ್ಡವರೇ ಆಗಲಿ ರಚನಾತ್ಮಕ ಸಲಹೆಗಳು ಬಂದರೆ ಅದನ್ನು ಎರಡೂ ಕಡೆಯವರು ಪಾಲನೆ ಮಾಡಬೇಕು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ವಿಚಾರವಾಗಿ ಎರಡು ಪಕ್ಷದ ಕಾರ್ಯಕರ್ತರೊಂದಿಗೆ ಚರ್ಚಿಸಿ ಮೈತ್ರಿಯ ನಾಯಕರು ತೀರ್ಮಾನಸಲಿದ್ದಾರೆ ಎಂದು ತಿಳಿಸಿದರು.



ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಂಗೌಡರನ್ನು ಅಭಿನಂಧಿಸಲಾಯಿತು.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ 2028ರವರೆಗೂ ಎಲ್ಲಾ ಚುನಾವಣೆಗಳನ್ನು ಎದುರಿಸುತ್ತೇವೆ. 2028ಕ್ಕೂ ವಿಜಯೇಂದ್ರ ಅವರ ನೇತೃತ್ವದಲ್ಲಿ ಹಾಗೂ ಎನ್‌ಡಿಎ ಮೈತ್ರಿಕೂಟದಿಂದ 160ಕ್ಕೂ ಅಧಿಕ ಸ್ಥಾನ ಗೆಲ್ಲಲಿದ್ದೇವೆ ಎಂದು ವಿಶ್ವಾಸವ್ಯಕ್ತಪಡಿಸಿದರು. ಪಕ್ಷ ನನಗೆ ಸಂಘಟನೆ ಮಾಡುವ ಜವಾಬ್ದಾರಿ ಕೊಟ್ಟಿದೆ. ಪಕ್ಷ ಬೆಳೆಸುವುದಷ್ಟೇ ನನ್ನ ಧ್ಯೇಯವಾಗಿದೆ. ಹೀಗಾಗಲೆ ಪಕ್ಷ ಸಂಘಟನೆ ಮಾಡುವ ವಿಚಾರವಾಗಿ ಮಂಡ್ಯದಲ್ಲಿ ಹಲವು ಸಂಘಟನಾತ್ಮಕ ಕಾರ್ಯಕರ್ತರ ಸಭೆಯನ್ನು ನಡೆಸಿದ್ದೇವೆ, ಇದೀಗ ಮೈಸೂರು ಜಿಲ್ಲೆಯಲ್ಲಿ ಸಂಘಟನಾತ್ಮಕ ಸಭೆ ನಡೆಸಿ ಪಕ್ಷ ಸಂಘಟನೆ ಮಾಡುವ ಕೆಲಸ ಮಾಡುತ್ತಿದ್ದೇವೆ ಎಲ್ಲರೂ ಜೊತೆಗೂಡಿ ಪಕ್ಷ ಸಂಘಟನೆ ಮಾಡಲಿ ದ್ದೇವೆ ಎಂದರು.

ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ತಾಲೂಕು ಅಧ್ಯಕ್ಷ ಧನಂಜಯ್, ಟೌನ್ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಅಶೋಕ್, ಆನಂದ್, ನವೀನ್ ಸೇರಿದಂತೆ ಹಲವರು ಇದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮಂಡ್ಯ, ಫೆ.11– ನಗರದ ಮಹಾವೀರ ಸರ್ಕಲ್ ಪಕ್ಕದಲ್ಲಿರುವ ಗಾಂಧಿ ಪಾರ್ಕ್ ಆಟೋ ನಿಲ್ದಾಣದ ಬಳಿ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದೆ ಎಂದು ಜಿಲ್ಲಾ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮೃತನ ವಯಸ್ಸು 50 ವರ್ಷಗಳಾಗಿದ್ದು, ಯಾರಾದರೂ ವಾರಸುದಾರರಿದ್ದರೇ ದೂ: 0821–224500 ಅನ್ನು ಸಂಪರ್ಕಿಸುವಂತೆ ಮಂಡ್ಯ ಪಶ್ಚಿಮ ಪೊಲೀಸ್ ಉಪಠಾಣೆ ಸಬ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಡರ್‌ಪಾಸ್ ಸೇತುವೆಗೆ ಸಾರಿಗೆ ಬಸ್ ಡಿಕ್ಕಿ : 18 ಮಂದಿಗೆ ಗಾಯ

ಮದ್ದೂರು: ಅಂಡರ್ ಪಾಸ್ ಸೇತುವೆಗೆ ಸಾರಿಗೆ ಸಂಸ್ಥೆಯ ಬಸ್ ಡಿಕ್ಕಿ ಹೊಡೆದ ಪರಿಣಾಮ ಚಾಲಕ ಹಾಗೂ ನಿರ್ವಾಹಕ ಸೇರಿದಂತೆ 18 ಮಂದಿ ಗಾಯಗೊಂಡಿರುವ ಘಟನೆ ನಗರದ ಸಮೀಪದ ಕೆ. ಕೋಡಿಹಳ್ಳಿ ಬಳಿಯ ಬೆಂಗಳೂರು ಮೈಸೂರು ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಬುಧವಾರ ಬೆಳಿಗ್ಗೆ ಸಂಭವಿಸಿದೆ.



ಬೆಂಗಳೂರಿಂದ ವಿರಾಜಪೇಟೆಯ ಕಡೆ ಹೋಗುತ್ತಿದ್ದ ಬಸ್‌ನ ಸ್ಟೈರಿಂಗ್ ಲಾಕ್ ಆದ ಹಿನ್ನೆಲೆಯಲ್ಲಿ ಈ ಘಟನೆ ಸಂಭವಿಸಿದೆ ಎಂದು ಹೇಳಲಾಗಿದೆ.

ಘಟನೆಯಲ್ಲಿ ನಾಗಮ್ಮ, ಪೂಜಾ, ಶಿಲ್ಪಾ, ಜಯಮ್ಮ, ಲತಾ, ಇಂಪನಾ, ನಾಗರಾಜು, ರಂಗಪ್ಪ ಸೇರಿದಂತೆ 18 ಮಂದಿ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಅವರಲ್ಲಿ ಜಯಮ್ಮ ಎಂಬುವರ ತಲೆಗೆ ತೀವ್ರ ಪೆಟ್ಟಾಗಿರುವ ಹಿನ್ನೆಲೆಯಲ್ಲಿ ಮಂಡ್ಯದ ಮಿಮ್ಸ್ ಗೆ ಚಿಕಿತ್ಸೆಗೆ ದಾಖಲು ಮಾಡಲಾಗಿದೆ. ಉಳಿದ ಪ್ರಯಾಣಿಕರಿಗೆ ಮದ್ದೂರಿನ ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಗಿದೆ.

ಘಟನೆಯಿಂದ ರಸ್ತೆಯ ಎರಡೂ ಬದಿಯಲ್ಲಿ ಕಿಮೀವರೆಗೆ ಸಂಚಾರ ಅಸ್ತವ್ಯಸ್ತವಾಗಿತ್ತು, ಘಟನಾ ಸ್ಥಳಕ್ಕೆ ಮದ್ದೂರಿನ ಸಂಚಾರ ಪೊಲೀಸರು ಆಗಮಿಸಿ ಅಪಘಾತವಾಗಿದ್ದ ಬಸ್ಸನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಟ್ಟರು. ನಗರದ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರನೇ ಪುಟದಿಂದ

ಭರವಸೆ ಇವತ್ತಿಗೂ ಇದೆ

ಸುದ್ದಿಗಾರ ರೊಂದಿಗೆ ಮಾತಾಡಿದ ಅವರು, ಬಿಜೆಪಿ ಮುಖಂಡ ನಿಗೆ ಸಚಿವ ಸ್ಥಾನಮಾನ ನೀಡುವ ಮೂಲಕ ಕಾಂಗ್ರೆಸ್ ಎಲ್ಲರನ್ನು ಗೌರವಿಸುತ್ತದೆ. ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗಬೇಕು ಎಂಬ ಭಾವನೆ ಮುಖ್ಯಮಂತ್ರಿಗಳಿಗೆ ಇರುವುದ ರಿಂದ ಮಾಡಿರಬಹುದು. ಇದರಲ್ಲಿ ತಪ್ಪೇ ನಿಲ್ಲ ಎಂದರು. ನಮ್ಮ ಸಹೋದರ ಶಿವಕುಮಾರ್ ದೆಹಲಿ ಪ್ರವಾಸಕ್ಕೆ ಹೋಗುವಾಗ ಚುನಾವಣೆ ವಿಚಾರವಾಗಿ ಸಭೆ ಮಾಡಲು ಕರೆದಿದ್ದಾರೆ ಎಂಬುದಾಗಿ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಅವರು ಉಪಮುಖ್ಯಮಂತ್ರಿಯಾದ ನಂತರ ದೆಹಲಿಗೆ ಹೋಗುತ್ತಿಲ್ಲ. ಕಳೆದ 40 ವರ್ಷಗಳಿಂದ ನಿರಂತರವಾಗಿ ಹೋಗುತ್ತಿದ್ದಾರೆ.

ತಿಂಗಳಿಗೆ ಒಂದು ಅಥವಾ ಎರಡು ಬಾರಿ ಹೋಗುತ್ತಾರೆ. ಈಗ ಅವರು ಪಕ್ಷದ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿ. ಆದ್ದರಿಂದ ಸರ್ಕಾರದ ಕೆಲಸಗಳು ಇರುತ್ತವೆ. ದೆಹಲಿಗೆ ಹೋದಾಗ, ರಾಜಕೀಯವಾಗಿ ಅಲ್ಲದಿದ್ದರೂ ಕುಶಲೋಪರಿ ಚರ್ಚೆಗೆ ನಾಯಕರನ್ನು ಭೇಟಿ ಮಾಡುತ್ತಾರೆ.

ಸಂಸತ್ ಅಧಿವೇಶನ ನಡೆಯುತ್ತಿದೆ. ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಕೇಂದ್ರ ಮಂತ್ರಿಗಳ ಭೇಟಿ ಮಾಡುತ್ತಾರೆ. ಭದ್ರಾ ಮೇಲ್ದಂಡೆ ಯೋಜನೆ, ಬೆಂಗಳೂರಿನ ವಿಚಾರವಾಗಿ ಚರ್ಚೆ ಮಾಡುತ್ತಾರೆ. ದೆಹಲಿ ಪ್ರವಾಸ ಶಿವಕುಮಾರ್ ಅವರಿಗೆ ಹೊಸತಲ್ಲ. ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರ ಹೇಳಿಕೆ ವಿಚಾರವಾಗಿ ಉಪಮುಖ್ಯಮಂತ್ರಿ ಈಗಾಗಲೇ ತಿಳಿಸಿದ್ದಾರೆ. ಅವರಷ್ಟು ತಿಳುವಳಿಕೆ ನಮಗಿಲ್ಲ. ಅವರಷ್ಟು ದೊಡ್ಡವರು ನಾವಲ್ಲ. ಅವರು ಏನು ಹೇಳುತ್ತಾರೋ ಅದೇ ವೇದವಾಕ್ಯ ಎಂದು ವ್ಯಂಗ್ಯವಾಡಿದರು. ನಮಗೆ ಸಿಗುವ ನೋಟಿಸ್ ಯತೀಂದ್ರ ಅವರಿಗೆ ಏಕಿಲ್ಲ ಎಂಬುದಾಗಿ ಶಾಸಕ ಇಕ್ಬಾಲ್ ಹುಸೇನ್ ಹೇಳಿರುವುದರಲ್ಲಿ ತಪ್ಪೇನಿಲ್ಲ. ಎಲ್ಲರಿಗೂ ಒಂದೇ ನೀತಿ ಇರಬೇಕು. ಅವರೇ ಹೈಕಮಾಂಡ್ ಆಗಿರುವುದರಿಂದ ಏನೂ ಸಮಸ್ಯೆ ಇಲ್ಲ. ದೆಹಲಿ ಪ್ರವಾಸದಲ್ಲಿ ರಾಜಕಾರಣ ಏನೂ ಇಲ್ಲ. ಎಲ್ಲಾ ರಾಜಕಾರಣ ಕರ್ನಾಟಕದಲ್ಲಿ ಮಾಧ್ಯಮಗಳ ಬಳಿಯೇ ಇದೆ.

ಶಾಸಕರ ವಿದೇಶ ಪ್ರವಾಸ ಹಾಗೂ ಶಿವಕುಮಾರ್ ದೆಹಲಿ ಭೇಟಿ ವಿಷಯ ಹುಟ್ಟಾಕುತ್ತಿದ್ದರೆ, ಅದು ರಾಜಕೀಯ ದುರುದ್ದೇಶದಿಂದ ಮಾತ್ರ. ಶಿವಕುಮಾರ್ ಅವರಿಗೆ ಕೆಟ್ಟ ಹೆಸರು ತರಲು ನಮ್ಮ ಪಕ್ಷದ ಕೆಲವರು ಮಾಡುತ್ತಿರಬಹುದು. ನಮ್ಮ ಪಕ್ಷದವರು ಮಾಡುತ್ತಿದ್ದಾರೋ, ವಿರೋಧ ಪಕ್ಷದವರು ಮಾಡುತ್ತಿದ್ದಾರೋ ಗೊತ್ತಿಲ್ಲ. ಆದರೆ ಇದರಲ್ಲಿ ಶಿವಕುಮಾರ್ ಪಾಲುದಾರರಲ್ಲ.

ಕಾಲವೇ ಉತ್ತರ ನೀಡುತ್ತೆ: ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ. ಆ ಕಾಲ ಹತ್ತಿರ ಬರುತ್ತಿರುವುದಾಗಿ ನಾನು ಭಾವಿಸಿದ್ದು, ನೀವುಗಳೂ ಹಾಗೇ ಭಾವಿಸಿಕೊಳ್ಳಿ.

ಜಿಬಿಎ ಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ಮಾಡಿಕೊಳ್ಳುತ್ತಿದೆ. ನಮ್ಮ ಕ್ಷೇತ್ರಗಳಲ್ಲಿ ನಾವು ತಯಾರಿ ಮಾಡಿಕೊಳ್ಳುತ್ತಿದ್ದೇವೆ. ಫಲಿತಾಂಶ ಒಳ್ಳೆಯದಾಗುತ್ತದೋ, ಕೆಟ್ಟದಾಗುತ್ತದೋ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಮಾಡಲೇಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ.

ನಾವು ದೆಹಲಿಗೆ ಹೋದಾಗ, ಹೈಕಮಾಂಡ್ ನಾಯಕರು ಸಿಕ್ಕಾಗೆಲ್ಲ ಭೇಟಿ ಮಾಡುತ್ತಲೇ ಇರುತ್ತೇವೆ. ಕೆಲವು ವಿಚಾರ ಚರ್ಚೆ ಮಾಡುತ್ತಲೇ ಇರುತ್ತೇವೆ. ಅದು ನಮ್ಮ ಹಾಗೂ ಅವರ ಬಾಂಧವ್ಯದ ವಿಚಾರ, ಪಕ್ಷ, ಕ್ಷೇತ್ರ ಹಾಗೂ ಇತರೆ ವಿಷಯ ಚರ್ಚೆ ಮಾಡುತ್ತೇವೆ. ಕೆಲವರು ನಿರ್ದಿಷ್ಟ ಕೆಲಸಕ್ಕಾಗಿ ದೆಹಲಿಗೆ ಹೋಗುತ್ತಾರೆ. ಶಿವಕುಮಾರ್ ಆ ವರ್ಗಕ್ಕೆ ಸೇರುವುದಿಲ್ಲ ಎಂದರು.

ದೇಶಭಕ್ತಿ ಗೀತೆ 'ವಂದೇ ಮಾತರಂ'

ಬಾರಿಗೆ ಈ ಹಾಡನ್ನು ಹಾಡಲಾಯಿತು. ಅಲ್ಪಾವಧಿಯಲ್ಲಿಯೇ, ದೇಶಭಕ್ತಿಯ ಸಂಕೇತ ವಾದ ಈ ಹಾಡು ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತೀಯ ಕ್ರಾಂತಿಕಾರಿಗಳ ನೆಚ್ಚಿನ ಹಾಡು ಮತ್ತು ಮುಖ್ಯ ಘೋಷಣೆಯಾಯಿತು. ದೇಶಾದ್ಯಂತ, ಕ್ರಾಂತಿಕಾರಿ ಮಕ್ಕಳು, ಯುವಕರು, ವಯಸ್ಕರು ಮಾತ್ರವಲ್ಲದೆ, ಭಾರತೀಯ ಮಹಿಳೆಯರು ಸಹ ಸ್ವಾತಂತ್ರ್ಯ ಹೋರಾಟದ ಅದೇ ಘೋಷಣೆಯನ್ನು ಪ್ರತಿಧ್ವನಿಸಿದರು.

ಹಿಂದಿಗಿಂತ ಈಗ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ!

ಎಂದರು. ಪರ್ಸೆಂಟೇಜ್ ಬಗ್ಗೆ ಹೊರಗೆ ಎಲ್ಲಾ ಮಾತನಾಡಲಾಗದ ಪರಿಸ್ಥಿತಿ ಇದೆ ಎಂದಾಯಿತು ಎಂಬುದಕ್ಕೆ ಪ್ರತಿಕ್ರಿಯಿಸಿ, ನಾವು ಗಾಜಿನ ಮನೆಯಲ್ಲಿದ್ದೇವೆ. ಮಾಡಿರುವ ಕೆಲಸಕ್ಕೆ ಹಣ ಬಿಡುಗಡೆ ಮಾಡಬೇಕೆಂಬುದೇ ನಮ್ಮ ಒತ್ತಾಯ ಎಂದು ಹೇಳಿದರು. ಪ್ಯಾಕೇಜ್ ವ್ಯವಸ್ಥೆಯಲ್ಲಿ ಇಲ್ಲಿರುವ ನಾವ್ಯಾರೂ ಇಲ್ಲ. ಕೆಲವೇ ಮಂದಿ ಹೊರರಾಜ್ಯದ ಗುತ್ತಿಗೆದಾರರು ಪ್ಯಾಕೇಜ್ ಸಿಸ್ಟಂ ಮಾಡುತ್ತಿದ್ದಾರೆ. ಅವರು ಕ್ಯಾಬಿನೆಟ್‌ನಲ್ಲೇ ಅನುಮೋದನೆ ಪಡೆದುಕೊಳ್ಳುತ್ತಾರೆ. 10 ಜಿಲ್ಲೆಗಳು ಒಳಗೊಂಡಂತೆ ಒಂದು ಟೆಂಡರ್ ಮಾಡಿ ಅನುಮೋದನೆ ಪಡೆಯುತ್ತಾರೆ. ಅವರೇನು 10 ಜಿಲ್ಲೆಗಳಲ್ಲಿ ನೇರವಾಗಿ ಕೆಲಸ ಮಾಡಿಸುವುದಿಲ್ಲ. ಕಾರ್ಪೋರೇಟ್ ಆಫೀಸ್‌ನಲ್ಲಿ ಕೂತು ನಮ್ಮವರಿಗೆ ಉಪ ಗುತ್ತಿಗೆ ನೀಡುತ್ತಾರೆ ಎಂದು ತಿಳಿಸಿದರು.

ಕಾನೂನು ಹೋರಾಟಕ್ಕೆ ತೊಡಕೇನು? ಎಂಬುದಕ್ಕೆ ಉತ್ತರಿಸಿ, ವರ್ಷಗಟ್ಟಲೇ ಆಗುತ್ತದೆ. ಹಾಗಾಗಿ ಈ ಹೋರಾಟ ಹಮ್ಮಿಕೊಂಡಿದ್ದೇವೆ ಪ್ರತಿಭಟನೆ ಹಾಗೂ ನಮ್ಮ ಬಾಕಿ ಹಣ ಕೇಳುವುದು ನಮ್ಮ ಹಕ್ಕು. 30 ಸಾವಿರ ಗುತ್ತಿಗೆದಾರು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶಗೊಳ್ಳುತ್ತಿದ್ದೇವೆ ಸರ್ಕಾರ ಸ್ಪಂದಿಸದೇ ಇದ್ದಲ್ಲಿ ಮಾ.5ರಿಂದ ವಾರಕಾಲ ಕೆಲಸ ಸ್ಥಗಿತ ಮಾಡುತ್ತೇವೆ ಎಂದು ಹೇಳಿದರು.

'ಜನಗಣಮನ'ಕ್ಕೂ ಮುನ್ನ 'ವಂದೇ ಮಾತರಂ' ಕಡ್ಡಾಯ

ಭಾಷಣ ಮಾಡುವ ಮೊದಲು ಮತ್ತು ನಂತರ, ಹಾಗೆಯೇ ರಾಜ್ಯಪಾಲರ ಆಗಮನ ಮತ್ತು ಭಾಷಣಗಳ ಮೊದಲು ಮತ್ತು ನಂತರವೂ ಸೇರಿದೆ. ಯಾವುದೇ ಸಾಕ್ಷ್ಯಚಿತ್ರಗಳ ಪ್ರದರ್ಶನಗಳ ಮಧ್ಯೆ ಗೀತೆ ಹಾಡಿದರೆ ಎದ್ದುನಿಲ್ಲುವ ಅಗತ್ಯವಿಲ್ಲ.6 ಚರಣಗಳಿರುವ ವಂದೇ ಮಾತರಂ ಗೀತೆಯನ್ನು ಹಾಡುವುದು ಕಡ್ಡಾಯ ಈ ನಿರ್ದೇಶನವನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಸಚಿವಾಲಯಗಳು ಮತ್ತು ಸಾಂವಿಧಾನಿಕ ಸಂಸ್ಥೆಗಳಿಗೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ನೀಡಲಾಗಿದೆ.

ಇಲ್ಲಿಯವರೆಗೆ, ವಂದೇ ಮಾತರಂ ಹಾಡಲು ಯಾವುದೇ ಅಧಿಕೃತ ಶಿಷ್ಟಾಚಾರವಿರಲಿಲ್ಲ. ಆದರೆ ಜನ ಗಣ ಮನ ಗೀತೆಯು ರಾಗ, ಸಮಯ ಮತ್ತು ಗಾಯನದ ಬಗ್ಗೆ ಸ್ಪಷ್ಟ ನಿಯಮಗಳನ್ನು ಹೊಂದಿತ್ತು. ಹಾಡಿನ ವಿಸ್ತೃತ, ಆರು–ಚರಣಗಳ ಆವೃತ್ತಿಯನ್ನು ಇಲ್ಲಿಯವರೆಗೆ ಅಧಿಕೃತ ಕಾರ್ಯಕ್ರಮಗಳಲ್ಲಿ ಹಾಡಿರಲಿಲ್ಲ, ಆದರೆ ಈಗ ಅದನ್ನು ಕಡ್ಡಾಯಗೊಳಿಸಲಾಗಿದೆ.

ಈ ಆದೇಶವು ಕಾರ್ಯಕ್ರಮಗಳನ್ನು ಮೂರು ವರ್ಗಗಳಾಗಿ ವರ್ಗೀಕರಿಸುತ್ತದೆ. ಮೊದಲ ವರ್ಗವು ನಾಗರಿಕ ಪುರಸ್ಕಾರ ಸಮಾರಂಭಗಳು, ಔಪಚಾರಿಕ ರಾಜ್ಯ ಕಾರ್ಯಕ್ರಮಗಳಲ್ಲಿ ರಾಷ್ಟ್ರಪತಿಗಳ ಆಗಮನ ಮತ್ತು ನಿರ್ಗಮನ, ಅಖಿಲ ಭಾರತ ರೇಡಿಯೋ ಮತ್ತು ದೂರದರ್ಶನದಲ್ಲಿ ರಾಷ್ಟ್ರಪತಿಗಳು ರಾಷ್ಟ್ರವನ್ನುದ್ದೇಶಿಸಿ ಮಾಡುವ ಭಾಷಣದ ಮೊದಲು ಮತ್ತು ನಂತರ, ಔಪಚಾರಿಕ ಕಾರ್ಯಕ್ರಮಗಳಲ್ಲಿ ರಾಜ್ಯಪಾಲರು ಅಥವಾ ಲೆಫ್ಟಿನೆಂಟ್ ಗವರ್ನರ್ ಆಗಮನ ಮತ್ತು ನಿರ್ಗಮನ ಮತ್ತು ಮೆರವಣಿಗೆಗಳಲ್ಲಿ ರಾಷ್ಟ್ರಧ್ವಜದ ಪ್ರಸ್ತುತಿ ಮುಂತಾದ ರಾಷ್ಟ್ರಗೀತೆಯನ್ನು ಪ್ರತ್ಯೇಕವಾಗಿ ನುಡಿಸುವ ಸಂದರ್ಭಗಳನ್ನು ಒಳಗೊಂಡಿದೆ.

ಎರಡನೇ ವರ್ಗವು ಸಾಮೂಹಿಕ ಗಾಯನದ ಜೊತೆಗೆ ಹಾಡನ್ನು ನುಡಿಸುವ ಘಟನೆಗಳನ್ನು ಒಳಗೊಂಡಿದೆ. ಇವುಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವುದು, ಸಾಂಸ್ಕೃತಿಕ ಮತ್ತು ವಿಧ್ಯುಕ್ತ ಕಾರ್ಯಕ್ರಮಗಳು (ಮೆರವಣಿಗೆಗಳನ್ನು ಹೊರತುಪಡಿಸಿ), ಮತ್ತು ಯಾವುದೇ ಸರ್ಕಾರಿ ಅಥವಾ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ರಾಷ್ಟ್ರಪತಿಗಳ ಆಗಮನ ಮತ್ತು ನಿರ್ಗಮನದಂತಹ ಸಂದರ್ಭಗಳು ಸೇರಿವೆ. ಈ ಉದ್ದೇಶಕ್ಕಾಗಿ, ಅಗತ್ಯವಿದ್ದರೆ, ಗಾಯಕ ಗೀತೆ, ಧ್ವನಿ ವ್ಯವಸ್ಥೆ ಮತ್ತು ಹಾಡಿನ ಸಾಹಿತ್ಯ ವಿತರಣೆಯನ್ನು ಸಹ ಶಿಫಾರಸು ಮಾಡಲಾಗಿದೆ.

ಮೂರನೇ ವರ್ಗವು ಶಾಲಾ ಕಾರ್ಯಕ್ರಮಗಳಂತಹ 'ವಂದೇ ಮಾತರಂ' ಹಾಡಬಹುದಾದ ಸಂದರ್ಭಗಳನ್ನು ಒಳಗೊಂಡಿದೆ. ಶಾಲೆಗಳು ಸಾಮೂಹಿಕವಾಗಿ ರಾಷ್ಟ್ರಗೀತೆಯನ್ನು ಹಾಡುವ ಮೂಲಕ ದಿನವನ್ನು ಪ್ರಾರಂಭಿಸಬಹುದು ಮತ್ತು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಚಿಹ್ನೆಗಳಿಗೆ ಗೌರವವನ್ನು ಮೂಡಿಸಲು ಪ್ರಯತ್ನಿಸಬೇಕು ಎಂದು ಆದೇಶವು ಹೇಳುತ್ತದೆ.

ಶಾಲೆಗಳಲ್ಲೂ ವಂದೇ ಮಾತರಂ ಹಾಡಲು ಸೂಚನೆ: ಎಲ್ಲಾ ಶಾಲೆಗಳು ತಮ್ಮ ದಿನವನ್ನು ಸಾಮೂಹಿಕವಾಗಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಪ್ರಾರಂಭಿಸಲಾಗುತ್ತದೆ. ಸರ್ಕಾರದ ಆದೇಶ ಹಿನ್ನೆಲೆಯಲ್ಲಿ ಇನ್ನು ಮುಂದೆ ಅದರ ಜತೆ ವಂದೇ ಮಾತರಂ ಕೂಡ ಹಾಡಬೇಕಿದೆ.

ಚಿತ್ರಮಂದಿರಗಳಿಗೆ ವಿನಾಯಿತಿ: ಸಿನಿಮಾ ಮಂದಿರಗಳಲ್ಲಿ 'ವಂದೇ ಮಾತರಂ' ನುಡಿಸುವುದು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಹಾಡುವಾಗ ಎದ್ದುನಿಲ್ಲದಿದ್ದರೆ ಶಿಕ್ಷೆಗೆ ಅರ್ಹ: ರಾಷ್ಟ್ರದ ಗೌರವಕ್ಕೆ ಅಪಮಾನ ತಡೆ ಕಾಯ್ದೆ ಅಡಿಯಲ್ಲಿ ರಾಷ್ಟ್ರಗೀತೆಗೆ (ಮತ್ತು ಈಗ ರಾಷ್ಟ್ರೀಯ ಗೀತೆ) ಅಡ್ಡಿಪಡಿಸುವ ಅಥವಾ ಇತರರು ಗೌರವಿಸುವುದನ್ನ ತಡೆಯುವ ಯಾವುದೇ ವ್ಯಕ್ತಿಗೆ ಗರಿಷ್ಠ 3 ವರ್ಷಗಳ ಜೈಲು ಶಿಕ್ಷೆ ಅಥವಾ ದಂಡಕ್ಕೆ ಅರ್ಹರಾಗಿರುತ್ತಾರೆ.

ಮಧ್ಯವರ್ತಿಗಳಂತೂ ಜಾಸ್ತಿ ಇದ್ದಾರೆ!

ಸೇರಿದಂತೆ ಸುಮಾರು 3 ವರ್ಷಗಳಿಂದ ಈವರೆಗೆ 37 ಸಾವಿರ ಕೋಟಿ ರೂ. ಬಿಲ್ ಹಣ ಸರ್ಕಾರದಲ್ಲಿ ಬಾಕಿ ಉಳಿದಿದೆ. ಇದನ್ನು ಬಿಡುಗಡೆ ಮಾಡುವಂತೆ ಎರಡೂವರೆ ವರ್ಷದಿಂದ ಮುಖ್ಯಮಂತ್ರಿಗಳಿಗೆ ಹಾಗೂ ಹಲವು ಸಚಿವರಿಗೆ ಪತ್ರ ಬರೆಯಲಾಗಿದೆ. ಕೆಲ ಸಚಿವರನ್ನು ಖುದ್ದು ಭೇಟಿ ಮಾಡಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಬಾಕಿ ಹಣ ಪಾವತಿಯಾಗಿದ್ದರೂ ಅದು ಕೇವಲ 10ರಿಂದ 15 ಪರ್ಸೆಂಟ್ ಅಷ್ಟೆ. ಹೀಗಾಗಿ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದೇವೆ. ಕಳೆದ ಎರಡೂವರೆ ವರ್ಷದಲ್ಲಿ ಸಿಎಂ ಕೇವಲ ಒಂದು ಸಭೆ ಕರೆದಿದ್ದರೂ ನಮ್ಮ ಸಾಕಷ್ಟು ಸಮಸ್ಯೆಗಳು ಬಗೆಹರಿಯುತ್ತಿದ್ದವು. ಆದರೆ ಸಿಎಂ ಅವರಿಗೆ ನಮ್ಮ ಬಗ್ಗೆ ಏಕೆ ಈ ತಾತ್ಸಾರ ಎಂಬುದೇ ಅರ್ಥವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜ್ವಲಂತ ಸಮಸ್ಯೆ ಅನುಭವಿಸುತ್ತಿದ್ದೇವೆ: ಬಿಲ್ ಹಣ ಬಾಕಿ ಮಾತ್ರವಲ್ಲದೆ, ನಾವು ಅನೇಕ ಜ್ವಲಂತ ಸಮಸ್ಯೆಗಳನ್ನು ಅನುಭವಿಸುತ್ತಿದ್ದೇವೆ. ಗಣಿ ಮತ್ತು ಭೂವಿಜ್ಞಾನ ಇಲಾಖೆ ಪರವಾನಗಿ ಪಡೆಯುವುದು, ಅದಕ್ಕೆ ಆಗುವ ಐದು ಪಟ್ಟು ದಂಡ ಹಾಗೂ ಜಿಎಸ್‌ಟಿ ಸಂಬಂಧಿತ ಸಮಸ್ಯೆಗಳು ಇವೆ ಈ ಸಂಬಂಧ ಮುಖ್ಯಮಂತ್ರಿಗಳನ್ನು ಹಲವು ಬಾರಿ ಭೇಟಿ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದು ದೂರಿದರು.

ಈ ಸರ್ಕಾರದಲ್ಲಿ ಡಬಲ್: ಸರ್ಕಾರ ಬರಲು ಅಷ್ಟೋ ಇಷ್ಟೋ ನಾವೂ ಕಾರಣಕರ್ತರಲ್ಲವೇ. ಇದೇ ಮುಖ್ಯಮಂತ್ರಿಗಳು ಅಂದು ನಮ್ಮ ಸರ್ಕಾರ ಬಂದರೆ 1 ರೂಪಾಯಿ ಪೇಮೆಂಟ್ ತೆಗೆದುಕೊಳ್ಳಲ್ಲ, ಎನ್‌ಓಸಿಗೆ ದುಡ್ಡು ತೆಗೆದುಕೊಳ್ಳಲ್ಲ ಎಂದಿದ್ದರು. ಆದರೆ ಈಗ 3 ವರ್ಷಗಳ ಹಳೆ ಬಿಲ್ ತೆಗೆದುಕೊಳ್ಳಲು ಹಳೇ ಸರ್ಕಾರ (ಹಿಂದಿನ ಬಿಜೆಪಿ ಅವಧಿ) ತೆಗೆದುಕೊಳ್ಳುತ್ತಿದ್ದಕ್ಕಿಂತಲೂ ಈಗ ಡಬಲ್ ಕಮಿಷನ್ ನಡೆಯುತ್ತಿದೆ. ಇದು ಬಿಲ್ ಹಣ ಬಿಡುಗಡೆಗೆ ಮಾತ್ರ ಹೇಳುತ್ತಿದ್ದು, 40, 60 ಪರ್ಸೆಂಟ್ ಕಮಿಷನ್ ವಿಚಾರವಲ್ಲ ಎಂದರು.

ಒಂದು ನಯಾಪೈಸೆ ಈ ಸರ್ಕಾರದಲ್ಲಿ ನಮಗೆ ಅನುಕೂಲವಾಗುತ್ತಿಲ್ಲ. ನಾವು ಸಾಲ ಮಾಡಿ, ಬಡ್ಡಿ ಪಾವತಿಸಿ, ಒಡವೆ ಅಡ ಮಾನವಿಟ್ಟು ಕೆಲಸ ಮಾಡುತ್ತಿಸುತ್ತಿದ್ದೇವೆ. ನಮಗೆ ಈಗ ಉಳಿದಿರುವುದು ಹೋರಾಟದ ಹಾದಿಯೊಂದೇ. ಹಾಗಾಗಿ ಮಾ.5ರಂದು ಚಾಲ್ತಿಯಲ್ಲಿರುವ ಕೆಲಸಗಳನ್ನು ಸ್ಥಗಿತಗೊಳಿಸಿ ಹೋರಾಟ ನಡೆಸಲಿದ್ದೇವೆ ಎಂದು ಹೇಳಿದರು.

ಈಗ ಪ್ಯಾಕೇಜ್ ಸಿಸ್ಟಂ: ಸಣ್ಣ ನೀರಾವರಿ ಇಲಾಖೆಯಲ್ಲಿ 3,600 ಕೋಟಿ ಬಿಲ್ ಬಾಕಿ ಉಳಿದಿದೆ. ಜೊತೆಗೆ ಈಗ ಪ್ಯಾಕೇಜ್ ಸಿಸ್ಟಂ ಹೆಚ್ಚಾಗುತ್ತಿದೆ. ಸಿದ್ದರಾಮಯ್ಯ ನವರು ವಿಪಕ್ಷ ನಾಯಕರಾಗಿದ್ದಾಗ ಪ್ಯಾಕೇಜ್ ವ್ಯವಸ್ಥೆ ಸರಿಯಲ್ಲವೆಂದು ಅಂದಿನ ಮುಖ್ಯಮಂತ್ರಿಗಳ ವಿರುದ್ಧ ಕಿಡಿಕಾರುತ್ತಿದ್ದರು. ಆದರೆ ಈಗ ಇವರು ಅದೇ ರೀತಿ ಪ್ಯಾಕೇಜ್ ಮಾಡುತ್ತಿದ್ದಾರಲ್ಲ. ಈ ಪ್ಯಾಕೇಜ್‌ನಲ್ಲಿ ಬಲಾಢ್ಯ ಗುತ್ತಿಗೆದಾರರು ಕ್ಯಾಬಿನೆಟ್‌ನಲ್ಲೇ ಅನುಮೋದನೆ ಪಡೆದುಕೊಳ್ಳುತ್ತಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಸಚಿವರ ಗಮನಕ್ಕೆ ತಂದಿದ್ದೇವೆ. ಆದರೆ ಕ್ಯಾಬಿನೇಟ್‌ನಲ್ಲೇ ಅನುಮೋದನೆ ಆದ ಕಾರಣ ನಮ್ಮ ಕೈಮೀರಿದೆ ಎನ್ನುತ್ತಾರೆ. ಈ ಸರ್ಕಾರದಲ್ಲಿ ಮಧ್ಯವರ್ತಿಗಳು ಬಹಳ ಮಂದಿ ಇದ್ದು, ನಮಗಿಂತ ಸಣ್ಣ ಗುತ್ತಿಗೆದಾರರಾದ ಇವರು ಮಧ್ಯಸ್ಥಿಕೆ ವಹಿಸಿಕೊಂಡು ಇಲಾಖೆಯ ಮುಖ್ಯ ಇಂಜಿನಿಯರ್‌ಗಳನ್ನೇ ತಮ್ಮ ಕಚೇರಿಗೆ ಕರೆಸಿಕೊಳ್ಳುತ್ತಾರೆ. ಇದು ನಿಜಕ್ಕೂ ವಿಪರ್ಯಾಸ ಎಂದು ವಿಷಾದಿಸಿದರು. ರಾಜ್ಯ ಉಪಾಧ್ಯಕ್ಷರಾದ ಸಿ.ಡಿ.ಕೃಷ್ಣ, ಗುರುಸಿದ್ದಪ್ಪ, ಕೃಷ್ಣೇಗೌಡ, ರಾಜ್ಯ ಖಜಾಂಚಿ ನಾಗರಾಜು, ಜಿಲ್ಲಾಧ್ಯಕ್ಷ ಎ.ಜಿ.ಸುರೇಶ್ ಮತ್ತಿತರರು ಗೋಷ್ಠಿಯಲ್ಲಿ ಹಾಜರಿದ್ದರು.

ಪ್ರಾಣಬಿಟ್ಟ ಕಂದಮ್ಮಗಳು...!

ವರ್ಷಾ ಹಾಗೂ ಅಣ್ಣನ ಮಗಳು ಭಾನು ಳನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾಗ ಅಜ್ ಮೋನಿ ಶಾಲೆಗೆ ಸೇರಿದ ಬಸ್ ಟರ್ನ್ ತೆಗೆದುಕೊಳ್ಳುವಾಗ ಅಜಾಗರೂಕತೆಯಿಂದ ಬೈಕ್‌ಗೆ ಡಿಕ್ಕಿ ಹೊಡೆದು ಈ ಅಪಘಾತ ಸಂಭವಿಸಿದೆ.

ಬಸ್ ಹರಿದು ಗಂಭೀರವಾಗಿ ಗಾಯಗೊಂಡಿದ್ದ ಮಕ್ಕಳು ಒದ್ದಾಡಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತ ಸುದ್ದಿ ತಿಳಿಯುತ್ತಿದ್ದಂತೆಯೇ ಉತ್ತರ ವಿಭಾಗದ ಸಂಚಾರ ಡಿಸಿಪಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹೆಣ್ಣೂರು ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಶಾಲಾ ಬಸ್ ಚಾಲಕನನ್ನು ಬಂಧಿಸಲಾಗಿದೆ.

ವಿಂಡೀಸ್, ದ.ಆಫ್ರಿಕಾ, ಆಸೀಸ್‌ಗೆ ಜಯ

ಮುಂಬೈ, ಫೆ.11– ಟಿ20 ವಿಶ್ವಕಪ್ ಪಂದ್ಯಾವಳಿಯ ಬುಧವಾರ ನಡೆದ ಪಂದ್ಯಗಳಲ್ಲಿ ಇಂಗ್ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್, ಆಫ್ಘಾನಿಸ್ತಾನದ ವಿರುದ್ಧ ದ.ಆಫ್ರಿಕಾ ಹಾಗೂ ಐರ್ಲೆಂಡ್ ವಿರುದ್ಧ ಆಸ್ಟ್ರೇಲಿಯಾ ಭರ್ಜರಿ ಜಯಗಳಿಸಿದೆ.



ದ.ಆಫ್ರಿಕಾ ಆಟಗಾರರ ಸಂಭ್ರಮ.

ವಿಂಡೀಸ್‌ಗೆ ಜಯ: ಮುಂಬೈನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 196 ರನ್ ಗಳಿಸಿತು. ತಂಡದ ಪರ ರುದರ್ ಫೋರ್ಡ್ 76, ರೋಸ್ಟನ್ ಚೇಸ್ 34, ಹೆಟ್ಮೆಯರ್ 23, ರೋಮನ್ ಪೋವೆಲ್ 14, ಜೇಸನ್ ಹೋಲ್ಡರ್ 33 ರನ್ ಗಳಿಸಿದರು. ಇಂಗ್ಲೆಂಡ್ ಪರ ಓವರ್ ಟರ್ನ್ ಹಾಗೂ ಆದಿಲ್ ರಶೀದ್ ತಲಾ 2 ವಿಕೆಟ್ ಕಿತ್ತರು.

ನಂತರ ಗುರಿ ಬೆನ್ನತ್ತಿದ ಇಂಗ್ಲೆಂಡ್ 19 ಓವರ್‌ಗಳಲ್ಲಿ 166 ರನ್ ಆಲೌಟಾಗುವ ಮೂಲಕ 30 ರನ್‌ಗಳ ಸೋಲು ಅನುಭವಿಸಿತು. ತಂಡದ ಪರ ಸ್ಯಾಮ್ ಕರನ್ 43, ಸಾಲ್ಟ್ 30, ಬಟ್ಲರ್ 21, ಜಾಕೋಬ್ ಬೆಥಲ್ 33, ಹ್ಯಾರಿ ಬ್ರೂಕ್ 17 ರನ್ ಗಳಿಸಿದರು. ವಿಂಡೀಸ್ ಪರ ಗುಡ್ಕೇಶ್ ಮೋಟಿ 3, ರೋಸ್ಟನ್ ಚೇಸ್ 2, ಶೇಫರ್ಡ್, ಜೋಸೆಫ್ ಹಾಗೂ ಅಕಿಲ್ ಹೊಸೇನ್ ತಲಾ ಒಂದೊಂದು ವಿಕೆಟ್ ಪಡೆದರು. ಶೆರ್ಫಾನೆ ರುದರ್‌ಫೋರ್ಡ್ ಪಂದ್ಯಶ್ರೇಷ್ಠರಾದರು.

ಆಸೀಸ್‌ಗೆ ಗೆಲುವು: ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾ ಐರ್ಲೆಂಡ್ ವಿರುದ್ಧ 67 ರನ್‌ಗಳ ಗೆಲುವು ದಾಖಲಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ 20 ಓವರ್ ಗಳಲ್ಲಿ 6 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಗೆಲುವಿನ ಗುರಿ ಬೆನ್ನತ್ತಿದ ಐರ್ಲೆಂಡ್ 16.5 ಓವರ್‌ಗಳಲ್ಲಿ 115 ರನ್‌ಗೆ ಆಲೌಟಾಯಿತು.

ಆಸ್ಟ್ರೇಲಿಯಾ ಪರ ಜೋಶ್ ಇಂಗ್ಲಿಸ್ 37, ಗ್ರೀನ್ 21, ಮ್ಯಾಟ್ ರೆನ್ಷಾ 37, ಮಾರ್ಕಸ್ ಸ್ಟಾಯಿನಿಸ್ 45 ರನ್ ಗಳಿಸಿದರು. ಐರ್ಲೆಂಡ್ ಪರ ಮಾರ್ಕ್ ಅಡೈರ್ ಎರಡು ವಿಕೆಟ್, ಮ್ಯಾಥ್ ಹಂಪ್ರೇಯ್ಸ್, ಜಾರ್ಜ್ ಡಾಕ್ರೆಲ್ ಹಾಗೂ ಹ್ಯಾರಿ ಟೆಕ್ಟರ್ ತಲಾ ಒಂದೊಂದು ವಿಕೆಟ್ ಪಡೆದರು.

ಐರ್ಲೆಂಡ್ ಪರ ರಾಸ್ ಅಡೈರ್ 12, ಗ್ಯಾರೆತ್ ಡೆಲಾನಿ 11, ಜಾರ್ಜ್ ಡಾಕ್ರೆಲ್ 41, ಮಾರ್ಕ್ ಅಡೈರ್ 12 ರನ್ ಗಳಿಸಿದರು. ನಥನ್ ಎಲ್ಲಿಸ್ ಹಾಗೂ ಆಡಂ ಜಂಪಾ ತಲಾ 4 ವಿಕೆಟ್ ಪಡೆದರು. ನಥನ್ ಎಲ್ಲಿಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸೂಪರ್ ಓವರ್‌ನಲ್ಲಿ ಹರಿಣಗಳಿಗೆ ಗೆಲುವು: ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ದಕ್ಷಿಣ ಆಫ್ರಿಕಾ ಸೂಪರ್ ಓವರ್‌ನಲ್ಲಿ 4 ರನ್‌ಗಳ ಗೆಲುವು ಸಾಧಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ ಕ್ವಿಂಟನ್ ಡಿಕಾಕ್ 59, ರಿಕೆಲ್ಟನ್ 61 ರನ್ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 187 ರನ್ ಗಳಿಸಿತು. ನಂತರ ಗುರಿ ಬೆನ್ನತ್ತಿದ ಅಫ್ಘಾನಿಸ್ತಾನ ರೆಹಮಾನುಲ್ಲಾ ಗುರ್ಬಾಜ್ 84, ಓಮರ್‌ಜೈ 22 ರನ್ ನೆರವಿನಿಂದ 19.4 ಓವರ್‌ಗಳಲ್ಲಿ 187 ರನ್‌ಗೆ ಆಲೌಟಾಗುವ ಮೂಲಕ ಪಂದ್ಯ ಟೈ ಆಯಿತು.

ನಂತರ ನಡೆದ ಮೊದಲ ಸೂಪರ್ ಓವರ್‌ನಲ್ಲಿ ಅಫ್ಘಾನಿಸ್ತಾನ 17 ರನ್ ಗಳಿಸಿದರೇ, ದಕ್ಷಿಣ ಆಫ್ರಿಕಾ ಸಹ 17 ರನ್ ಗಳಿಸಿದ ಪರಿಣಾಮ ಪಂದ್ಯ ಮತ್ತೆ ಟೈ ಆಯಿತು. ನಂತರ ನಡೆದ 2ನೇ ಸೂಪರ ಓವರ್‌ನಲ್ಲಿ ದಕ್ಷಿಣ ಆಫ್ರಿಕಾ 23 ರನ್ ಗಳಿಸಿದರೇ, ಅಫ್ಘಾನಿಸ್ತಾನ 1 ವಿಕೆಟ್ ನಷ್ಟಕ್ಕೆ 19 ರನ್ ಗಳಿಸಿ ಸೋಲು ಅನುಭವಿಸಿತು. ದ.ಆಫ್ರಿಕಾ ಪರ ಲುಂಗಿ ಎನ್‌ಗಿಡಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.



ವಿಕೆಟ್ ಉರುಳಿಸಿದ ಸಂಭ್ರಮದಲ್ಲಿ ಆಸಿಸ್ ಆಟಗಾರರು.

ಭಾರತವನ್ನು ಮಾರಾಟ ಮಾಡಲು ನಾಚಿಕೆಯಾಗುವುದಿಲ್ಲವೇ?

ಲೋಕಸಭೆಯಲ್ಲಿ ರಾಹುಲ್ ಗಾಂಧಿ ಅಬ್ಬರದ ಭಾಷಣ

ನವದೆಹಲಿ, ಫೆ.11– ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬುಧವಾರ ಬಜೆಟ್ ಚರ್ಚೆಯಲ್ಲಿ ಮೋದಿ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರೆ.



ರಾಹುಲ್ ಗಾಂಧಿ

ಭಾರತ– ಅಮೆರಿಕಾ ವ್ಯಾಪಾರ ಒಪ್ಪಂದದ ಬಗ್ಗೆ ಅವರು ವಿವರವಾಗಿ ಚರ್ಚಿಸಿದರು. ಒಪ್ಪಂದವು ಸಂಪೂರ್ಣವಾಗಿ ಏಕಪಕ್ಷೀಯವಾಗಿದ್ದು, ಕೇಂದ್ರ ಸರ್ಕಾರ ಭಾರತವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

ನಾವು ಸ್ಥಿರತೆಯ ಪ್ರಪಂಚದಿಂದ ಅಸ್ಥಿರತೆಯ ಜಗತ್ತಿಗೆ ಚಲಿಸುತ್ತಿದ್ದೇವೆ, ಯುದ್ಧದ ಯುಗ ಮುಗಿದಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ ಆದರೆ, ನಾವು ಯುದ್ಧದ ಯುಗಕ್ಕೆ ಚಲಿಸುತ್ತಿದ್ದೇವೆ ಎಂದು ಅವರು ಹೇಳಿದರು. ಅಪಾಯಕಾರಿ ಜಗತ್ತಿಗೆ ಚಲಿಸುವಾಗ, ನಾವು ನಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಬೇಕು ಎಂದು ರಾಹುಲ್ ಗಾಂಧಿ ಗುಡುಗಿದ್ದಾರೆ.

ಇಂಧನ ಮತ್ತು ಹಣಕಾಸು ಶಸ್ತ್ರಾಸ್ತ್ರೀಕರಣಗೊಳ್ಳುತ್ತಿದೆ ಎಂದು ಬಜೆಟ್ ಒಪ್ಪಿಕೊಂಡಿದೆ, ಆದರೆ ಇದನ್ನು ಪರಿಹರಿಸುವ ಯಾವುದೇ ಅಂಶ ಬಜೆಟ್‌ನಲ್ಲಿಲ್ಲ ಎಂದು ರಾಹುಲ್ ಗಾಂಧಿ ಹೇಳಿದರು. ನಮ್ಮ ಜನರು, ಡೇಟಾ, ಆಹಾರ ಸರಬರಾಜು ಮತ್ತು ಇಂಧನ ವ್ಯವಸ್ಥೆಗಳನ್ನು ನಾವು ರಕ್ಷಿಸಬೇಕು ಎಂದು ಅವರು ಹೇಳಿದರು. ಲೋಕಸಭೆಯಲ್ಲಿ ಬಜೆಟ್ ಚರ್ಚೆಯ ಸಂದರ್ಭದಲ್ಲಿ, ರಾಹುಲ್ ಗಾಂಧಿ, ನಾವು ಅಪಾಯಕಾರಿ ಪ್ರಪಂಚದತ್ತ ಸಾಗುತ್ತಿದ್ದೇವೆ ಮತ್ತು ನಮ್ಮ ಸಾಮರ್ಥ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ದೇಶದ ದೊಡ್ಡ ಶಕ್ತಿ ನಮ್ಮ ಜನರಲ್ಲಿದೆ ಎಂದು ಹೇಳಿದರು. ಬಿಜೆಪಿಯು ತನ್ನ ಆರ್ಥಿಕ ಸ್ವರೂಪವನ್ನು ರಕ್ಷಿಸಲು ಪ್ರಧಾನಿ ನರೇಂದ್ರ ಮೋದಿ ಭಾರತೀಯರ ಭವಿಷ್ಯವನ್ನು ಬಲಿಕೊಟ್ಟಿದ್ದಾರೆ ಎಂದು ರಾಹುಲ್ ಆರೋಪಿಸಿದರು.

ಸರ್ಕಾರವು ಭಾರತ ಮಾತೆಯನ್ನು ಮಾರಾಟ ಮಾಡುತ್ತಿದೆ. ಭಾರತ–ಯುಎಸ್ ಮಧ್ಯಂತರ ವ್ಯಾಪಾರ ಒಪ್ಪಂದವನ್ನು ಏಕಪಕ್ಷೀಯ ಎಂದು ಕರೆದರು, ಇದು ರೈತರ ಹಿತಾಸಕ್ತಿಗಳಿಗೆ ಹಾನಿ ಮಾಡುತ್ತಿದೆ ಎಂದರು. ಅಮೆರಿಕದ ಕೃಷಿ ಉತ್ಪನ್ನಗಳು ಭಾರತೀಯ ಮಾರುಕಟ್ಟೆಗಳಲ್ಲಿ ಪ್ರವಾಹವನ್ನುಂಟು ಮಾಡುವುದರಿಂದ ರೈತರ ಹಿತಾಸಕ್ತಿಗಳಿಗೆ ಧಕ್ಕೆಯಾಗಿದೆ ಎಂದು ಅವರು ಹೇಳಿದರು. ಇತಿಹಾಸದಲ್ಲಿ ಮೊದಲ ಬಾರಿಗೆ ನಮ್ಮ ರೈತರು ಭಾರಿ ದೊಡ್ಡ ಸಮಸ್ಯೆ ಎದುರಿಸುತ್ತಿದ್ದಾರೆ. ನೀವು ಬಡ ರೈತರನ್ನು ಹತ್ತಿಕ್ಕಲು ಬಾಗಿಲು ತೆರೆದಿದ್ದೀರಿ, ಯಾವುದೇ ಪ್ರಧಾನಿ ಇದನ್ನು ಎಂದಿಗೂ ಮಾಡಿರಲಿಲ್ಲ ಎಂದು ರಾಹುಲ್ ಹೇಳಿದರು.


ಭಾರತೀಯ ಜವಳಿ ಉದ್ಯಮವು ಕತೆ ಮುಗಿದಿದೆ ಎಂದು ಅವರು ಆರೋಪಿಸಿದರು. ಇಂಧನ ಭದ್ರತೆಯು ಭಾರತ–ಯುಎಸ್ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಹೂತು ಹೋಗಿದೆ, ನಾವು ಯಾರಿಂದ ತೈಲವನ್ನು ಖರೀದಿಸುತ್ತೇವೆ ಎಂದು ಯುಎಸ್ ನಿರ್ಧರಿಸುತ್ತದೆ ಎಂದು ಟೀಕಿಸಿದರು. ಇಂಡಿಯಾ ಒಕ್ಕೂಟ ಅಧಿಕಾರದಲ್ಲಿದ್ದಿದ್ದರೆ, ನಾವು ನಮ್ಮ ರೈತರನ್ನು ರಕ್ಷಿಸುತ್ತೇವೆ, ನಮ್ಮ ಇಂಧನವನ್ನು ರಕ್ಷಿಸುತ್ತೇವೆ ಎಂದು ಟ್ರಂಪ್‌ಗೆ ಹೇಳುತ್ತಿತ್ತು ಎಂದು ತಿಳಿಸಿದ್ದಾರೆ.

ಕೈಗಾರಿಕಾ ಕಾರಿಡಾರ್ ಮಂಗಳೂರಿಗೂ ವಿಸ್ತರಿಸಿ

ನವದೆಹಲಿ, ಫೆ.11– ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026–2027ನೇ ಸಾಲಿನ ಕೇಂದ್ರದ ಆಯವ್ಯಯವು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಪ್ರತಿಪಾದಿಸಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಎರಡು ಪ್ರಮುಖ ಸಲಹೆಗಳನ್ನು ನೀಡಿದ್ದಾರೆ.

ರಾಜ್ಯಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ರಾಷ್ಟ್ರದ ಮೂರು ಪ್ರಮುಖ ಬಂದರುಗಳನ್ನು ಜೋಡಿಸುವ ಬೆಂಗಳೂರಿನಿಂದ ಮಂಗಳೂರಿನವರೆಗೆ ಕೈಗಾರಿಕಾ ಕಾರಿಡಾರ್ ವಿಸ್ತರಣೆ ಹಾಗೂ ಹಲಸು, ಹುಣಸೆ, ನೇರಳೆ ಮಂಡಳಿ ರಚನೆ ಮಾಡಬೇಕು ಎಂದು ಕೋರಿದರು.

ಈಗಾಗಲೇ ಚೆನ್ನೈನಿಂದ ಬೆಂಗಳೂರು ಮತ್ತು ಹೈದರಾಬಾದ್‌ನಿಂದ ಬೆಂಗಳೂರು ನಡುವಿನ ಪ್ರಮುಖ ಬಂದುಗಳನ್ನು ಹೊಂದಿರುವ ಕೈಗಾರಿಕಾ ಕಾರಿಡಾರ್ ಯೋಜನೆಗಳಿಗೆ ಅನುಮೋದನೆ ನೀಡುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸು ತ್ತೇನೆ. ಅದೇ ರೀತಿ, ಬೆಂಗಳೂರಿನಿಂದ ಮಂಗಳೂರಿನವರೆಗೆ ಈ ಕೈಗಾರಿಕಾ ಕಾರಿಡಾರ್ ವಿಸ್ತರಿಸಿದರೆ ಕೈಗಾರಿಕಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲ ಆಗುತ್ತದೆ. ಮಂಗಳೂರು ಕೂಡ ಪ್ರಮುಖ ಬಂದರು ಆಗಿದ್ದು, ವಿಶಾಖ ಪಟ್ಟಣ, ಚೆನ್ನೈ ಹಾಗೂ ಮಂಗಳೂರು ಬಂದುಗಳನ್ನು ಜೋಡಿಸಿದರೆ ರಾಷ್ಟ್ರದ ಕೈಗಾರಿಕಾಭಿವೃದಿಗೆ ಪರಿವರ್ತನಾತ್ಮಕ ವೇಗ ಬರುತ್ತದೆ ಎಂದು ಮಾಜಿ ಪ್ರಧಾನಿಗಳು ಪ್ರತಿಪಾದಿಸಿದರು.



ಹೆಚ್.ಡಿ.ದೇವೇಗೌಡ

ಹಲಸು, ಹುಣಸೆ, ನೇರಳೆ ಮಂಡಳಿ ರಚನೆಗೆ ಸಲಹೆ: ಕರ್ನಾಟಕವೂ ಸೇರಿ ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಬೆಳೆಯ ಲಾಗುವ ಹಲಸು, ಹುಣಸೆ, ನೇರಳೆಗೆ ಉತ್ತೇಜನ ನೀಡಲು ಮಖಾನ ಮಂಡಳಿಯಂತೆ ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡಬೇಕು. ಈ ಮೂರು ಬೆಳೆಗಳು ಔಷಧೀಯ ಗುಣಗಳನ್ನು ಹೊಂದಿದ್ದು, ದಕ್ಷಿಣದ ಭಾಗದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕಡಿಮೆ ಮಳೆ ಅಗತ್ಯವಿರುವ ಬೆಳೆಗಳು ಎಂದು ಮಾಜಿ ಪ್ರಧಾನಿ ದೇವೇಗೌಡರು ಮನವಿ ಹೇಳಿದರು.

ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಮಂಡಳಿ ರಚನೆ ಬಗ್ಗೆ ಕ್ರಮ ವಹಿಸುತ್ತಾರೆ ಎಂಬ ನಂಬಿಕೆ ಹೊಂದಿದ್ದೇನೆ ಎಂದು ದೇವೇಗೌಡರು ವಿಶ್ವಾಸ ವ್ಯಕ್ತಪಡಿಸಿದರು.

ಈ ಬಜೆಟ್ ಅನ್ನು ಎನ್‌ಡಿಎ ಮೈತ್ರಿಪಕ್ಷವಾಗಿ ಮುಕ್ತಕಂಠದಿಂದ ಸ್ವಾಗತಿಸುವೆ. ಆಯವ್ಯಯದಲ್ಲಿ ಅಡಗಿರುವ ಅನೇಕ ಉತ್ತಮ ಅಂಶಗಳನ್ನು ಪಟ್ಟಿ ಮಾಡಿದರು. ಉತ್ಪಾದನೆ, ಎಂಎಸ್‌ಎಂಇಗಳು, ಕೈಗಾರಿಕಾ ಮೂಲಸೌಕರ್ಯ ಮತ್ತು ರಫ್ತು ವಹಿವಾಟಿಗೆ ಉತ್ತೇಜನ ನೀಡುವುದು ಸೇರಿದಂತೆ ಅನಿಶ್ಚಿತತೆಯನ್ನು ಕಡಿಮೆ ಮಾಡುವ ಮತ್ತು ದೀರ್ಘಾವಧಿಯ ಹೂಡಿಕೆಯನ್ನು ಆಕರ್ಷಿಸುವ ಉದ್ದೇಶವನ್ನು ಮುಂಗಡಪತ್ರದಲ್ಲಿ ಒತ್ತಿ ಹೇಳಲಾಗಿದೆ. ಇದು ಜಾಗತಿಕ ಮೌಲಿಕ ಸರಪಳಿಗಳಲ್ಲಿ ಭಾರತದ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ ಮೇಕ್ ಇನ್ ಇಂಡಿಯಾ ದೃಷ್ಟಿಕೋನವನ್ನು ದೃಢವಾಗಿ ಬೆಂಬಲಿಸುತ್ತದೆ ಎಂದು ಹೇಳಿದರು.

ಜನತೆಗೆ ಅನುಕೂಲ ಆಗುವಂತೆ ತೆರಿಗೆ ವ್ಯವಸ್ಥೆಯಲ್ಲಿ ಸರಳೀಕರಣ ಮಾಡಿರುವುದು ಸ್ವಾಗತಾರ್ಹ. ತೆರಿಗೆದಾರರ ವಿಶ್ವಾಸವು ಅಷ್ಟೇ ಮುಖ್ಯವಾಗಿದೆ. ಸರ್ಕಾರವು ಕರ್ನಾಟಕದ ಕರಾವಳಿ ಸೇರಿ ಇತರ ಪ್ರದೇಶಗಳಲ್ಲಿ ಯಥೇಚ್ಛವಾಗಿ ಬೆಳೆಯಲಾಗುವ ತೆಂಗಿನಕಾಯಿ, ಶ್ರೀಗಂಧ, ಕೋಕೋ ಮತ್ತು ಗೋಡಂಬಿಯಂತಹ ವಾಣಿಜ್ಯ ಬೆಳೆಗಳಿಗೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ನೀಡಿರುವುದು ಉತ್ತಮವಾದ ಹೆಜ್ಜೆ. ತೆಂಗು 'ಕಲ್ಪವೃಕ್ಷ' ಎಂದು ಜನಪ್ರಿಯವಾಗಿದೆ. ಇದು ಎಲ್ಲಾ ವಯಸ್ಸಿನ ಜನರಿಗೆ ಬಹುವಿಧದಲ್ಲಿ ಆರೋಗ್ಯ ಪ್ರಯೋಜನಗಳೊಂದಿಗೆ ಪೋಷಣೆ ಒದಗಿಸುತ್ತದೆ. ಹೆಚ್ಚಿನ ಪ್ರದೇಶಗಳಲ್ಲಿ ತೆಂಗು ಜೀವನಾಡಿಯಾಗಿದೆ. ಕೃಷಿಗೆ ಉತ್ತಮ ಬೆಂಬಲ ಕೊಡಲಾಗಿದೆ. ಒಟ್ಟು ಬಜೆಟ್‌ನಲ್ಲಿ ಒಟ್ಟು ಬಜೆಟ್‌ನ 3% ರಷ್ಟು ಹಂಚಿಕೆ ನೀಡಲಾಗಿದ್ದು, ಈ ಪ್ರಮಾಣವನ್ನು 5% ಗೆ ಕೃಷಿ ಹೆಚ್ಚಿಸುವುದು ಅಗತ್ಯವಾಗಿದೆ ಎಂದು ಮಾಜಿ ಪ್ರಧಾನಿಗಳು ಸಲಹೆ ನೀಡಿದರು.

ಲೈಂಗಿಕ ದೌರ್ಜನ್ಯ ಪ್ರಕರಣ

ಸಾಧು ಕೋಕಿಲ, ಮಂಡ್ಯ ರಮೇಶ್‌ಗೆ ಬಿಗ್ ರಿಲೀಫ್



ಸಾಧು ಕೋಕಿಲಾ



ಮಂಡ್ಯ ರಮೇಶ್

ಬೆಂಗಳೂರು, ಫೆ.11– ಕನ್ನಡ ಚಿತ್ರರಂಗದ ಜನಪ್ರಿಯ ನಟ, ಸಂಗೀತ ನಿರ್ದೇಶಕ ಮತ್ತು ಚಲನಚಿತ್ರ ಅಕಾಡೆಮಿ ಅಧ್ಯಕ್ಷರೂ ಆಗಿರುವ ಸಾಧು ಕೋಕಿಲಾ ಮತ್ತು ನಟ ಮಂಡ್ಯ ರಮೇಶ್ ವಿರುದ್ಧ ಮಾಡಲಾಗಿದ್ದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಇಬ್ಬರೂ ನಟರಿಗೆ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. 2017ರಲ್ಲಿ ದಾಖಲಾಗಿದ್ದ ಈ ಪ್ರಕರಣವನ್ನು ಸೂಕ್ತ ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆಯಲ್ಲಿ ರದ್ದು ಮಾಡಿ ಹೈಕೋರ್ಟ್ ಆದೇಶ ನೀಡಿದೆ. 2017ರಲ್ಲಿ ಸಾಧು ಕೋಕಿಲ ಮತ್ತು ನಟ ಮಂಡ್ಯ ರಮೇಶ್ ಅವರು ಮೈಸೂರಿನ ಪಾರ್ಲರ್ ಒಂದರಲ್ಲಿ ಮಸಾಜ್ ಮಾಡಿಸಿಕೊಂಡ ಬಳಿಕ, ಅಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ಇಬ್ಬರು ನಟರು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ಆರೋಪಿಸಿ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ನಟರ ವಿರುದ್ಧ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಆಗ ಇಬ್ಬರು ನಟರಿಗೆ ಸಮನ್ಸ್ ಜಾರಿ ಮಾಡಲಾಗಿತ್ತು, ಬಳಿಕ 2019ರಲ್ಲಿ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿತ್ತು.

ಎಫ್‌ಐಆರ್‌ನಲ್ಲಿ ಹೆಸರಿಲ್ಲ, ಹಾಗೂ ಆರೋಪಕ್ಕೆ ಸಾಕ್ಷ್ಯಗಳಿಲ್ಲವೆಂದು ಮಂಡ್ಯ ರಮೇಶ್ ಮತ್ತು ಸಾಧು ಕೋಕಿಲ ಪರವಾಗಿ ಹಿರಿಯ ವಕೀಲ ಹೆಚ್.ಎಸ್.ಚಂದ್ರಮೌಳಿ ವಾದ ಮಂಡಿಸಿದ್ದರು. ಅದರಂತೆ ಸೂಕ್ತ ಸಾಕ್ಷಾಧಾರಗಳ ಕೊರತೆಯ ಕಾರಣಕ್ಕೆ ಪ್ರಕರಣವನ್ನು ರದ್ದು ಮಾಡಲಾಗಿದೆ. ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಹೈಕೋರ್ಟ್ ಪೀಠ ಈ ಆದೇಶವನ್ನು ಹೊರಡಿಸಿದೆ.

ಮುಂಬೈ ಮೇಯರ್ ಆಗಿ ರೀತು ತಾವ್ಡೆ ಅವಿರೋಧ ಆಯ್ಕೆ

ನಾಲ್ಕು ದಶಕಗಳ ನಂತರ ಬಿಜೆಪಿಗೆ ಒಲಿದ ಪಟ್ಟ

ಮುಂಬೈ, ಫೆ.11– ಬೃಹನ್ಮುಂಬೈ ಮುನ್ಸಿಪಲ್ ಕಾರ್ಪೊರೇಷನ್‌ನ ನೂತನ ಮೇಯರ್ ಆಗಿ ಬಿಜೆಪಿ ಕಾರ್ಪೊರೇಟರ್ ರೀತು ತಾವ್ಡೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ನಾಲ್ಕು ದಶಕಗಳಲ್ಲಿ ಇದೇ ಮೊದಲ ಬಾರಿಗೆ ಮುಂಬೈ ಮೇಯರ್ ಪಟ್ಟ ಬಿಜೆಪಿಗೆ ಒಲಿದಿದೆ.



ಮುಂಬೈ ಮೇಯರ್ ಚುನಾವಣೆಗೆ ಶಿವಸೇನೆ ಯುಬಿಟಿ ಬಣ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲಿಲ್ಲ. ಈ ಹಿನ್ನೆಲೆಯಲ್ಲಿ ಬಿಜೆಪಿಯ ರೀತು ತಾವ್ಡೆ ಅವಿರೋಧ ವಾಗಿ ಆಯ್ಕೆಯಾದರು. ದೇಶದ ಶ್ರೀಮಂತ ನಾಗರಿಕ ಸಂಸ್ಥೆಯ ಮೇಲೆ ಠಾಕ್ರೆ ಕುಟುಂಬದ 25 ವರ್ಷಗಳ ನಿರಂತರ ಪ್ರಾಬಲ್ಯ ಕೊನೆಗೊಂಡಿರುವುದು ದೇಶದ ಗಮನ ಸೆಳೆದಿದೆ.

ಘಾಟ್ಕೋಪರ್ ಪಶ್ಚಿಮದಿಂದ ಮೂರು ಬಾರಿ ಕಾರ್ಪೊರೇಟರ್ ಆಗಿರುವ 53 ವರ್ಷದ ರೀತು ತಾವ್ಡೆ ತಳಮಟ್ಟದ ರಾಜಕಾರಣ ಮತ್ತು ನಾಗರಿಕ ಆಡಳಿತ ಕ್ಷೇತ್ರದಲ್ಲಿ ದಶಕಗಳಿಗೂ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆ. ರೀತು ತಾವ್ಡೆ ತಮ್ಮ ಪ್ರಾಯೋಗಿಕ ವಿಧಾನ ಮತ್ತು ಸಮುದಾಯದ ತೊಡಗಿಸಿ ಕೊಳ್ಳುವಿಕೆಗೆ ಹೆಸರುವಾಸಿಯಾಗಿದ್ದು, ಆಡಳಿತಾತ್ಮಕ ಸಾಮರ್ಥ್ಯವನ್ನು ಆಳವಾದ ಸ್ಥಳೀಯ ಸಂಪರ್ಕದೊಂದಿಗೆ ಸಂಯೋಜಿಸುವ ನಾಯಕಿಯಾಗಿ ಖ್ಯಾತಿ ಗಳಿಸಿದ್ದಾರೆ.

ಶಿವಸೇನೆ ನಾಯಕ ಸಂಜಯ್ ಘಾಡಿ ಉಪ ಮೇಯರ್ ಆಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 227 ಸದಸ್ಯ ಬಲದ ಬಿಎಂಸಿಯಲ್ಲಿ ಅಧಿಕಾರ ಹಿಡಿಯಲು 114 ಸ್ಥಾನಗಳ ಅವಶ್ಯಕತೆ ಇತ್ತು. ಬಿಜೆಪಿ 89 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ, ಡಿಸಿಎಂ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ 29 ಸ್ಥಾನಗಳನ್ನು ಗೆದ್ದಿದೆ, ಮಹಾಯುತಿ ಮೈತ್ರಿಕೂಟ 118 ವಾರ್ಡ್‌ಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ.

ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ಸಂಘದ 40ನೇ ವಾರ್ಷಿಕೋತ್ಸವ...



ಬೆಂಗಳೂರು ಗಾಂಧಿನಗರದಲ್ಲಿರುವ ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ಸಂಘದ ಆವರಣದಲ್ಲಿ 40ನೇ ವಾರ್ಷಿಕೋತ್ಸವ ಆಚರಿಸಲಾಯಿತು. ಕರ್ನಾಟಕ ಫಿಲಂ ಚೇಂಬರ್ ಅಧ್ಯಕ್ಷರಾದ ಜಯಮಾಲ, ನಿರ್ಮಾಪಕ ಹಾಗೂ ಉದ್ಯಮಿ ಸಂದೇಶ್, ನಿರ್ಮಾಪಕರ ಸಂಘದ ಅಧ್ಯಕ್ಷ ರಾಂಮೂರ್ತಿ, ಕಾರ್ಯದರ್ಶಿ ಗಣೇಶ್, ನಟ ಜಗ್ಗೇಶ್, ಸಾ.ರಾ.ಗೋವಿಂದ್ ಮತ್ತು ಚಿತ್ರೋದ್ಯಮದ ಗಣ್ಯರು ಉಪಸ್ಥಿತರಿದ್ದರು. ವಾರ್ಷಿಕೋತ್ಸವದ ಅಂಗವಾಗಿ ಸಂದೇಶ್ ಅವರು ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಿದ್ದರು.

ಹಂಚ್ಯಾ ಬಳಿಯ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಗ್ರಾಮಸ್ಥರ ವಿರೋಧ



ಸಾತಗಳ್ಳಿ ಬಳಿಯ ಹಂಚ್ಯಾದಲ್ಲಿ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸಿರುವ ಗ್ರಾಮಸ್ಥರು ರಮ್ಮನಹಳ್ಳಿ ಪಂಚಾಯಿತಿಗೆ ಮನವಿ ಸಲ್ಲಿಸಿದರು.

ಮೈಸೂರು, ಫೆ.11(ಬಿಎಲ್‌ಯು)– ಮೈಸೂರಿನ ಸಾತಗಳ್ಳಿ ಬಳಿಯ ಹಂಚ್ಯಾದಲ್ಲಿ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ (ಸಿ ಅಂಡ್ ಡಿ ಪ್ಲಾಂಟ್) ನಿರ್ಮಿಸಲು ಹಂಚ್ಯಾ ಗ್ರಾಮಸ್ಥರು ತೀವ್ರವಾಗಿ ವಿರೋಧಿಸಿದ್ದಾರೆ. ಈ ಸಂಬಂಧ ರಮ್ಮನಹಳ್ಳಿ ಪಟ್ಟಣ ಪಂಚಾಯತ್ ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಇಲ್ಲಿ ಹಂಚ್ಯಾ ಗ್ರಾಮ ಹಾಗೂ ಹಲವು ಬಡಾವಣೆಗಳಿದ್ದು, ಇಂತಹ ಸ್ಥಳದಲ್ಲಿ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಿದರೆ ಧೂಳಿನಿಂದ ಪರಿಸರ ಮಾಲಿನ್ಯವಾಗುತ್ತದೆ. ಸ್ಥಳೀಯರಿಗೆ ಇದರಿಂದ ತೊಂದರೆ ಆಗುವ ಹಿನ್ನೆಲೆಯಲ್ಲಿ ಹಂಚ್ಯಾ ಬದಲು ಮುಂದೆ ನಿರ್ಮಾಣವಾಗುವ ಪೆರಿಫೆರಲ್ ರಿಂಗ್ ರಸ್ತೆ ಹೊರಗೆ ಇದನ್ನು ನಿರ್ಮಿಸುವಂತೆ ಕೋರಿದರು.

ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾರ್ಯ ಸ್ಥಗಿತಗೊಳಿಸದಿದ್ದರೆ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಅಧಿಕಾರಿಗಳಿಗೆ ಮನವಿ ನೀಡುವ ಸಂದರ್ಭದಲ್ಲಿ ಹಂಚ್ಯಾ ಗ್ರಾಮದ ಮುಖಂಡರಾದ ಹೆಚ್.ವಿ.ವೆಂಕಟೇ ಗೌಡ, ಬೋರೇಗೌಡ, ತಮ್ಮೇಗೌಡ, ಮಹದೇವು, ಉಮೇಶ್, ಗವಿಸಿದ್ದೇ ಗೌಡ, ಸಿ.ಕುಮಾರ, ಅನಿಲ್ ಸೇರಿದಂತೆ ಹಲವರು ಹಾಜರಿದ್ದರು.

ಅಂಗನವಾಡಿ ಹಬ್ಬದಲ್ಲಿ ಶಾಲಾ ಪೂರ್ವ ತಯಾರಿ ಮಹತ್ವ ಅನಾವರಣ

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಕಲಿಕೆಗೆ ಭದ್ರ ಬುನಾದಿ

ಮೈಸೂರು, ಫೆ.11 (ಎಂಕೆ)– ಮಕ್ಕಳ ದೈಹಿಕ, ಬೌದ್ಧಿಕ ಮತ್ತು ಭಾವನಾತ್ಮಕ ಬೆಳವಣಿಗೆಗೆ 'ಶಾಲಾ ಪೂರ್ವ ಸಿದ್ದತೆ' ಭದ್ರ ಬುನಾದಿ ಹಾಕಿಕೊಡಲಿದೆ ಎಂಬುದನ್ನು ನಾನಾ ಬಗೆಯ ಕಲಿಕಾ ಚಟುವಟಿಕೆಗಳ ಪ್ರದರ್ಶನದ ಮೂಲಕ ಪ್ರತಿಪಾದಿಸಲಾಯಿತು.



ಅಂಗನವಾಡಿ ಹಬ್ಬದ ಶಾಲಾ ಪೂರ್ವ ಸಿದ್ಧತಾ ಚಟುವಟಿಕೆಗಳ ಪ್ರದರ್ಶನಕ್ಕೆ ಡಿಸಿ ಲಕ್ಷ್ಮೀಕಾಂತ್‌ರೆಡ್ಡಿ ಚಾಲನೆ ನೀಡಿದರು.

ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕಚೇರಿ(ಮಹರ್ಷಿ ವಾಲ್ಮೀಕಿ ಭವನ) ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಶಿಕ್ಷಾಗ್ರಹ ಹಾಗೂ ಮಕ್ಕಳ ಜಾಗೃತಿ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ 'ಅಂಗನವಾಡಿ ಹಬ್ಬ'ದಲ್ಲಿ ಪುಟಾಣಿ ಮಕ್ಕಳ ಕಲಿಕೆಗೆ ಅವಶ್ಯವಿರುವ ಚಟುವಟಿಕೆಗಳ ಪ್ರದರ್ಶನದೊಂದಿಗೆ ಅಂಗನವಾಡಿ ಕೇಂದ್ರಗಳಲ್ಲಿ ನಡೆಯುವ ಶಾಲಾ ಪೂರ್ವ ಸಿದ್ಧತೆಯ ಮಹತ್ವವನ್ನು ತಿಳಿಸಲಾಯಿತು.

ಆಟದಿಂದ ಪಾಠ ಓದುವ ಮಟ್ಟಕ್ಕೆ ಪುಟಾಣಿಗಳನ್ನು ಸಿದ್ದಗೊಳಿಸಿ, ಶಾಲಾ ಆವರಣಕ್ಕೆ ಕಳಿಸುವುದಕ್ಕೆ ಹಲ್ಲುಜ್ಜುವುದರಿಂದ ಹಿಡಿದು ಮುಕ್ತ ಸಂಭಾಷಣೆ ನಡೆಸುವ ಹಂತಕ್ಕೆ ಮಕ್ಕಳ ಬೌದ್ಧಿಕ ಶಕ್ತಿಯನ್ನು ರೂಪಿಸಲು ಕೈಗೊಳ್ಳುವ ಶಾಲಾ ಪೂರ್ವ ಸಿದ್ದತಾ ಚಟುವಟಿಕೆಗಳನ್ನು ಪ್ರದರ್ಶಿಸಲಾಯಿತು.

ಬಳಿಕ ನಡೆದ ಸಂವಾದದಲ್ಲಿ ಮಕ್ಕಳ ಅಭಿವೃದ್ಧಿ ತಜ್ಞೆ ಡಾ.ಶ್ರೀವಿದ್ಯಾ ಮಾತನಾಡಿ, ಶಾಲಾ ಪೂರ್ವ ಸಿದ್ದತೆ, ಮಕ್ಕಳನ್ನು ಓದುವಂತೆ ಮತ್ತು ಬರೆಯುವಂತೆ ಮಾಡುವುದಷ್ಟೇ ಅಲ್ಲ. ಕುಳಿತು ಪಾಠ ಕೇಳುತ್ತಾರಾ... ಹೇಳಿದ್ದನ್ನು ಅರ್ಥ ಮಾಡಿಕೊಂಡು ಪ್ರತಿಕ್ರಿಯೆ ಕೊಡುತ್ತಾರಾ... ಗುಂಪಿನಲ್ಲಿ ಕುಳಿತು ಚರ್ಚೆ ಮಾಡುತ್ತಾರಾ... ಹಿರಿಯರೊಂದಿಗೆ ಗೌರವದಿಂದ ನಡೆದುಕೊಳ್ಳುತ್ತಾರಾ ಎಂಬುದನ್ನು ಗಮನಿಸಿ, ಸಿದ್ಧತೆ ಮಾಡುವುದಾಗಿದೆ ಎಂದರು.

ಮಕ್ಕಳಲ್ಲಿ ಸಾಮಾಜಿಕ ಮತ್ತು ಭಾವನಾತ್ಮಕ ಭಾವನೆಗಳನ್ನು ಬಿತ್ತುವ ಕೆಲಸ ಶಾಲಾ ಪೂರ್ವ ಸಿದ್ದತೆಯಲ್ಲೇ ಆಗಬೇಕು. ಕುಳಿತು ಓದುವ ಆಸಕ್ತಿಯನ್ನು ಮೂಡಿಸಬೇಕು. ಅರ್ಥ ಮಾಡಿಕೊಳ್ಳುವಷ್ಟು ಬೌದ್ಧಿಕ ಸಾಮರ್ಥ್ಯವನ್ನು ಬೆಳೆಸಬೇಕು. ಜೇಡಿ ಮಣ್ಣಿನಲ್ಲಿ ಆಟವಾಡಿಸುವ ಮೂಲಕ ಇಂದ್ರೀಯಗಳ ಪ್ರೇರಣೆಗೆ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಅಂಗನವಾಡಿಗಳಲ್ಲಿ ಪುಸ್ತಕಗಳ ಜೊತೆಗೆ ಅಕ್ಷರಗಳ ಪ್ರತಿಗಳು ಮತ್ತು ಆಟಿಕೆಗಳು ಅವಶ್ಯವಾಗಿರಬೇಕು. ಹಾಗೆಯೇ ಮುಖ್ಯವಾಗಿ ಮಕ್ಕಳ ಬೆಳವಣಿಗೆ ಕುರಿತು ಪೋಷಕರೊಂದಿಗೆ ಚರ್ಚಿಸಬೇಕು ಎಂದರು.

6 ವರ್ಷದೊಳಗಿನ ಸಿದ್ದತೆ: ಮಕ್ಕಳ ಜಾಗೃತಿ ಸಂಸ್ಥೆ ಸಿಇಒ ಸುನೇನಾ ಛತ್ರಪತಿ ಮಾತನಾಡಿ, 1ನೇ ತರಗತಿಯ ಮಕ್ಕಳು ಒಂದು ಕಡೆ ಕೂರುವುದಿಲ್ಲ, ಬರೆಯುವುದಿಲ್ಲ ಎಂದರೆ ಶಾಲಾ ಪೂರ್ವ ಸಿದ್ದತೆಯಲ್ಲಿ ಕೊರತೆಯಾಗಿದೆ ಎಂದರ್ಥ. 6 ವರ್ಷದೊಳಗೆ ಎಲ್ಲಾ ರೀತಿಯ ಶಾಲಾ ಪೂರ್ವ ಸಿದ್ಧತೆಯಾಗಬೇಕು. ಇಲ್ಲವಾದಲ್ಲಿ ಕಲಿಕೆಯಲ್ಲಿ ಕುಂಠಿತವಾಗುವುದಲ್ಲದೆ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಮಕ್ಕಳು ಎದುರಿಸುವಂತಹ ಪರಿಸ್ಥಿತಿ ನಿರ್ಮಾಣವಾಗಲಿದೆ ಎಂದು ಎಚ್ಚರಿಸಿದರು.

ಮಹತ್ವದ ಕಾರ್ಯಕ್ರಮ: ಐಸಿಡಿಎಸ್(ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು) ಜಿಲ್ಲಾ ನಿರ್ದೇಶಕ ಬಸವರಾಜು ಮಾತನಾಡಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಶಾಲಾ ಪೂರ್ವ ಸಿದ್ದತೆ ಮಹತ್ವದ ಕಾರ್ಯಕ್ರಮವಾಗಿದ್ದು, ಮಕ್ಕಳ ಕಲಿಕೆಗೆ ಭದ್ರ ಬುನಾದಿ ಹಾಕಿದಂತೆ. ಮಕ್ಕಳ ಎಲ್ಲಾ ರೀತಿಯ ಬೆಳವಣಿಗೆಗೆ ಶಾಲಾ ಪೂರ್ವ ಶಿಕ್ಷಣ ಅಗತ್ಯವಾಗಿದ್ದು, ಅಂಗನವಾಡಿ ಕೇಂದ್ರಗಳಲ್ಲಿ ಕನ್ನಡದ ಜೊತೆಗೆ ಇಂಗ್ಲಿಷ್ ಅನ್ನು ಹೇಳಿಕೊಡುವ ಮೂಲಕ ಪ್ರಸ್ತುತ ಕಾಲಘಟ್ಟಕ್ಕೆ ಅನುಗುಣವಾಗಿ ಮಕ್ಕಳ ಬೌದ್ಧಿಕ ಮಟ್ಟವನ್ನು ವೃದ್ಧಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಉದ್ಘಾಟನೆ: ಸಂವಾದಕ್ಕೂ ಮುನ್ನ ಶಾಲಾ ಪೂರ್ವ ಸಿದ್ದತಾ ಚಟುವಟಿಕೆಗಳ ಪ್ರದರ್ಶನಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ ಚಾಲನೆ ನೀಡಿದರು. ಮಕ್ಕಳ ಜಾಗೃತಿಯ ಉಪನಿರ್ದೇಶಕಿ ಅಮೃತಾ ಮುರಳಿ ನಿರೂಪಣೆ ಮಾಡಿದರು. ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ 50ಕ್ಕೂ ಹೆಚ್ಚು ಐಸಿಡಿಎಸ್ ಮೇಲ್ವಿಚಾರಕರು, 9 ಸಿಡಿಪಿಒಗಳು ಹಾಗೂ ವಿವಿಧ ಇಲಾಖೆಯ ಮುಖ್ಯ ಅಧಿಕಾರಿಗಳು, 108 ಮಾದರಿ ಅಂಗನವಾಡಿ ಶಿಕ್ಷಕಿಯರು 'ಅಂಗನವಾಡಿ ಹಬ್ಬ'ದಲ್ಲಿ ಭಾಗವಹಿಸಿದ್ದರು.

ಉಚಿತ ಕಂಪ್ಯೂಟರ್ ಕೋರ್ಸ್‌ಗಳಿಗೆ ಪ್ರವೇಶ ಆರಂಭ

ಮೈಸೂರು, ಫೆ. 11–ಕೆ.ಆರ್.ನಗರದ ಜೀನಿಯಸ್ ಅಕಾಡೆಮಿ ವತಿಯಿಂದ ಗ್ರಾಮೀಣ ಭಾಗದ ಯುವಕ, ಯುವತಿಯರು ನಾನಾ ಕಾರಣಗಳಿಂದ ಉದ್ಯೋಗ ಪಡೆಯುವಲ್ಲಿ ವಂಚಿತರಾಗುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳು, ಪದವಿ ಪಡೆದ ನಿರುದ್ಯೋಗಿಗಳು ಈ ಕೋರ್ಸ್‌ಗಳಿಗೆ ದಾಖಲಾಗಬಹುದು. ಶನಿವಾರ ಮತ್ತು ಭಾನುವಾರ ಆಸಕ್ತರು ವಿಶೇಷ ಕೌಶಲ್ಯ ತರಬೇತಿಗಳು ನಡೆಯಲಿವೆ. ಶಿಕ್ಷಣದಿಂದ ವಂಚಿತರಾದ ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಉಚಿತ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ಸಂಬಂಧಪಟ್ಟ ವಿಷಯದ ಜೊತೆಗೆ ವೃತ್ತಿ ಕೌಶಲ ಮತ್ತು ಜೀವನ ಕೌಶಲ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಸಂಸ್ಥೆಯ ದೂರವಾಣಿ ಸಂಖ್ಯೆ : 9945942109 ಅನ್ನು ಸಂಪರ್ಕಿಸಬಹುದು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು,ಫೆ.11–ವಿ.ವಿ.ಮೊಹಲ್ಲಾ ಉಪ ವಿಭಾಗ ವ್ಯಾಪ್ತಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಫೆ.12ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಗೋಕುಲಂ ಮುಖ್ಯರಸ್ತೆ, ವಿ.ವಿ ಮೊಹಲ್ಲಾ 1ರಿಂದ 6ನೇ ಮೇನ್, ಆದಿ ಪಂಪಾ ರಸ್ತೆ, ಕಾಳಿದಾಸ ರಸ್ತೆ, ದೇವಸ್ಥಾನ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದೇಶ - ವಿದೇಶ

ಅದಾನಿ ಸಮೂಹದ ವಿರುದ್ಧ ಮಾನಹಾನಿಕರ ಪೋಸ್ಟ್: ಪತ್ರಕರ್ತನಿಗೆ ಜೈಲು ಶಿಕ್ಷೆ



ನವದೆಹಲಿ: ಗಾಂಧಿನಗರದ ಮನಸಾದ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ದಾಮಿನಿ ದೀಕ್ಷಿತ್ ಅವರು, ಪತ್ರಕರ್ತ ರವಿ ನಾಯರ್ ಅವರನ್ನು ಐಪಿಸಿ ಸೆಕ್ಷನ್ 499 ಅಡಿಯಲ್ಲಿ ದೋಷಿ ಎಂದು ಘೋಷಿಸಿದ್ದಾರೆ.

ರವಿ ಅವರು ಪ್ರಕಟಿಸಿರುವ ಲೇಖನವು ಅದಾನಿ ಕಂಪನಿಯ ನೀತಿಯ ವಿರುದ್ಧದ ಟೀಕೆ ಮಾತ್ರ ಆಗಿರದೆ, ಸಂಸ್ಥೆಯ ವರ್ಚಸ್ಸಿಗೆ ಧಕ್ಕೆ ತರುವಂತಿದೆ ಎಂಬುದನ್ನು ಸಾಕ್ಷ್ಯಗಳು ದೃಢಪಡಿಸಿವೆ. ಲೇಖನವನ್ನು ಪದೇ ಪದೇ ಪ್ರಕಟಿಸಲಾಗಿದೆ ಮತ್ತು ಬೇರೆ ಬೇರೆ ವೇದಿಕೆಗಳ ಮೂಲಕ ಅದನ್ನು ಹಂಚಿಕೊಳ್ಳಲಾಗಿದೆ. ಇಂಥ ಲೇಖನದಿಂದ ಕಂಪನಿಯ ಖ್ಯಾತಿಗೆ ಕುಂದುಂಟಾಗಲಿದೆ ಎಂಬ ಅರಿವು ಆರೋಪಿಗೆ ಇತ್ತು ಎಂಬುದನ್ನು, ಸಾಕ್ಷ್ಯಗಳು ಸೂಚಿಸುತ್ತವೆ ಎಂದು ನ್ಯಾಯಾಲಯ ತಿಳಿಸಿದೆ.

ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಸಂಸ್ಥೆಯು 2021ರಲ್ಲಿ ಪತ್ರಕರ್ತ ರವಿ ನಾಯರ್ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿತ್ತು. ರವಿ ನಾಯರ್ ಅವರು ಅಕ್ಟೋಬರ್ 2020 ಮತ್ತು ಜುಲೈ 2021ರಲ್ಲಿ ಪೋಸ್ಟ್ ಮಾಡಿರುವ ಸರಣಿ ಟ್ವೀಟ್‌ಗಳು (ಈಗಿನ ಎಕ್ಸ್) ದಾರಿ ತಪ್ಪಿಸುವಂತಿವೆ ಮತ್ತು ಮಾನಹಾನಿಕರವಾಗಿವೆ ಎಂದು ಸಂಸ್ಥೆಯು ದೂರಿನಲ್ಲಿ ಆರೋಪಿಸಿತ್ತು. ಅವರು ವೆಬ್‌ಸೈಟ್‌ವೊಂದರಲ್ಲಿ ಪ್ರಕಟಿಸಿದ್ದ ಲೇಖನಗಳೂ ಮಾನಹಾನಿಕರವಾಗಿದ್ದವು ಎಂದು ಹೇಳಿತ್ತು.

ಅಮೆರಿಕ ಪಾಕಿಸ್ತಾನವನ್ನು ಟಾಯ್ಲೆಟ್ ಪೇಪರ್‌ಗಿಂತ ಕೆಟ್ಟದಾಗಿ ಬಳಸಿಕೊಂಡಿದೆ

ಇಸ್ಲಾಮಾಬಾದ್: ಅಮೆರಿಕವು ತನ್ನ ಕಾರ್ಯತಂತ್ರದ ಹಿತಾಸಕ್ತಿಗಳಿಗಾಗಿ ನಮ್ಮನ್ನು ಟಾಯ್ಲೆಟ್ ಪೇಪರ್‌ಗಿಂತ ಕೆಟ್ಟದಾಗಿ ಬಳಸಿಕೊಂಡಿದೆ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖವಾಜಾ ಆಸಿಫ್ ಆರೋಪಿಸಿದ್ದಾರೆ. ಸಂಸತ್ತಿನಲ್ಲಿ ಮಾತನಾಡಿದ ಆಸಿಫ್, 1999ರ ನಂತರ ವಿಶೇಷವಾಗಿ ಅಫ್ಘಾನಿಸ್ತಾನಕ್ಕೆ ಸಂಬಂಧಿಸಿದಂತೆ ಅಮೆರಿಕದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ನಮ್ಮ ನಿರ್ಧಾರದಿಂದ ದೇಶಕ್ಕೆ ಶಾಶ್ವತ ಹಾನಿಯನ್ನುಂಟು ಮಾಡಿದೆ ಎಂದಿದ್ದಾರೆ.



ಅಮೆರಿಕದ ಬೆಂಬಲವನ್ನು ಗಂಭೀರ ತಪ್ಪು ಲೆಕ್ಕಾಚಾರವೆಂದು ಬಣ್ಣಿಸಿದ ಅವರು, ಇದರ ಪರಿಣಾಮಗಳನ್ನು ಪಾಕಿಸ್ತಾನ ದಶಕಗಳ ನಂತರವೂ ಎದುರಿಸುತ್ತಿದೆ ಎಂದು ಹೇಳಿದ್ದಾರೆ. ಅಫ್ಘಾನಿಸ್ತಾನ ಸಂಘರ್ಷದಲ್ಲಿ ಪಾಕಿಸ್ತಾನದ ಪಾಲ್ಗೊಳ್ಳುವಿಕೆ ಧಾರ್ಮಿಕ ಹಿತಾಸಕ್ತಿಯಿಂದ ನಡೆಸಲ್ಪಟ್ಟಿದೆ ಎಂಬ ವಾದವನ್ನು ತಳ್ಳಿಹಾಕಿದ ಅವರು, ನಮ್ಮವರನ್ನು (ಪಾಕಿಸ್ತಾನಿಗಳನ್ನು) ಸಜ್ಜುಗೊಳಿಸಿ ಜಿಹಾದ್ ಬ್ಯಾನರ್ ಅಡಿಯಲ್ಲಿ ಹೋರಾಡಲು ಕಳುಹಿಸಲಾಗಿತ್ತು. ಇದು ದಾರಿತಪ್ಪಿಸುವ ಮತ್ತು ವಿನಾಶಕಾರಿ ಪ್ರಯತ್ನ ಎಂದು ಹೇಳಿದ್ದಾರೆ. ಪಾಕಿಸ್ತಾನಕ್ಕೆ ತನ್ನದಲ್ಲದ ಸಂಘರ್ಷಗಳಲ್ಲಿ ಭಾಗವಹಿಸುವಿಕೆಯಿಂದಾಗಿ ದೀರ್ಘಕಾಲೀನ ಅಸ್ಥಿರತೆ ಮತ್ತು ಸಾಮಾಜಿಕ ಹಾನಿಯನ್ನು ಉಂಟುಮಾಡಿತು ಎಂದೂ ಅವರು ತಿಳಿಸಿದ್ದಾರೆ.

ಇಂಗ್ಲಿಷ್ ಪರೀಕ್ಷೆ ವೇಳೆ ಸಾಮೂಹಿಕ ನಕಲು: 23 ಮಂದಿ ವಿರುದ್ಧ ಎಫ್‌ಐಆರ್



ಛತ್ರಪತಿ ಸಂಭಾಜಿನಗರ: ಮಹಾರಾಷ್ಟ್ರ ರಾಜ್ಯ ಪ್ರೌಢ ಮತ್ತು ಉನ್ನತ ಪ್ರೌಢ ಶಿಕ್ಷಣ ಮಂಡಳಿಯ 12ನೇ ತರಗತಿ ಇಂಗ್ಲಿಷ್ ಪರೀಕ್ಷೆಯ ಮೊದಲ ದಿನವೇ ಅಕ್ರಮವೊಂದು ಬೆಳಕಿಗೆ ಬಂದಿದೆ. ಜಿಲ್ಲೆಯ ಜೈತಾಪುರದಲ್ಲಿರುವ ರಾಷ್ಟ್ರೀಯ ಉನ್ನತ ಪ್ರೌಢಶಾಲೆಯಲ್ಲಿ ಸಾಮೂಹಿಕ ನಕಲು ನಡೆದ ಹಿನ್ನೆಲೆಯಲ್ಲಿ ಮೇಲ್ವಿಚಾರಕರು ಸೇರಿದಂತೆ 23 ಮಂದಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಇಂಗ್ಲಿಷ್ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ನೋಡಿ ಉತ್ತರ ಬರೆಯುತ್ತಿರುವುದು ಪತ್ತೆಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಾಗೃತ ಸಮಿತಿಯು ಶಾಲೆಯ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಅಕ್ರಮ ನಡೆದಿರುವುದು ದೃಢಪಟ್ಟಿದೆ. ಈ ಆಧಾರದ ಮೇಲೆ ದೇವಗಾಂವ್ ರಂಗಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅಕ್ರಮದಲ್ಲಿ ಭಾಗಿಯಾಗಿರುವ ಆರೋಪದ ಮೇಲೆ ಜಿಲ್ಲಾ ಪಂಚಾಯತ್ ಶಿಕ್ಷಕರು ಹಾಗೂ ಪರೀಕ್ಷಾ ತಂಡದ ಇತರ ಸದಸ್ಯರ ವಿರುದ್ಧ ಮಹಾರಾಷ್ಟ್ರ ಪರೀಕ್ಷಾ ಅಕ್ರಮ ತಡೆ ಕಾಯ್ದೆ 1982ರ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ. ಘಟನೆ ಬೆನ್ನಲ್ಲೇ ಶಿಕ್ಷಣ ಇಲಾಖೆಯು ಪರೀಕ್ಷಾ ಕೇಂದ್ರದ ಸಂಪೂರ್ಣ ಸಿಬ್ಬಂದಿಯನ್ನು ಬದಲಾಯಿಸಿದ್ದು, ಕರ್ತವ್ಯ ಲೋಪ ಎಸಗಿದ ನೌಕರರನ್ನು ಅಮಾನತುಗೊಳಿಸಿದೆ.


ರನ್‌ವೇಯಿಂದ ಜಾರಿ ಬೀಚ್‌ಗೆ ಬಿದ್ದ 55 ಪ್ರಯಾಣಿಕರಿದ್ದ ವಿಮಾನ



ಸೊಮಾಲಿಯಾ: 55 ಜನರನ್ನು ಹೊತ್ತೊಯ್ಯುತ್ತಿದ್ದ ಪ್ರಯಾಣಿಕ ವಿಮಾನವೊಂದು ರನ್‌ವೇಯಿಂದ ಜಾರಿ ಬೀಚ್‌ಗೆ ಬಿದ್ದಿರುವ ಘಟನೆ ವರದಿಯಾಗಿದೆ. ಮೊಗಾದಿಶುವಿನ ಅಡೆನ್ ಅಬ್ದುಲ್ಲೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಲ್ಯಾಂಡಿಂಗ್ ಸಮಯದಲ್ಲಿ ವಿಮಾನ ಟೇಕ್ ಆಫ್ ಆದ ಸ್ವಲ್ಪ ಸಮಯದ ನಂತರ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡ ನಂತರ ಈ ಘಟನೆ ಸಂಭವಿಸಿದೆ.

ಯಾರಿಗೂ ಗಾಯಗಳಾಗಿಲ್ಲ. ಸ್ಟಾರ್‌ಸ್ಕಿ ಏವಿಯೇಷನ್ ನಿರ್ವಹಿಸುತ್ತಿದ್ದ ಈ ವಿಮಾನದಲ್ಲಿ 50 ಪ್ರಯಾಣಿಕರು ಮತ್ತು ಐದು ಸಿಬ್ಬಂದಿ ಇದ್ದರು. ಎಲ್ಲರನ್ನೂ ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ವಿಮಾನಯಾನ ಸಂಸ್ಥೆಯ ಸಿಇಒ ಅಹ್ಮದ್ ನೂರ್ ದೃಢಪಡಿಸಿದರು. ವಿಮಾನವು ರನ್‌ವೇಯಿಂದ ಜಾರಿ ಹಿಂದೂ ಮಹಾಸಾಗರದ ತೀರದ ಬಳಿ ನಿಂತಿತ್ತು. ವಿಮಾನವು ಉತ್ತರ ನಗರವಾದ ಗಾಲ್ಕಸಿಯೊಗೆ ತೆರಳುತ್ತಿತ್ತು. ಟೇಕ್ ಆಫ್ ಆದ ಸುಮಾರು 15 ನಿಮಿಷಗಳ ನಂತರ, ಸಿಬ್ಬಂದಿ ತಾಂತ್ರಿಕ ಸಮಸ್ಯೆಯನ್ನು ವರದಿ ಮಾಡಿ ತುರ್ತು ಭೂಸ್ಪರ್ಶಕ್ಕಾಗಿ ಹಿಂತಿರುಗಲು ನಿರ್ಧರಿಸಿದ್ದರು. ಲ್ಯಾಂಡಿಂಗ್ ಪ್ರಯತ್ನದ ಸಮಯದಲ್ಲಿ, ವಿಮಾನವು ರನ್‌ವೇಯಿಂದ ಹೊರಟು ತೀರದ ಕಡೆಗೆ ಚಲಿಸಿತು. ರಕ್ಷಣಾ ತಂಡಗಳು ತ್ವರಿತವಾಗಿ ವಿಮಾನದಲ್ಲಿದ್ದ ಎಲ್ಲರನ್ನೂ ರಕ್ಷಿಸಿದೆ.

ಜಂತುಹುಳು ನಿವಾರಣೆಗಾಗಿ ಕೊಟ್ಟ ಮಾತ್ರೆ ಸೇವಿಸಿ ಆಸ್ಪತ್ರೆ ಸೇರಿದ 120 ಮಕ್ಕಳು!



ಫರೂಕಾಬಾದ್/ಮೈನ್‌ಪುರಿ: ಶಾಲೆಗಳಲ್ಲಿ ಜಂತುಹುಳು ನಿವಾರಣೆಗಾಗಿ ನೀಡಿದ ಮಾತ್ರೆ ಸೇವಿಸಿದ 120 ವಿದ್ಯಾರ್ಥಿಗಳು ಅಸ್ವಸ್ಥರಾಗಿ ಆಸ್ಪತ್ರೆ ಸೇರಿರುವ ಪ್ರಕರಣ ಉತ್ತರ ಪ್ರದೇಶದ ಫರೂಕಾಬಾದ್ ಹಾಗೂ ಮೈನ್‌ಪುರಿ ಜಿಲ್ಲೆಗಳಲ್ಲಿ ವರದಿಯಾಗಿದೆ. ಜಂತುಹುಳು ನಿವಾರಣೆಗಾಗಿ ಅಲ್ಬೆಂಡಜೋಲ್ ಮಾತ್ರೆಗಳನ್ನು ನೀಡಲಾಗಿತ್ತು. ಅದನ್ನು ಸೇವಿಸಿದ ನಂತರ ಮಕ್ಕಳಲ್ಲಿ ತಲೆನೋವು, ವಾಂತಿ ಕಾಣಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಫರೂಕಾಬಾದ್‌ನ ರಾಥೋರಾ ಮೊಹದ್ದೀನ್‌ಪುರ ಗ್ರಾಮದ ಜವಹಾರ್ ಲಾಲ್ ಪ್ರೇಮಾ ಶಾಲೆಯಲ್ಲಿ ಮಾತ್ರೆ ಸೇವಿಸಿದ ಸುಮಾರು 150 ಮಕ್ಕಳಲ್ಲಿ 100 ಮಂದಿ ಅಸ್ವಸ್ಥರಾಗಿದ್ದರು. ಇದರಿಂದಾಗಿ, ಶಾಲಾಡಳಿತ ಹಾಗೂ ಪೋಷಕರಲ್ಲಿ ಆತಂಕ ಸೃಷ್ಟಿಯಾಗಿದೆ.

33 ವಿದ್ಯಾರ್ಥಿಗಳನ್ನು ಕಮಲಗಂಜ್ ಸಾರ್ವಜನಿಕ ಆಸ್ಪತ್ರೆಗೆ ಹಾಗೂ ಉಳಿದ 67 ಮಕ್ಕಳನ್ನು ಜಿಲ್ಲಾ ಕೇಂದ್ರದಲ್ಲಿರುವ ಲೋಹಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಜಿಲ್ಲಾಧಿಕಾರಿ ಅಶುತೋಷ್‌ಕುಮಾರ್ ದ್ವಿವೇದಿ ಲೋಹಿಯಾ ಆಸ್ಪತ್ರೆಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ವಿಚಾರಿಸಿದ್ದಾರೆ. ಜಿಲ್ಲಾದ್ಯಂತ ಎಲ್ಲ ಶಾಲೆಗಳಲ್ಲೂ ಜಂತುಹುಳು ನಿವಾರಣಾ ಅಭಿಯಾನ ಆರಂಭಿಸಲಾಗಿದೆ. ಆದರೆ, ಆ ಶಾಲೆಯಲ್ಲಷ್ಟೇ ಸಮಸ್ಯೆ ಕಾಣಿಸಿಕೊಂಡಿದೆ. ಸದ್ಯ ಮಕ್ಕಳ ಆರೋಗ್ಯ ಸ್ಥಿರವಾಗಿದೆ ಎಂದು ಡಿಹೆಚ್‌ಓ ಡಾ.ಅವನೀಂದ್ರ ಕುಮಾರ್ ತಿಳಿಸಿದ್ದಾರೆ.

ಅರಣ್ಯ ಹಕ್ಕು ಕಾಯ್ದೆಯ ಸೌಲಭ್ಯಗಳನ್ನು ಆದಿವಾಸಿಗಳಿಗೆ ತಲುಪಿಸಿ, ಸತಾಯಿಸಬೇಡಿ

ಮಡಿಕೇರಿ ಫೆ.11– ಹಲವು ದಶಕಗಳಿಂದ ಅರಣ್ಯ, ಸರ್ಕಾರಿ ಭೂಮಿ ಅನುಭವಿಸಿಕೊಂಡು ಬಂದಿರುವ ಆದಿವಾಸಿಗಳಿಗೆ ಅರಣ್ಯ ಹಕ್ಕು ಕಾಯ್ದೆಯ ಸೌಲಭ್ಯವನ್ನು ಹೆಚ್ಚಿನ ಕಾಳಜಿಯಿಂದ ತಲುಪಿಸುವಂತಾಗಬೇಕು ಎಂದು ಕೇಂದ್ರ ಬುಡಕಟ್ಟು ಮಂತ್ರಾಲಯದ ಅಧಿಕಾರಿ ಗಿರಿಧರ್ ತಿಳಿಸಿದ್ದಾರೆ.

ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ ಅರಣ್ಯಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ತಲುಪಿಸುವ ಸಂಬಂಧ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ ಮಾನ್ಯ ಮಾಡುವ ಸಂಬಂಧ ನಿಯಮ ಮತ್ತು ತಿದ್ದುಪಡಿಗಳನ್ನು ಸಮರ್ಪಕವಾಗಿ ಜಾರಿಗೊಳಿಸಿ, ಆದಿವಾಸಿಗಳಿಗೆ ಸೌಲಭ್ಯಗಳನ್ನು ತಲುಪಿಸಬೇಕು ಎಂದು ಹೇಳಿದರು.

ಗ್ರಾಮ ಮಟ್ಟದಲ್ಲಿನ ಅಧಿಕಾರಿಗಳು ಅರ್ಹ ಬುಡಕಟ್ಟು ಜನಾಂಗದವರಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಸೌಲಭ್ಯ ತಲುಪಿಸಬೇಕು. ಯಾವುದೇ ಕಾರಣಕ್ಕೂ ಸತಾಯಿಸಬಾರದು. ಇತರರಂತೆ


ಕೇಂದ್ರ ಬುಡಕಟ್ಟು ಮಂತ್ರಾಲಯದ ಅಧಿಕಾರಿ ಗಿರಿಧರ್ ಕಾರ್ಯಾಗಾರವನ್ನು ಉದ್ಘಾಟಿಸಿದರು.

ಬದುಕಲು ಅವಕಾಶ ಮಾಡಬೇಕು. ಗ್ರಾಮ ಅರಣ್ಯ ಸಮಿತಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಉಪ ಮತ್ತು ಜಿಲ್ಲಾ ಮಟ್ಟದ ಸಮಿತಿಗಳ ಸದಸ್ಯರು, ಜಿಲ್ಲಾ, ತಾಲೂಕು ಮಟ್ಟದ ಸಂಬಂಧಿಸಿದ ಅಧಿಕಾರಿ ಅರಣ್ಯ ಹಕ್ಕು ಕಾಯ್ದೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡಿ ಕಾರ್ಯಕ್ರಮ ಜಾರಿಗೆ ಮುಂದಾಗಬೇಕು ಎಂದು ಗಿರಿಧರ ಅವರು ಹೇಳಿದರು. ಜಿಲ್ಲೆಯಲ್ಲಿ ಸೋಲಿಗ, ಜೇನುಕುರುಬ ಬೆಟ್ಟಕುರುಬ, ಕಾಡುಕುರುಬ, ಎರವ, ಪಣಿಯ, ಕುಡಿಯ, ಮಲೆಕುಡಿಯ ಹೀಗೆ ಹಲವು ಆದಿವಾಸಿ ಕುಟುಂಬಗಳು ಇಂದಿಗೂ ಸಹ ಕಷ್ಟದಲ್ಲಿ ಬದುಕುತ್ತಿದ್ದು, ಅಗತ್ಯ ಸೌಲಭ್ಯ ಕಲ್ಪಿಸಬೇಕಾಗಿದೆ ಎಂದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ನೆಹರು, ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ಸೆಂಥಿಲ್ ಕುಮಾರ್, ಗೋಪಾಲ್, ಐಟಿಡಿಪಿ ಇಲಾಖಾ ಅಧಿಕಾರಿ ಎಸ್.ಹೊನ್ನೇಗೌಡ, ತಾ.ಪಂ. ಇಒ ಶೇಖರ್, ಅಪ್ಪಣ್ಣ, ತಹಶೀಲ್ದಾರ್ ಶ್ರೀಧರ್, ಆರ್‌ಎಫ್‌ಓಗಳು, ಪಿಡಿಓಗಳು, ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಕೃಪಾ ದೇವರಾಜ್‌ಗೆ ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ ಪ್ರದಾನ

ಮಡಿಕೇರಿ, ಫೆ.11–ಜಿಲ್ಲೆಯ ಸಾಹಿತ್ಯ ಕ್ಷೇತ್ರದ ಅತ್ಯಂತ ಪ್ರತಿಷ್ಠಿತ ಪ್ರಶಸ್ತಿ 'ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ'ಯನ್ನು ಸಾಹಿತಿ ಕೃಪಾ ದೇವರಾಜ್ ಅವರಿಗೆ ಬುಧವಾರ ನಗರದಲ್ಲಿ ಪ್ರದಾನ ಮಾಡಲಾಯಿತು.

ಜಿಲ್ಲಾ ಸಾಹಿತ್ಯ ಪರಿಷತ್ತು ಮತ್ತು ಪತ್ರಿಕಾ ಭವನ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ನಡೆದ ಸಮಾರಂಭವನ್ನು ಉದ್ಘಾಟಿಸಿದ ಹಿರಿಯ ಸಾಹಿತಿ ಸುಬ್ರಾಯ ಸಂಪಾಜೆ ಮಾತನಾಡಿ, ಕಥೆ ಎನ್ನುವಂತಹದ್ದು ನಮ್ಮ ಸುತ್ತಮುತ್ತಲಿನ ಸಣ್ಣ ಪುಟ್ಟ ವಿಚಾರಗಳಲ್ಲೂ ಅಡಗಿ ಕುಳಿತಿದೆ. ಲೇಖಕರು ಯಾವತ್ತೂ ತಮ್ಮ ಬರಹದ ಅಂತಃಸತ್ವದ ಮೂಲಕ ಬೆಳಕಿಗೆ ಬರುವ ಪ್ರಯತ್ನಗಳನ್ನು ನಡೆಸುವಂತಾಗಬೇಕೆಂದು ಅಭಿಪ್ರಾಯಿಸಿದರು.

ಮುಖ್ಯ ಭಾಷಣಕಾರರಾಗಿ ಉಪಸ್ಥಿತರಿದ್ದ ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಉಪನ್ಯಾಸಕಿ ಎಸ್.ಎಂ.ರಜನಿ ಮಾತನಾಡಿ, ಕೃಪಾದೇವರಾಜ್ ರಚಿಸಿರುವ ಕಥಾ ಸಂಕಲನ ಮಂತ್ರ ಪುಷ್ಪದ ಪ್ರತಿಯೊಂದು ಕಥೆಯೂ ಹೃದಯಸ್ಪರ್ಶಿಯಾಗಿ ಜೀವಂತವಾಗಿವೆ. ಅವುಗಳು ನಿಮ್ಮೊಡನೆ ಸಂವಹನ ನಡೆಸುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪುರಸ್ಕೃತ ಕೃಪಾದೇವರಾಜ್ ಮಾತನಾಡಿ, ಗೌರಮ್ಮ ದತ್ತಿ ಪ್ರಶಸ್ತಿ ಲಭಿಸಿರುವುದು ತನಗೆ


ಕೃಪಾ ದೇವರಾಜ್‌ಗೆ ಗಣ್ಯರು ಕೊಡಗಿನ ಗೌರಮ್ಮ ದತ್ತಿ ಪ್ರಶಸ್ತಿ ಪ್ರದಾನ ಮಾಡಿದರು.

ಸಂಭ್ರಮವನ್ನು ತಂದಿದ್ದು, ಮಾತನ್ನು ಮೂಕವಾಗಿಸಿದೆ. ಗೌರಮ್ಮ ದತ್ತಿ ಪ್ರಶಸ್ತಿ ಪಡೆಯಬೇಕೆಂಬ ಜಿಲ್ಲೆಯ ಪ್ರತಿಯೊಬ್ಬ ಮಹಿಳಾ ಸಾಹಿತಿಯ ಕನಸಾಗಿದ್ದು, ಆ ಕನಸು ಈಡೇರಿದ ದಿನವಾಗಿದೆ ಎಂದು ತಿಳಿಸಿದರು. ಬಾಲ್ಯದಿಂದಲೆ ನನ್ನಲ್ಲಿದ್ದ ಓದಿನ ಹಂಬಲ ಇಂದು ನನ್ನನ್ನು ಈ ಸ್ಥಾನದಲ್ಲಿ ನಿಲ್ಲಲು ನೆರವಾಗಿದೆ. ನನ್ನೊಳಗಿನ ಭಾವನೆಗಳನ್ನು ಹೊರ ಹಾಕುವಲ್ಲಿ ಅಕ್ಷರಗಳು ಸಹಕಾರಿಯಾಗಿವೆ ಎಂದು ತಮ್ಮ ಭಾವನೆಗಳನ್ನು ತೆರೆ ದಿಟ್ಟರು.

ಕೊಡಗು ಪತ್ರಕರ್ತರ ಸಂಘದ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಿ.ವಿ.ರವಿಕುಮಾರ್, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ. ಉಮೇಶ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪಿ. ಕೇಶವ ಕಾಮತ್ ಮಾತನಾಡಿದರು.

ವಿಜೇತರಿಗೆ ಬಹುಮಾನ: 2025ನೇ ಸಾಲಿನ ಗೌರಮ್ಮ ಸಣ್ಣ ಕಥೆಗಳ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಹಾಕತ್ತೂರು ಸರ್ಕಾರಿ ಪ್ರೌಢಶಾಲೆಯ ಎ.ಐ.ಕುಬ್ರಾ, ಕಡಗದಾಳು ಸರ್ಕಾರಿ ಪ್ರೌಢಶಾಲೆಯ ಬಿ.ಎನ್.ಹರ್ಷಿತ ಮತ್ತು ತೃತೀಯ ಸ್ಥಾನ ಪಡೆದ ಕಡಗದಾಳು ಸರ್ಕಾರಿ ಪ್ರೌಢಶಾಲೆಯ ಪಾನುಪ್ರಿಯ ಅವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಪತಿಗೆ ಸಯನೈಡ್ ಕುಡಿಸಿ ಸಾಯಿಸಿದ್ದ ಪತ್ನಿ, ಪ್ರಿಯಕರನಿಗೆ ಜೀವಾವಧಿ ಸಜೆ

ಮಡಿಕೇರಿ, ಫೆ.11–ಅಕ್ರಮ ಸಂಬಂಧಕ್ಕೆ ಅಡ್ಡಿಯಾದ ಪತಿಗೆ ಸಯನೈಡ್ ಕುಡಿಸಿ ಕೊಲೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪತ್ನಿ ಮತ್ತು ಆಕೆಯ ಪ್ರಿಯಕರನಿಗೆ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಸೋಮವಾರಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ತಣ್ಣೀರು ಹಳ್ಳ ಗ್ರಾಮದ ರಾಧ ಮತ್ತು ಸೋಮವಾರಪೇಟೆ ನಿವಾಸಿ ಬಿ.ಡಿ.ಮುರಳಿ ಎಂಬುವವರೇ ಜೀವಾವಧಿ ಶಿಕ್ಷೆಗೆ ಒಳಗಾದ ಅಪರಾಧಿಗಳಾಗಿದ್ದಾರೆ.

ಪ್ರಕರಣದ ಹಿನ್ನೆಲೆ: ತಣ್ಣೀರುಹಳ್ಳದ ರಾಧಾ ಸೋಮವಾರಪೇಟೆಯ ಸುರೇಶ ಎಂಬಾತನೊಂದಿಗೆ ವಿವಾಹವಾಗಿದ್ದರೂ ಮಂಗಳೂರಿನಲ್ಲಿ ಮೆಡಿಕಲ್ ರೆಪ್ ಆಗಿ ಕೆಲಸ ಮಾಡಿಕೊಂಡಿದ್ದ ಮುರಳಿಯೊಂದಿಗೆ ರಾಧ ಅಕ್ರಮ ಸಂಬಂಧ ಹೊಂದಿದ್ದಳೆನ್ನಲಾಗಿದೆ. 2019ರ ಜುಲೈ 17ರಂದು ಮುರಳಿ ಮಹಾರಾಷ್ಟ್ರ ಸೊಲ್ಲಾಪುರದ ಮಲ್ಲಿಕಾರ್ಜುನ ಮೊಟಗಿ ಎಂಬಾತನಿಂದ 500 ಗ್ರಾಂ ಪೊಟಾಷಿಯಂ ಸೈನೆಡ್ ಅನ್ನು ಕೊರಿಯರ್ ಮೂಲಕ ಪಡೆದುಕೊಂಡಿದ್ದ. ಬಳಿಕ ಸ್ವಲ್ಪ ಪೊಟಾಷಿಯಂ ಸೈನೆಡ್ ಅನ್ನು ನೀರಿನಲ್ಲಿ ಮಿಶ್ರಣ ಮಾಡಿ ಅದರಲ್ಲಿ ಹೂವು ಮತ್ತು ಕುಂಕುಮ ಹಾಗೂ ಒಂದು ಪತ್ರ ಇಟ್ಟು 'ಇದು ದೇವರ ಪ್ರಸಾದ ಮನೆಯ ಯಜಮಾನ ಮಾತ್ರ ಕುಡಿಯಬೇಕು' ಎಂದು ಬರೆದು ಪಾರ್ಸಲ್ ಅನ್ನು ಸುರೇಶ ಕೆಲಸ ಮಾಡುತ್ತಿದ್ದ ಸೋಮವಾರಪೇಟೆಯ ಹೋಟೆಲ್‌ಗೆ ಕೊರಿಯರ್ ಮಾಡಿದ್ದ.

2019ರ ಆ.4ರಂದು ಸಂಜೆ ಮನೆಯ ಹಾಲ್‌ನಲ್ಲಿ ಕುಳಿತಿದ್ದ ಪತಿ ಸುರೇಶ್‌ಗೆ 'ದೇವರ ಪ್ರಸಾದ ಬೇಡ ಎನ್ನಬಾರದು' ಎಂದು ಹೇಳಿ ಒತ್ತಾಯಪೂರ್ವಕವಾಗಿ ಪೊಟಾಷಿಯಂ ಸೈನೆಡ್ ಮಿಶ್ರಿತ ನೀರನ್ನು ಕುಡಿಸಿ ಸಾಯಿಸಿದ್ದಳೆನ್ನಲಾಗಿದೆ. ಉಳಿದಿದ್ದ ಪೊಟಾಷಿಯಂ ಸೈನೆಡ್ ನೀರನ್ನು ಮತ್ತು ಪ್ಲಾಸ್ಟಿಕ್ ಡಬ್ಬವನ್ನು ಮನೆ ಹಿಂಬದಿಯಲ್ಲಿರುವ ಒಲೆಗೆ ಹಾಕಿ ಸುಟ್ಟು ಸಾಕ್ಷ್ಯ ನಾಶ ಮಾಡಿದ್ದಳು. ಸೋಮವಾರಪೇಟೆ ಪಿಎಸ್‌ಐ ಶಿವಶಂಕರ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಸಾಕ್ಷ್ಯಾಧಾರಗಳ ಮೇಲೆ ಆರೋಪಿಗಳನ್ನು ಬಂಧಿಸಿ, ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪಣಾ ವರದಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಹೊಸಮನಿ ಪುಂಡಲಿಕ್ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಾದ ರಾಧ ಮತ್ತು ಮುರಳಿ ಇವರಿಬ್ಬರಿಗೂ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಕೆ.ಜಿ. ಅಶ್ವಿನಿ ವಾದ ಮಂಡಿಸಿದ್ದರು.

ಕೊಡವ ಭಾಷೆಗೂ ಸಾಂವಿಧಾನಿಕ ಭದ್ರತೆ ನೀಡಲು ಸಿಎನ್‌ಸಿ ಆಗ್ರಹ

ಮಡಿಕೇರಿ, ಫೆ.11–ತುಳು ಭಾಷೆಯಂತೆ ಕೊಡವ ಭಾಷೆಗೂ ಸಾಂವಿಧಾನಿಕ ಭದ್ರತೆ ನೀಡಬೇಕು ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಒತ್ತಾಯಿಸಿದ್ದಾರೆ.



ತುಳುವಿನಂತೆ ಕೊಡವ ಭಾಷೆಯನ್ನು ಸಂವಿಧಾನದ 345 ಪ್ರಕಾರ ರಾಜ್ಯದ ಅಧಿಕೃತ ಭಾಷೆಯಾಗಿ ಪರಿಗಣಿಸಬೇಕು. ಒಂದೇ ಭಾಷೆಗೆ ಜೋತು ಬಿದ್ದು, ಭಾಷಾ ಪ್ರಾಬಲ್ಯದ ಮೂಲಕ ಸಣ್ಣ ಸಣ್ಣ ಭಾಷೆಗಳನ್ನು ಹತ್ತಿಕ್ಕಿದರೆ ದೇಶದ ಏಕತೆಗೆ ಧಕ್ಕೆ ಬರುತ್ತದೆ. ಇದರಿಂದ ಒಗ್ಗಟ್ಟಾಗಿ ಮುಂದುವರಿಯಲು ಸಾಧ್ಯವಿಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ಪ್ರತಿ ಪಾದಿಸಿದ್ದಾರೆ.

ಭಾಷೆ ಉಳಿದರೆ ದೇಶ ಉಳಿಯುತ್ತದೆ. ವೈವಿಧ್ಯಮಯ ರಾಷ್ಟ್ರವನ್ನು ಒಂದಾಗಿಟ್ಟು ಮುಂದುವರಿಯಲು ಕೊಡವ ಭಾಷೆ ಸೇರಿದಂತೆ ಇಲ್ಲಿನ ಹಲವು ಭಾಷೆಗಳನ್ನು ಮುನ್ನಲೆಗೆ ತಂದು ಸಮಾನ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿ ಸುದೀರ್ಘ ಮನವಿ ಪತ್ರವನ್ನು ರಾಷ್ಟ್ರಪತಿಗಳು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕರಿಗೆ ಬಿ.ಕೆ.ಹರಿಪ್ರಸಾದ್ ಹಾಗೂ ಜಿಲ್ಲೆಯ ಇಬ್ಬರು ಶಾಸಕರುಗಳಿಗೆ ಕಳುಹಿಸಿರುವುದಾಗಿ ತಿಳಿಸಿದ್ದಾರೆ.

ಅಸಹಾಯಕರಿಗೆ ವಾತ್ಸಲ್ಯ ಕಿಟ್ ವಿತರಣೆ

ವಿರಾಜಪೇಟೆ, ಫೆ.11–ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ವತಿಯಿಂದ ತಾಲೂಕಿನಲ್ಲಿ ಅಸಹಾಯಕರಿಗೆ ವಾತ್ಸಲ್ಯ ಕಿಟ್ ವಿತರಿಸಲಾಯಿತು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕು ವ್ಯಾಪ್ತಿಯ ಒಟ್ಟು 67 ಜನರಿಗೆ ಮಾಸಾಶನ ಪ್ರತಿ ತಿಂಗಳು ನೀಡಲಾಗುತ್ತಿದ್ದು, ಪ್ರತಿ ವರ್ಷದಂತೆ ಈ ವರ್ಷವೂ ಹೊಸ ಮಾಸಾಶನ ಪಡೆಯುತ್ತಿರುವ 6 ಜನರಿಗೆ ಶ್ರೀ ಕ್ಷೇತ್ರದಿಂದ ವಾತ್ಸಲ್ಯ ಕಿಟ್‌ನ್ನು ವಿತರಣೆ ಮಾಡಲಾಯಿತು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ


ತಾಲೂಕಿನಲ್ಲಿ ಅಸಹಾಯಕರಿಗೆ ವಾತ್ಸಲ್ಯ ಕಿಟ್ ವಿತರಿಸಲಾಯಿತು.

ತಾಲೂಕು ಯೋಜನಾಧಿಕಾರಿ ಹರೀಶ್ ಪಿ, ವಲಯದ ಮೇಲ್ವಿಚಾರಕ ಶಿವಕುಮಾರ್ ಹಾಗೂ ಪ್ರತಾಪ್, ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಉಷಾರಾಣಿ, ಒಕ್ಕೂಟದ ಕಾರ್ಯದರ್ಶಿ, ಸೇವಾ ಪ್ರತಿನಿಧಿಗಳು ಸಂಘದ ಸದಸ್ಯರು ಉಪಸ್ಥಿತರಿದ್ದರು.

ಪೊನ್ನಂಪೇಟೆ ಬಳಿ ಹುಲಿ ಸೆರೆ


- ಎರಡೇ ದಿನದಲ್ಲಿ ಮೂರು ಹಸು ಬಲಿ ಪಡೆದಿದ್ದ ವ್ಯಾಘ್ರ
- ಹುಲಿ ಸೆರೆಗೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದರು

ಗೋಣಿಕೊಪ್ಪ, ಫೆ.11–ಪೊನ್ನಂಪೇಟೆ ತಾಲೂಕಿನ ಬೆಸಗೂರು ಗ್ರಾಮದಲ್ಲಿ ಹಸುಗಳ ಬಲಿ ಪಡೆದಿದ್ದ ಹುಲಿಯನ್ನು ಅರಣ್ಯ ಇಲಾಖೆ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದೆ.

ಎರಡು ಸಾಕಾನೆಗಳ ಬಳಸಿಕೊಂಡು ಕಾರ್ಯಾಚರಣೆಗಿಳಿದ ಅರಣ್ಯ ಇಲಾಖೆ ತಂಡ ಅಂದಾಜು 6 ವರ್ಷದ ಗಂಡು ಹುಲಿಯನ್ನು ಸೆರೆಹಿಡಿದು ಬೆಂಗಳೂರು ಬನ್ನೇರುಘಟ್ಟ ಅರಣ್ಯಧಾಮಕ್ಕೆ ಸಾಗಿಸಿದ್ದಾರೆ. ಹುಲಿಯ ಕಾಲಿನ ಭಾಗದಲ್ಲಿ ಗಾಯ ವಾಗಿದ್ದರಿಂದ ಅದುಅರಣ್ಯದಿಂದ ಹೊರ ಬಂದು ಸಾಕುಪ್ರಾಣಿಗಳ ಬೇಟೆಯಾಡುತ್ತಿತ್ತು ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಡಿಎಫ್‌ಓ ಜಗನ್ನಾಥ್ ಮತ್ತು ಎಸಿಎಫ್ ಗೋಪಾಲ್ ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ಮತ್ತು ಸಾಕಾನೆಗಳನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಲಾಗಿತ್ತು ಹುಲಿ ಸೆರೆ ಹಿಡಿದಿದ್ದಕ್ಕಾಗಿ ಶಾಸಕ ಎ.ಎಸ್ ಪೊನ್ನಣ್ಣ ಮತ್ತು ಅರಣ್ಯ ಸಿಬ್ಬಂದಿಗೆ ಬೆಸಗೂರು ಗ್ರಾಮಸ್ಥರು ಸಾಮಾಜಿಕ ಜಾಲತಾಣಗಳಲ್ಲಿ ಧನ್ಯವಾದ ಸಲ್ಲಿಸಿದ್ದಾರೆ.

ಕಳೆದ ಭಾನುವಾರ ಮತ್ತು ಸೋಮವಾರ ಮೂರು ಹಸುಗಳನ್ನು ಬಲಿ ಪಡೆದಿದ್ದರಿಂದ ಗ್ರಾಮಸ್ಥರು ರೈತ ಸಂಘದ ಅಧ್ಯಕ್ಷರಾದ ಮನು ಸೋಮಯ್ಯ ನೇತೃತ್ವ



ದಲ್ಲಿ ಪ್ರತಿಭಟನೆ ನಡೆಸಿದ್ದರು. ಗ್ರಾಮಸ್ಥರಿಗೆ ನೀಡಿದ ಭರವಸೆಯಂತೆ ಅರಣ್ಯ ಇಲಾಖೆ ಸಿಬ್ಬಂದಿ ಹುಲಿ ಸೆರೆಗೆ ಕಾರ್ಯಾಚರಣೆಗಿಳಿದು ಮಂಗಳವಾರ ರಾತ್ರಿ ಹುಲಿ ಸೆರೆ ಹಿಡಿದಿದ್ದು ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ಹುಲಿಯನ್ನು ಬನ್ನೇರುಘಟ್ಟಕ್ಕೆ ಸ್ಥಳಾಂತರಿಸುವ ವಿಚಾರವನ್ನು ವಿಧಾನಸೌಧದಲ್ಲಿದ್ದ ಶಾಸಕ ಎಎಸ್ ಪೊನ್ನಣ್ಣ ತಿಳಿದು, ಮೆಟ್ರೋ ಮುಖಾಂತರ ಕೆಂಗೇರಿಗೆ ತೆರಳಿ, ಸೆರೆ ಸಿಕ್ಕ ಹುಲಿ ವೀಕ್ಷಿಸಿ, ಅರಣ್ಯ ಅಧಿಕಾರಿಗಳಿಂದ ಮಾಹಿತಿ ಪಡೆದರು. ಅರಣ್ಯ ಅಧಿಕಾರಿಗಳ ಕ್ಷಿಪ್ರ ಕಾರ್ಯಾಚರಣೆ ಹಾಗೂ ಜನರ ಸಂಕಷ್ಟಕ್ಕೆ ಸ್ಪಂದಿಸಿದ ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ತಡೆಗೆ ಎಎನ್‌ಪಿಆರ್ ಕ್ಯಾಮರಾ ಅಳವಡಿಕೆ

ಹೆಲ್ಮೆಟ್ ರಹಿತ ಚಾಲನೆ, ಟ್ರಿಪಲ್ ರೈಡಿಂಗ್, ನಂಬರ್ ಪ್ಲೇಟ್ ವಿರೂಪ, ಸೀಟ್ ಬೆಲ್ಟ್ ಧರಿಸದೆ ಕಾರು ಚಾಲನೆ, ವಾಹನ ಚಾಲನೆ ಮಾಡುವಾಗ ಫೋನ್ ಬಳಸಿದರೆ ದಂಡ

ಚಾಮರಾಜನಗರ: ಜಿಲ್ಲೆಯಲ್ಲಿ ವಾಹನ ಸವಾರರಿಂದಾಗುವ ನಿಯಮ ಉಲ್ಲಂಘನೆ ನಿಯಂತ್ರಿಸಿ ಅಪಘಾತಗಳನ್ನು ಕಡಿಮೆ ಮಾಡಲು 14 ಕಡೆ ಎಎನ್‌ಪಿಆರ್ (ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಗ್ನೈಷನ್) ತಂತ್ರಜ್ಞಾನದ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ತಿಳಿಸಿದರು.

ನಗರದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಬುಧವಾರ ಆಯೋಜಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಚಾರ ನಿಯಮಗಳನ್ನು ಉಲ್ಲಂಘನೆ ಮಾಡುವ ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲು ಇದುವರೆಗೂ ಜಿಲ್ಲೆಯಲ್ಲಿ ಎ ಎನ್ ಪಿಆರ್ ಕ್ಯಾಮರಾ ವ್ಯವಸ್ಥೆ ಇರಲಿಲ್ಲ. ನಾನು ಅಧಿಕಾರ ವಹಿಸಿಕೊಂಡ ನಂತರ ಇದನ್ನು ಗಮನಿಸಿ ಜಿಲ್ಲಾ ಕೇಂದ್ರ ಚಾಮರಾಜನಗರ ಸೇರಿ ತಾಲೂಕು ಕೇಂದ್ರಗಳಲ್ಲಿ ಈ ಕ್ಯಾಮರಾ ಅಳವಡಿಸಲು ಕ್ರಮ ಕೈಗೊಂಡಿದ್ದೇನೆ ಎಂದರು.

ಇನ್ನೊಂದು ತಿಂಗಳೊಳಗೆ ಈ ತಂತ್ರಜ್ಞಾನ ವ್ಯವಸ್ಥೆ ಜಾರಿಗೆ ಬರಲಿದೆ. ಇದರಿಂದ ದ್ವಿಚಕ್ರ ವಾಹನಗಳಲ್ಲಿ ಹೆಲ್ಮೆಟ್ ರಹಿತ ಸವಾರಿ, ಟ್ರಿಪಲ್ ರೈಡಿಂಗ್, ಫೋನಿನಲ್ಲಿ ಮಾತನಾಡುತ್ತಾ ಹೋಗುವುದು, ದೋಷರಹಿತ ನಂಬರ್ ಪ್ಲೇಟ್, ನಾಲ್ಕು ಚಕ್ರ ವಾಹನಗಳಲ್ಲಿ ಸೀಟ್ ಬೆಲ್ಟ್ ಧರಿಸದಿರುವುದು. ಇದನ್ನೆಲ್ಲ ಕ್ಯಾಮರಾ ಪತ್ತೆಹಚ್ಚಿ, ಕಂಟ್ರೋಲ್ ರೂಮಿಗೆ ಕಳುಹಿಸುತ್ತದೆ. ಆಟೋಮ್ಯಾಟಿಕ್ ಆಗಿ ದಂಡದ ಚಲನ್ ಸಿದ್ಧವಾಗಿ ವಾಹನ ಮಾಲೀಕರ ವಿಳಾಸಕ್ಕೆ ಚಲನ್ ತಲುಪುತ್ತದೆ. ಈ ವ್ಯವಸ್ಥೆ ಜಾರಿಗೆ ಬಂದ ನಂತರ ಸಂಚಾರ ನಿಯಮಗಳ ಉಲ್ಲಂಘನೆ ಪ್ರಕರಣಗಳು ಗಣನೀಯವಾಗಿ ಕಡಿಮೆಯಾಗಲಿವೆ ಎಂದರು.


ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಎಸ್ಪಿ ಮುತ್ತುರಾಜು ಮಾತನಾಡಿದರು.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಕೊಂಗರಹಳ್ಳಿ ನಮ್ಮ ಮುತ್ತಾತನ ಊರು. ಹೀಗಾಗಿ ಈ ಜಿಲ್ಲೆ ನನ್ನ ತವರು ಜಿಲ್ಲೆ ಎಂಬ ಹೆಮ್ಮೆಯಿದೆ. ಹಿಂದುಳಿದ ಜಿಲ್ಲೆಯ ಜನರಿಗೆ ಒಂದು ಒಳ್ಳೆಯ ಸೇವೆ ಮಾಡುಬಹುದು, ಇಲ್ಲಿಯ ಜನರಿಗೆ ತುಂಬಾಹೆಚ್ಚು ಹೆಚ್ಚು ಸೇವೆ ಮಾಡುವುದಕ್ಕೆ ಅವಕಾಶಗಳಿವೆ. ನಾನು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸುವುದು ನನ್ನದೇ ನೆಲದಲ್ಲಿ ಕೆಲಸ ಮಾಡಿದ ತೃಪ್ತಿ ಕೊಡುತ್ತದೆ. ನಾನು ಎಎಸ್ಪಿಯಾಗಿ ಮೊದಲು ಬಂದದ್ದು, ಚಾಮರಾಜನಗರಕ್ಕೆ, ಈಗ ಎಸ್ಪಿಯಾಗಿಯೂ ಮೊದಲು ಚಾಮರಾಜನಗರ ಜಿಲ್ಲೆಗೇ ಬಂದಿದ್ದೇನೆ. – ಮುತ್ತುರಾಜು, ಎಸ್ಪಿ

ಮುಖ್ಯಮಂತ್ರಿಯವರು ಗೃಹಮಂತ್ರಿಯವರ ಆಶಯ ಮಾದಕದ್ರವ್ಯ ಮುಕ್ತ ಕರ್ನಾಟಕ ಮಾಡಬೇಕೆನ್ನುವುದು. ಇದರ ಒಂದು ಭಾಗವಾಗಿ ಚಾಮರಾಜನಗರ ಜಿಲ್ಲೆಯನ್ನು ಮಾದಕ ದ್ರವ್ಯ ಮುಕ್ತ ಮಾಡುವುದು ನನ್ನ ಗುರಿಯಾಗಿದೆ. ಮಾದಕ ದ್ರವ್ಯ ಬೆಳೆಯುವುದು, ಸಾಗಾಣಿಕೆ ಮಾಡುವುದು, ಸೇವನೆ ಮಾಡುವುದು ಅಕ್ಷಮ್ಯ ಅಪರಾಧವಾಗಿದೆ. ಅಂತಹವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕೈಗೊಳ್ಳುತ್ತೇವೆ ಎಂದರು.

ಮಾನವ–ಪ್ರಾಣಿ ಸಂಘರ್ಷ ತಡೆಗೆ ಒತ್ತು: ಜಿಲ್ಲೆಯ ಶೇ.51ರಷ್ಟು ಅರಣ್ಯ ಪ್ರದೇಶವನ್ನು ಹೊಂದಿದ್ದು, ಮಾನವ–ಪ್ರಾಣಿ ಸಂಘರ್ಷ ಹೆಚ್ಚಿದೆ. ಇದರಿಂದ ಕಾನೂನು ಸುವ್ಯವಸ್ಥೆ ಸಮಸ್ಯೆ ಬರುತ್ತದೆ. ಅದಕ್ಕೋಸ್ಕರ ನಾವೂ ಜಿಲ್ಲಾಡಳಿತ, ಅರಣ್ಯ ಇಲಾಖೆಯವರ ಜೊತೆ ಸಮನ್ವಯ ಸಾಧಿಸಿ, ಇದರಿಂದ ಉಂಟಾಗುವ ಸಮಸ್ಯೆಗಳನ್ನು ನಿವಾರಿಸಲು ಪ್ರಥಮ ಆದ್ಯತೆ ನೀಡಿದ್ದೇನೆ.

ಅಲ್ಲದೆ ನಮ್ಮ ಡಿಜಿ, ಐಜಿ ಅವರು ಕೂಡ ಮಾನವ–ಪ್ರಾಣಿ ಸಂಘರ್ಷದಲ್ಲಿ ತಕ್ಷಣಕ್ಕೆ ಏನು ಕ್ರಮಕೈಗೊಳ್ಳಬೇಕು, ಯಾವ ಇಲಾಖೆಯ ಜೊತೆಯೊಂದಿಗೆ ಸಹಕಾರ ತೆಗೆದುಕೊಳ್ಳಬೇಕು ಎಂದು ಆದೇಶಿಸಿದ್ದಾರೆ. ಅದರ ಪ್ರಕಾರ ಈಗಾಗಲೇ ಎಲ್ಲ ಮಾನವ–ಪ್ರಾಣಿ ಸಂಘರ್ಷ ನಿಯಂತ್ರಿಸಲು ಒತ್ತು ನೀಡಲಾಗಿದೆ ಎಂದರು.

ಅಂತಾರಾಜ್ಯ ಕಳ್ಳತನ ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮ : ಜಿಲ್ಲೆಯು ತಮಿಳುನಾಡು ಹಾಗೂ ಕೇರಳ ಗಡಿಯನ್ನು ಹಂಚಿಕೊಂಡಿದೆ. 6 ಅಂತಾರಾಜ್ಯ ಚೆಕ್ ಪೋಸ್ಟ್‌ಗಳಿವೆ. ಹೀಗಾಗಿ ಅಧಿಕಾರ ವಹಿಸಿಕೊಂಡು ಮೊದಲಿಗೆ ಅಂತಾರಾಜ್ಯ ಗಡಿ ಚೆಕ್ ಪೋಸ್ಟ್‌ಗಳ ತಪಾಸಣೆ ನಡೆಸಿದೆ. ಈಗ ಚೆಕ್ ಪೋಸ್ಟ್‌ಗಳಲ್ಲಿ 24 ಗಂಟೆಯೂ ತಪಾಸಣೆ ನಡೆಯುತ್ತಿದೆ. ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಅಲ್ಲಿ ಯಾವುದೇ ಅಕ್ರಮ ಸಾಗಾಟ ನಡೆಯಬಾರದು. ಅಂತಾರಾಜ್ಯ ಅಪರಾಧ ಕೃತ್ಯಗಳು ನಡೆಯಬಾರದು. ಅದಕ್ಕಾಗಿ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಕಟ್ಟುನಿಟ್ಟಿನ ಕ್ರಮ ವಹಿಸಲಾಗಿದೆ ಎಂದರು.

ಒಟ್ಟಾರೆ ಜನರು ಶಾಂತಿ ಮತ್ತು ನೆಮ್ಮದಿಯಿಂದ ಇರಲು ಪೊಲೀಸ್ ಇಲಾಖೆಯಿಂದ ಕೈಗೊಳ್ಳಬಹುದಾದ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಎಸ್ಪಿ ಮುತ್ತುರಾಜು ತಿಳಿಸಿದರು.

ಸಂವಾದದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ, ಪ್ರಧಾನ ಕಾರ್ಯ ದರ್ಶಿ ಪ್ರಸಾದ್ ಲಕ್ಕೂರು ಉಪಸ್ಥಿತರಿದ್ದರು.

ನೂತನ ಎಸ್ಪಿಯವರ ಕ್ರಮಗಳ ಪ್ರಮುಖಾಂಶಗಳು

- ಜಿಲ್ಲಾ ಕೇಂದ್ರದಲ್ಲಿ ಮನೆಗಳ್ಳತನ ತಡೆಯಲು ಕ್ರೈಂ ಪೊಲೀಸ್ ಸಿಬ್ಬಂದಿಯ ಪುನರ್ ಸಂಘಟನೆ.
- ಎಲ್ಲ ಠಾಣೆಗಳಲ್ಲೂ ಬೀಟ್‌ಗಳ ಸಂಖ್ಯೆ ಹೆಚ್ಚಳ
- ಗುಡ್ ಮಾರ್ನಿಂಗ್ ಬೀಟ್ ಆರಂಭ. ಈ ಬೀಟ್ ಪೊಲೀಸರು ಪ್ರತಿಮೆಗಳು, ಧಾರ್ಮಿಕ ಸ್ಥಳಗಳು, ಸೂಕ್ಷ್ಮ ಪ್ರದೇಶಗಳಲ್ಲಿ ಬೆಳಗಿನ ಜಾವ 4 ರಿಂದ 6 ರವರೆಗೆ ಗಸ್ತು ಮಾಡುತ್ತಿದ್ದಾರೆ.
- ಬೆಳಿಗ್ಗೆ 9 ರಿಂದ 11 ರವರೆಗೆ, ಸಂಜೆ 6 ರಿಂದ 8 ರವರೆಗೆ ರಿಫ್ಲೆಕ್ಟರ್ ಜಾಕೆಟ್ ಧರಿಸಿದ ಪೊಲೀಸರಿಂದ ಜನದಂದಣಿ ಪ್ರದೇಶಗಳಲ್ಲಿ ನಿಗಾ ವ್ಯವಸ್ಥೆ.
- ಠಾಣೆಗಳಲ್ಲಿ ಜನಸ್ನೇಹಿ ಪೊಲೀಸ್ ವ್ಯವಸ್ಥೆ. ಠಾಣೆಗೆ ದೂರು ನೀಡಲು ಬಂದಾಗ ಜನರ ಜೊತೆ ಸ್ನೇಹದಿಂದ ಮಾನವೀಯತೆಯಿಂದ ನಡೆದುಕೊಳ್ಳಬೇಕು.
- ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಅಕ್ಕ ಪಡೆ ಸ್ಥಾಪನೆ.
- ಜಿಲ್ಲೆಯ ಜನರ ಸೋಷಿಯಲ್ ಮೀಡಿಯಾ ಮಾನಿಟರಿಂಗ್ ಮಾಡಲು 67 ಜನ ಸಿಬ್ಬಂದಿ ನಿಯೋಜನೆ, ಇವರು ಪ್ರಚೋದನಕಾರಿ ಪೋಸ್ಟ್ ಗಳ ಬಗ್ಗೆ ನಿಗಾ ವಹಿಸಿ ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳುತ್ತಾರೆ.
- ಜನರು ಸೈಬರ್ ವಂಚನೆಯಾದರೆ 1930 ದೂರು ನೀಡಬೇಕು.
- ಚಾಮರಾಜನಗರ ಜಿಲ್ಲೆ 112 ದೂರಿಗೆ ಸ್ಪಂದಿಸುವಲ್ಲಿ ಜನಮಿಯಲ್ಲಿ ರಾಜ್ಯದಲ್ಲೇ ನಂ. 1 ಸ್ಥಾನದಲ್ಲಿದೆ.
- ಚಾಮರಾಜನಗರ ಬಿ. ರಾಚಯ್ಯ ಜೋಡಿ ರಸ್ತೆ ಹಾಗೂ ಡಿವಿಯೇಷನ್ ರಸ್ತೆಯಲ್ಲಿ ಫುಟ್‌ಪಾತ್ ಒತ್ತುವರಿ ತೆರವು. ಬಿ. ರಾಚಯ್ಯ ಜೋಡಿ ರಸ್ತೆಯ ಸರ್ಕಾರಿ ಆಸ್ಪತ್ರೆ ಎದುರು ವಾಹನ ನಿಲುಗಡೆಯಿಂದಾಗುವ ತೊಂದರೆ ತಡೆಯಲು ಕ್ರಮ.

ಬದನಗುಪ್ಪೆಯಲ್ಲಿ ವಿಜೃಂಭಣೆಯ ಮಾರಿಹಬ್ಬ



ಚಾಮರಾಜನಗರ, ಫೆ.11–ತಾಲೂಕಿನ ಬದನಗುಪ್ಪೆ ಗ್ರಾಮದಲ್ಲಿ ಮಾರಿಹಬ್ಬ ಎರಡು ದಿನಗಳ ಕಾಲ ವಿಜೃಂಭಣೆಯಿಂದ ನೆರವೇರಿತು.

ಮಾರಿಹಬ್ಬದ ಅಂಗವಾಗಿ ಗ್ರಾಮದ ಪ್ರಮುಖ ಬೀದಿ ಸೇರಿದಂತೆ ಮಾರಿಗುಡಿ ಆವರಣದವರೆಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಸೋಮವಾರ ರಾತ್ರಿ ಮಾರಿಗುಡಿ ಆವರಣದಲ್ಲಿ ಭಕ್ತಾದಿಗಳು ಮಡೆ ತಯಾರಿಸಿ ಮಾರಮ್ಮ ತಾಯಿಗೆ ನೈವೇದ್ಯ ಮಾಡಿ ವಿಶೇಷ ಪೂಜೆ ಸಲ್ಲಿಸಿದರು.

ಸತ್ತಿಗೆ, ಸುರಪಾಣಿಗಳ ಮೂಲಕ ಮಂಗಳವಾರ ಪ್ರಮುಖ ಬೀದಿಗಳಲ್ಲಿ ಮಹಿಳೆಯರು ತಂಪಿನೊಂದಿಗೆ ಕೇಲುತರುವ ಮೆರವಣಿಗೆಯಲ್ಲಿ ಪಾಲ್ಗೊಂಡು, ಮಂಗಳ ವಾದ್ಯಗಳೊಂದಿಗೆ ದೇವಾಲಯಕ್ಕೆ ಬಂದು ಪೂಜೆ ಸಲ್ಲಿಸಿದರು.

ಇದೇ ವೇಳೆ ವೀರಮಕ್ಕಳ ಕುಣಿತ ನೋಡುಗರ ಗಮನ ಸೆಳೆಯಿತು. ಮೆರವಣಿಗೆಯುದ್ದಕ್ಕೂ ಪಟಾಕಿ ಸಿಡಿಸುವ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು. ಮಾರಮ್ಮ ದೇವಿಗೆ ವಿವಿಧ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಬದನಗುಪ್ಪೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಗ್ರಾಮಸ್ಥರು, ಭಕ್ತಾದಿಗಳು ಮಾರಿ ಹಬ್ಬದಲ್ಲಿ ಪಾಲ್ಗೊಂಡಿದ್ದರು.

ಬೇಗೂರು ಬಳಿ ಬೈಕಿಗೆ ಕಾರು ಡಿಕ್ಕಿ: ಇಬ್ಬರು ಸಾವು

ಸಮಯಕ್ಕೆ ಬಾರದ ಆಂಬುಲೆನ್ಸ್, ರೊಚ್ಚಿಗೆದ್ದ ಜನರಿಂದ ಪ್ರತಿಭಟನೆ

ಬೇಗೂರು(ಗುಂಡ್ಲುಪೇಟೆ), ಫೆ.11– ಕಾರೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸಾವನ್ನಪ್ಪಿ, ಮತ್ತೊಬ್ಬ ತೀವ್ರವಾಗಿ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕು ಬೇಗೂರು ಗ್ರಾಮದ ಮಸೀದಿ ಮುಂಭಾಗ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದೆ.

ಮೃತರನ್ನು ಕಾರ್ತಿಕ್(19), ಮಹದೇವ ಪ್ರಸಾದ್(20) ಎಂದು ಗುರುತಿಸಲಾಗಿದ್ದು, ದಿವಾಕರ್(22) ಎಂಬಾತನ ಕಾಲು ಮುರಿದಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೈಸೂರಿನಿಂದ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದ ಕಾರು ಬೇಗೂರಿನ ಕಡೆಗೆ ಬರುತ್ತಿದ್ದ ಹೀರೋ ಹೋಂಡ ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಇದರಿಂದ ಕಾರ್ತಿಕ್(19) ಸ್ಥಳದಲ್ಲೇ ಸಾವೀಗಿಡಾಗಿದ್ದಾನೆ. ಮಹದೇವಪ್ರಸಾದ್(20) ಅವರನ್ನು ಆಟೋದಲ್ಲಿ ಕರೆದೊಯ್ದು ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ. ದಿವಾಕರ್(22) ಕಾಲು ಮುರಿದಿದ್ದು ಬೇಗೂರಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆಯ ನಂತರ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಯಿತು.



ಸಕಾಲದಲ್ಲಿ ಆಂಬ್ಯುಲೆನ್ಸ್ ಬರಲಿಲ್ಲವೆಂದು ಆಕ್ರೋಶಗೊಂಡ ಸಾರ್ವಜನಿಕರು ಪ್ರತಿಭಟನೆ ನಡೆಸುತ್ತಿರುವುದು. ಜಖಂಗೊಂಡಿರುವ ಬೈಕನ್ನು ಎಡ ಚಿತ್ರದಲ್ಲಿ ಕಾಣಬಹುದು.

ಸಮಯಕ್ಕೆ ಬಾರದ ಆಂಬುಲೆನ್ಸ್: ರಾತ್ರಿ ಈ ಅಪಘಾತ ಸಂಭವಿಸಿದ್ದು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಲು ತುರ್ತು ಚಿಕಿತ್ಸೆ ವಾಹನ ಆಂಬುಲೆನ್ಸ್‌ಗಾಗಿ ಫೋನ್ ಮಾಡಿದರೂ ಸಕಾಲಕ್ಕೆ ಬರಲಿಲ್ಲ. ಈ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ಗ್ರಾಮಸ್ಥರು ಆಸ್ಪತ್ರೆಯ ಆವರಣದಲ್ಲಿ ಶವವನ್ನು ಇಟ್ಟು ಪ್ರತಿಭಟಣೆ ನಡೆಸಲಾರಂಭಿಸಿದರು. ಸ್ಥಳಕ್ಕೆ ಆಗಮಿಸಿದ ತಾಲೂಕು ಆರೋಗ್ಯಾಧಿಕಾರಿ ಅಲೀಂಪಾಷಾ ಅವರನ್ನು ತರಾಟೆಗೆ ತೆಗೆದುಕೊಂಡರು. ಬೇಗೂರು ಸಮುದಾಯ ಆಸ್ಪತ್ರೆಯಲ್ಲಿ ಸೂಕ್ತ ವೈದ್ಯರಿಲ್ಲ. ಅಪಘಾತ ಸಂಭವಿಸಿದರೆ ತುರ್ತು ಚಿಕಿತ್ಸೆ ವಾಹನ ಲಭ್ಯವಿಲ್ಲ ಎಂದು ಪ್ರತಿಭಟಣೆ ನಡೆಸಿದರು.

ಕೊನೆಗೆ ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿ, ಶವಾಗಾರಕ್ಕೆ ಮೃತದೇಹಗಳನ್ನು ಸಾಗಿಸಿದರು.

ಬಂಡೀಪುರ ಶೃಂಗಸಭೆ ತಡೆಯಲು ಹೊರಟಿದ್ದ ರೈತರ ಬಂಧನ, ಬಿಡುಗಡೆ

ಗುಂಡ್ಲುಪೇಟೆ, ಫೆ11– ತಾಲೂಕಿನ ಬಂಡೀಪುರದಲ್ಲಿ ಶೃಂಗಸಭೆ ನಡೆಸುವ ಮೂಲಕ ಸಂರಕ್ಷಣೆ ಹೆಸರಿನಲ್ಲಿ ಪ್ರಾಕೃತಿಕ ಸಂಪನ್ಮೂಲಗಳನ್ನು ಖಾಸಗೀಕರಣ ಮಾಡಲು ಹೊರಟಿದೆ ಎಂದು ಆರೋಪಿಸಿ ಶೃಂಗಸಭೆಯನ್ನು ತಡೆಯಲು ಬಂಡೀಪುರಕ್ಕೆ ಹೊರಟಿದ್ದ ರೈತ ಮುಖಂಡರನ್ನು ಪೊಲೀಸರು ಪಟ್ಟಣದಲ್ಲಿ ಬಂಧಿಸಿ ನಂತರ ಬಿಡುಗಡೆ ಗೊಳಿಸಿದರು.



ಪಟ್ಟಣದ ಪ್ರವಾಸಿ ಮಂದಿರದಿಂದ ಬಂಡೀಪುರಕ್ಕೆ ಹೊರಟಿದ್ದ ಸಾಮೂಹಿಕ ನಾಯಕತ್ವದ ಮುಖಂಡ ಹೊನ್ನೂರು ಪ್ರಕಾಶ್ ಸೇರಿದಂತೆ ಹಲವರನ್ನು ಬೆಳಗ್ಗೆ ಬಂಧಿಸಿ ಸಂಜೆ ಬಿಡುಗಡೆಗೊಳಿಸಿದರು. ಬಿಗ್ ಕ್ಯಾಟ್ ಶೃಂಗಸಭೆ ಮೇಲ್ನೋಟಕ್ಕೆ ವನ್ಯಜೀವಿಗಳ ಸಂರಕ್ಷಣೆಗಾಗಿ ಎನಿಸಿದರೂ ಇದರ ಹಿಂದೆ ದೊಡ್ಡ ಹುನ್ನಾರವಿದೆ. ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ನಿದಿಸಂಗ್ರಹ, ಹಣದ ದುರ್ಬಳಕೆ, ಪಾರದರ್ಶಕತೆ ಇಲ್ಲದಿರುವುದು, ಸ್ಥಳೀಯರನ್ನು ಬಲವಂತವಾಗಿ ಒಕ್ಕಲೆಬ್ಬಿಸುವುದು, ಅಭಿವೃದ್ಧಿ ಹೆಸರಿನಲ್ಲಿ ಗಣಿಗಾರಿಕೆ, ಪ್ರವಾಸೋದ್ಯಮ ಹೆಸರಿನಲ್ಲಿ ವಾಣಿಜ್ಯಕರಣದ ಅನುಮಾನಗಳಿವೆ. ಆದ್ದರಿಂದ ಈ ಬಗ್ಗೆ ವಿದೇಶಿ ಪ್ರತಿನಿಧಿಗಳ ಜತೆಗೆ ಚರ್ಚೆ ನಡೆಸಬೇಕಾಗಿದೆ ಎಂದು ರೈತ ಮುಖಂಡರು ಅಗ್ರಹಿಸಿದರು.

ಆದರೆ ಇದನ್ನು ಒಪ್ಪದ ಪೊಲೀಸರು ಅಂತರಾಷ್ಟ್ರೀಯ ಮಟ್ಟದ ಸಮ್ಮೇಳನದಲ್ಲಿ ಪಾಲ್ಗೊಂಡ ವಿದೇಶಿ ಪ್ರತಿನಿಧಿಗಳ ಭೇಟಿ ಸಾಧ್ಯವಿಲ್ಲ ಎಂದು ಅನುಮತಿ ನಿರಾಕರಿಸಿದ ಪೊಲೀಸರು ರೈತರನ್ನು ತೆರಕಣಾಂಬಿ ಠಾಣೆಗೆ ಕರೆದೊಯ್ದು ಸಂಜೆಯ ನಂತರ ಬಿಡುಗಡೆಗೊಳಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ

ಅನುಭವವುಳ್ಳ ಪೆಟ್ರೋಲ್ ಬಂಕ್ ಕೆಲಸಗಾರರು, ವಿಷ್ಣು ಫ್ಯುಯಲ್ಸ್, ಬನ್ನಿಮಂಟಪ, ಹೈವೆ ಸರ್ಕಲ್ ಹತ್ತಿರ.

9900019212
7204563666

WANTED

English proof reader & also who can take Kannada dictation in writing. Excellent candidate preferred for part time in Kuvempunagar, Vivekananda circle, Mysore.

Call : 9686020233

ಛತ್ರ ಖಾಲಿ ಇದೆ

ಮೈಸೂರಿನ ದಟ್ಟಗಳ್ಳಿ ಬಡಾವಣೆಯ

ಸಾ.ರಾ. ಕನ್ವೆನ್ಷನ್ ಹಾಲ್ (ಛತ್ರ)

ಮೇ 17 ಮತ್ತು 18

ಭಾನುವಾರ, ಸೋಮವಾರ ಖಾಲಿ ಇದೆ. ಸಂಪರ್ಕಿಸಿ :

94493-22777 / 82965-44395

TV ಕೆಟ್ಟಿದೆಯೇ ?

LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತದೆ.

Teju Electronics, ಅಗ್ರಹಾರ

Mob: 9342114069

REQUIRED

SERVICE MANAGER - 1 No
Minimum 5 Years Experience in Automobile Field

ARJUN MOTORS
Authorised Yamaha Showroom
937/4, New Kantharaj Urs Road, Laxmipuram, Mysore - 570 004

Ph: 0821- 4000401 / 402

ಬೇಕಾಗಿದ್ದಾರೆ

ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.

Time : 11 AM - 9 PM

8762333676

SHUBHAYATRA HOLIDAYS



Mysore Branch

CHARDHAM YATRA for 13 Days by Air

Booking Started

Mob: 74833-73991

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ Diploma, Civil Engineer ಕೆಲಸಕ್ಕೆ ಬೇಕಾಗಿದ್ದಾರೆ. ಕನಿಷ್ಠ 3 ರಿಂದ 4 ವರ್ಷ ಅನುಭವವಿರುವ ಅಭ್ಯರ್ಥಿ ಬೇಕಾಗಿದ್ದಾರೆ.

9986651151
9902240723

ಅಭಿನವ ಗೃಹ ನಿರ್ಮಾಣ ಸಹಕಾರ ಸಂಘ ನಿ, ಮೈಸೂರು

ಮೈಸೂರಿನ ಸುತ್ತಮುತ್ತ 20 ಕಿ.ಮೀ ವ್ಯಾಪ್ತಿಯ ಒಳಗೆ ಅಂದರೆ ಬನ್ನೂರು ರಸ್ತೆ, ಟೀ ನರಸೀಪುರ ರಸ್ತೆ, ಹೆಚ್.ಡಿ.ಕೋಟೆ ರಸ್ತೆ ಹಾಗೂ ನಂಜನಗೂಡು ರಸ್ತೆಗಳಲ್ಲಿ, ಜಮೀನು ಹೊಂದಿರುವ ಡೆವಲಪರ್‌ರವರುಗಳು ಬಡಾವಣೆ ನಿರ್ಮಿಸಿ ನಮ್ಮ ಸಂಘದ ಸದಸ್ಯರುಗಳಿಗೆ ನಿವೇಶನಗಳನ್ನು ನೀಡಲು ಇಚ್ಛೆ ಉಳ್ಳವರು ಈ ಕೆಳಗಿನ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಿ

9449129606
9980612085

E M I ಸೈಟುಗಳು

→ No Down Payment
→ Free Registration

ಐಶ್ವರ್ಯ ಗಾರ್ಡನ್
ಮೈಸೂರು – ಹುಣಸೂರು ರಸ್ತೆ
ಇಲವಾಲದ ನಂತರ

8971444919

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

7406375196, 9880548596

ಆನ್‌ಲೈನ್‌ನಲ್ಲಿ ಇ–ಖಾತಾ ಅರ್ಜಿಸಲ್ಲಿಸಲು

ಮಹಿಳಾ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ

ಮೈಸೂರು ಪ್ರಾಪರ್ಟೀಸ್, ಹೂಟಗಳ್ಳಿ
(ಆಸ್ತಿಗಳ ಕಾಗದ ಪತ್ರಗಳ ಕಛೇರಿ)

9448958332

ಮನೆ ಮಾರಾಟಕ್ಕಿದೆ

ನಂಜನಗೂಡು ಟೌನ್, ಮೇದರ ಬ್ಲಾಕ್, ವಾಣಿವೈಶ್ವರ ಬೀದಿಯಲ್ಲಿರುವ, ಬಸ್ ಸ್ಟಾಂಡ್, ರೈಲ್ವೇಸ್ಟೇಷನ್‌ಗೆ ಹತ್ತಿರವಿರುವ ಪೂರ್ವಾಭಿಮುಖ ಬಾಗಿಲು ಹಾಗೂ ಉತ್ತರದಲ್ಲಿ ರಸ್ತೆಯಿರುವ 3 ಚದರವುಳ್ಳ, ಎಲ್ಲಾ ಸೌಕರ್ಯವುಳ್ಳ, ನವೀಕರಣಗೊಂಡಿರುವ, 1 BHK ಕಲ್ನಾರು ಶೀಟ್ ಮನೆ ರೂ.12 ಲಕ್ಷಕ್ಕೆ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಸಂಪರ್ಕಿಸಿ :

9148430818

ಬೇಕಾಗಿದ್ದಾರೆ

ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ

9110455297

ತಕ್ಷಣವೇ ಬೇಕಾಗಿದ್ದಾರೆ

ಹೆಲ್ಪರ್ ಕೆಲಸಕ್ಕೆ ಹುಡುಗರು, ಗಂಡಸರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 9 ರಿಂದ 7. ಸಂಬಳ 18,000. ಸಂಪರ್ಕಿಸಿ

8105249880
7795285485

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರ

ಹುಡುಗರು । ಹೆಂಗಸರು ಬೇಕಾಗಿದ್ದಾರೆ ಕಾಫಿ ಟೀ ಕೌಂಟರ್, ಪಾರ್ಸಲ್ ಕೌಂಟರ್, ದೋಸೆ ಭಟ್ಟರು, ದೋಸೆ Grinding ಮಾಡುವವರು, ಚೈನೀಸ್ ಮಾಸ್ಟರ್, ವಾಷಿಂಗ್ ಬೇಕಾಗಿದ್ದಾರೆ

9008253174
9606238740

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣ ವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ.

ಒಂದು ಗ್ರಾಂ ಚಿನ್ನದ ದರ: 14,800 (24 CT)

9108146123

ಛತ್ರ ಖಾಲಿ ಇದೆ

ಶ್ರೀ ವಿಠಲ ರುಕ್ಮಿಣಿ ಕನ್‌ವೆನ್ಷನ್ ಹಾಲ್, ಹುಣಸೂರು ರಸ್ತೆ, ಮೈಸೂರು, ಮಾರ್ಚ್ 14 ಮತ್ತು 15 –2026, ಸಂಪರ್ಕಿಸಿ

9880048310

ಪ್ರವಾಸ

6 ದಿನಗಳ ದುಬೈ ಪ್ರವಾಸ 23–3–26
5 ದಿನಗಳ ಕ್ರಬಿ ಫುಕೆಟ್ 24–3–26
5 ದಿನಗಳ ಬ್ಯಾಂಕಾಕ್ ಮತ್ತು ಪಟ್ಟಾಯ 22–4–26
6 ದಿನಗಳ ವಿಯೆಟ್ನಾಮ್ 11–4–26
7 ದಿನಗಳ ಸಿಂಗಪೂರ್ ಮತ್ತು ಮಲೇಷಿಯಾ 26–4–26

ಸುವರ್ಣ ಯಾತ್ರಾ

9480843945 / 9019462508

JOBS @ MYSORE

ಕ್ರಿಯಾಶೀಲ ಯುವಕ ಯುವತಿಯರು

Age: (18-24) Trainee Manager ಗಳಾಗಿ
10th, PUC, Any Degree, No FEE
Earn (10400/- ರಿಂದ 20800/-) PM
ನೇರ ಭೇಟಿಗಾಗಿ ಸಂಪರ್ಕಿಸಿ:

ಕಾವ್ಯ: 9342827788
ಸೂರ್ಯ: 6364219821

ತಕ್ಷಣ ಬೇಕಾಗಿದ್ದಾರೆ

ಸೆಕ್ಯುರಿಟಿ ಗಾರ್ಡ್ ಮತ್ತು ಫೀಲ್ಡ್ ಆಫೀಸರ್ ಹುದ್ದೆಗಳಿಗೆ ಗಂಡಸರು ಬೇಕಾಗಿದ್ದಾರೆ. ಕೆ.ಆರ್.ಎಸ್, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯುರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. (ಇ.ಎಸ್.ಐ ಮತ್ತು ಪಿ.ಎಫ್)ಸೌಲಭ್ಯ ಇದೆ. ಸ್ಕ್ವಾಡ್ರನ್ ಸೆಕ್ಯೂರಿಟಿ – ಮೆನ್ ಪವರ್ ಸರ್ವಿಸ್ #221, 6th ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್ ಮೈಸೂರು–570016

Contact- 9611741411/ 8197269895/ 8050900395

FOR RENT

Commercial Property
Dimension : 9x33 ft
G+2 Floors, East -Facing
Located next to Sangam Talkies, Contact

9343808704
9342100896
(Brokers Excuse)

SITE FOR SALE

40x60 N/E
Corner Beside Infosys
Price : 85 Lakhs
Contact

9741817450

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 9535361279

PEST CONTROL SERVICES

ಸೊಳ್ಳೆ, ಜಿರಳೆ, ಇಲಿ, ಜೇಡ, ಗೆದ್ದಲು ಹುಳು, ತಿಗಣೆಗಳನ್ನು ನಿಮ್ಮ ಮನೆ , ಆಫೀಸ್, ಅಪಾರ್ಟ್‌ಮೆಂಟ್, ಶಾಲೆ ಕಾಲೇಜುಗಳಿಂದ ತಡೆಗಟ್ಟಿ. ಸಂಪರ್ಕಿಸಿ:

9886899944

SAMRUDHI ENTERPRISES



#918,Sahukar Chennaiah Rd.T.K.Layout, Mysuru-570009

Mob: 9901852853

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

HOUSE FOR SALE/ ಮನೆ ಮಾರಾಟಕ್ಕಿದೆ

ಮನೆ ನಂ. 2/A ಸೆಂಟ್ ಥಾಮಸ್ ಸ್ಕೂಲ್ ಹತ್ತಿರ, Ambedkar Road ವಿಶ್ವೇಶ್ವರ ನಗರ 19ನೇ ಕ್ರಾಸ್, ಮೈಸೂರು. ಅಳತೆ : 12.5 x 50, I Floor, Ground Floor, ಸೇರಿ 13 ಚದರ, ಉತ್ತರ ದಿಕ್ಕು, North Face, ಸಂಪರ್ಕಿಸುವ ಸಮಯ: ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆ

9845393364

ತಕ್ಷಣ ಬೇಕಾಗಿದ್ದಾರೆ

ತಕ್ಷಣ ಮಹಿಳೆ /ಪುರುಷ ಸಹಾಯಕರು ಬೇಕಾಗಿದ್ದಾರೆ. ನೇರ ನೇಮಕಾತಿ. ಸಂದರ್ಶನದ ದಿನಾಂಕ – 31.01.2026, ಸಂದರ್ಶನದ ಸಮಯ : 10 AM, ಮಹಿಳೆಯರಿಗೆ 14500/– ಪುರುಷರಿಗೆ ವೇತನ 18000/– ಅಶೋಕ್ ಲೇಲ್ಯಾಂಡ್ /ದೋಸ್ತ್ ಡ್ರೈವರ್ ಬೇಕಾಗಿದ್ದಾರೆ. ಸ್ಥಳ– ಹೂಟಗಳ್ಳಿ. ಸಂಪರ್ಕ ಸಂಖ್ಯೆ

7795452233

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಗಾರ್ಡ್ಸ್ – ಬೆಳಗ್ಗೆ ಮತ್ತು ರಾತ್ರಿ ಪಾಳಯಕ್ಕೆ (ಹಿನಕಲ್, ಎಲೆ ತೋಟ, ವಿದ್ಯಾರಣ್ಯಪುರಂ, ಹೆಬ್ಬಾಳ್)
2) ಹೌಸ್‌ಕೀಪಿಂಗ್– ಹುಡುಗರು ಸಂಜೆ ಕೆಲಸಕ್ಕೆ, (ಹಿನಕಲ್, ವಿಜಯನಗರ, ಎಲೆ ತೋಟ)

7795162227
9731663856

Space available

Office space with 1 office room + 3 additional rooms available, suitable for: * Meetings * Tuitions * Training Programmes. Available time: 6 am to 5 pm. Location: Hootagalli. Contact:

Mob: 9900617600

NEWLY BUILT HOUSE FOR SALE

In Vijayanagar 3rd Stage Ground floor (parking). Duplex (1st floor & 2nd Floor). Lift / Borewell / solar facility.

8050234638, 9591319191

WANTED

Sales Executives
B.E. Civil
MBA Marketing,
any Degree.

Mob: 9513233305

ಬಾಡಿಗೆಗೆ

ಬ್ರಾಯ್ಲರ್ ಕೋಳಿ ಶೆಡ್ ಬಾಡಿಗೆಗೆ ದೊರೆಯುತ್ತದೆ. ಕಳಲವಾಡಿ ಗ್ರಾಮ. ಸಂಪರ್ಕಿಸಿ:

Mob: 9880363856

JOB OPENING

for Women employees only (30 vacancies left)
Age group 30 to 45 years.
Education: Any Degree / Diploma 3 years.
Salary: 12,000 to 15,000.
ESI and PF. Contact:

Mob: 8050292837

ಬೇಕಾಗಿದ್ದಾರೆ

ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
* ಸ್ವಚ್ಛಗೊಳಿಸುವವರು
ಬೆಳಿಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10

9986758555

WANTED

Diploma (Mech), ITI
Take home 20,000,
Free room, ESI, PF available, After 1 year appoint with company

9916 739 611
8197193138

ಬೇಕಾಗಿದ್ದಾರೆ

ತೋಟದ ಕೆಲಸಕ್ಕೆ ಫ್ಯಾಮಿಲಿ ಮತ್ತು ಕೇರ್‌ಟೇಕರ್, ಹೌಸ್ ಕೀಪಿಂಗ್ (ಹೆಂಗಸರು), ಸೆಕ್ಯೂರಿಟಿ ಗಾರ್ಡ್‌ಗಳು ಮೈಸೂರು ಮತ್ತು ಮಂಡ್ಯದಲ್ಲಿ ಕಾರ್ಯ ನಿರ್ವಹಿಸಲು ಮತ್ತು ಮಂಡ್ಯದಲ್ಲಿ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಫೀಲ್ಡ್ ಆಫೀಸರ್ ಕೂಡಲೇ ಬೇಕಾಗಿದ್ದಾರೆ.

96067 01359

Solar Water Heaters



SUNZONE SOLAR SYSTEM
VM Double Road, Kuvempunagar, Mysuru

9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7975101020

WANTED

1. OPTOMETRIST,
2. RECEPTIONIST,
3. OT STAFF,
CONTACT NUMBER

7338369364
0821-2543244

#22A, SRI GURU KRUPAM, 1ST FLOOR, ABOVE ANANTHAM CAFE, NIVEDITHA NAGAR, MYSORE-570022,

HIRING - BOUTIQUE

Executive, We are looking for a female candidate. Requirements:
- Knowledge of fashion and styling
- Ability to attend and assist customers professionally
- Boutique management skills
- Good communication and interpersonal skills.

Time: Full-time, Location: Saraswathipuram, 1st Main Road, Mysore

7259969020
9739211543

Newly built House for Sale

MUDA LAYOUT, LALITHADRI NAGAR- NF -30X40 GF 1 BHK & 2 Car Parking, FF-2 BHK

9663813852

DOCUMENT LOST

I V.L. Subash Chandra, R/a No 24, 4th Main, 9th 'C' Cross, Bairaweshwara Nagar, Nagarabhavi Road, Bangalore-560072 hove lost Conditional Sale Deed No. MYN-1-09766-2020-21 & Allotment Letter No. 518, EWS at Mysore on 15/1/2026, Finder Please Contact

9343133261

SITE FOR SALE

40X60 W/F NAGAVALA 42 L/NGO, 40X60 S/F, MANUGANAHALLI 32 LAKHS, 30X60 N/F MANUGANAHALLI 45 LAKHS, SHREE NAGAR, HUNSUR ROAD (AGENT WELCOME) CONTACT

VIJAY PROPERTIES

9986004007
8722337733

ಕೆಲಸಕ್ಕೆ ಬೇಕಾಗಿದ್ದಾರೆ

ರೆಡಿಮೇಡ್ ಬಟ್ಟೆ ಅಂಗಡಿಗೆ ಕೆಲಸ ಕಲಿತಿರುವ ಹುಡುಗರು ಬೇಕಾಗಿದ್ದಾರೆ. ತಿಂಗಳಿಗೆ ಸಂಬಳ 16,000/– ರೂ. # ಕಬಾಡಿ ಟೆಕ್ಸ್‌ಟೈಲ್ಸ್, ಮಂಡಿ ಮೊಹಲ್ಲಾ, ಮೈಸೂರು.

8105577324

ಸೈಟು ಮಾರಾಟಕ್ಕಿದೆ

20x30 N/F
ವಿನಾಯಕ ಬಡಾವಣೆ, ಬೆಳವಾಡಿ

9731937223

ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ 'Helper' ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 45 ವರ್ಷದೊಳಗಿರಬೇಕು. ESI, PF ಮತ್ತು Canteen ಸೌಲಭ್ಯವಿರುತ್ತದೆ.

9036391898
8310990980

ಬೇಕಾಗಿದ್ದಾರೆ

ಕುವೆಂಪುನಗರದಲ್ಲಿರುವ ಪಾರ್ಸೆಲ್ ಹೋಟೆಲ್‌ಗೆ ಪಾರ್ಟ್ ಟೈಂ ಕೆಲಸದವರು. ಸಮಯ : ಬೆಳಗ್ಗೆ 9.30 ರಿಂದ 3 ಗಂಟೆ.– 7000, ಸಾಯಂಕಾಲ : 5 ರಿಂದ 9.30 ರವರೆಗೆ– 7000/– ಫುಲ್‌ಟೈಂ ಕೆಲಸಕ್ಕೆ 14000/– ಸಂಬಳದೊಂದಿಗೆ ಊಟ, ವಸತಿ ಉಚಿತ.

Ph: 7204404170

ಬೇಕಾಗಿದ್ದಾರೆ

ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ

6364748485

ತಕ್ಷಣ ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ಸ್ (SSLC Pass) 12 ಘಂಟೆ ಪಾಳಿ 16 ಸಾವಿರ (16,000 Rs) ESI & PF ಸೌಲಭ್ಯ, ಮೇಟಗಳ್ಳಿ ಸುತ್ತಮುತ್ತ ಪ್ರವೇಶ, ಸಂಪರ್ಕಿಸಿ

9035367083
6361548626

3+3=6 ಗುಂಟೆ ಜಮೀನು ಮಾರಾಟಕ್ಕಿದೆ

ಮಾರುತಿ ಬಡಾವಣೆ, (ಜಯಲಕ್ಷ್ಮಿ ಚಿತ್ರಮಂದಿರ ಎದುರುಗಡೆ,) 3ನೇ ಕ್ರಾಸ್, ಮಂಡ್ಯ, ಸಂಪರ್ಕಿಸಿ

6360058500
9845907134

ತಕ್ಷಣ ಬೇಕಾಗಿದ್ದಾರೆ

ಹೂಟಗಳ್ಳಿ ಹೆಬ್ಬಾಳ್ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : ಸೂಪರ್‌ವೈಸರ್ 21,000+W/o (8 hrs) ಗಾರ್ಡ್‌ಗಳು 20,000+W/o (8 hrs) ವಯೋಮಿತಿ : 45 ವರ್ಷದ ಒಳಗೆ ಊಟ, ತಿಂಡಿ ಸೌಲಭ್ಯವಿರುತ್ತದೆ.

9880727819
9620667819

ತಕ್ಷಣ ಬೇಕಾಗಿದ್ದಾರೆ

TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ : 18,000/- (26 ದಿನಗಳು) ವಯೋಮಿತಿ : 45 ವರ್ಷದ ಒಳಗೆ ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.

9620777819

FOR SALE

Crnr Property @ Shardha Public school, Nr Dattgalli
30x50, 40x50 Sites @ 50 Ft Road
Sites@ Brahmins Lyt, Nr RT Ngr
30x40 Site @ Jnana Bharathi Lyt, JP Ngr
20x30, 30x40 Sites @ Bogadi
Commercial Properties @ Srirampura
2 & 3 BHK APARTMENTS @ RK NGR

PRAKRUTHI PROPERTIES
95386 90359, 90359 90359

ಬೇಕಾಗಿದೆ

ನಂಜನಗೂಡು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ 1 BHK ಮನೆ ಭೋಗ್ಯಕ್ಕೆ ಬೇಕಾಗಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ, ದಯವಿಟ್ಟು ಮನೆಮಾಲೀಕರು ಖುದ್ದಾಗಿ ಸಂಪರ್ಕಿಸಿ:

ಕುಮಾರ್ ನಾಯಕ್
9980977665

WANTED

DRIVERS WITH DELIVERY

8310381391
7892156457

ಬೇಕಾಗಿದ್ದಾರೆ

ಕಂಪ್ಯೂಟರ್ ಟೈಪಿಂಗ್ ಅನುಭವ ಇರುವ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ

ಅನಿಲ್–7026996123
ಶೇಕರ್–9945911118

ಆಲ್ಟ್ರೇಷನ್ ಕೆಲಸ

ಹಳೇ ಮನೆಯನ್ನು ವಾಸ್ತು ಪ್ರಕಾರ ಆಲ್ಟ್ರೇಷನ್ ಮಾಡಿಕೊಡಲಾಗುತ್ತದೆ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.

Mob: 6360884930

ಕಾರ್ ಮಾರಾಟಕ್ಕಿದೆ

1) ಬೆಂಜ್ (2009 ಮಾಡೆಲ್, 220 ಸಿಡಿ) ಸುಸ್ಥಿತಿಯಲ್ಲಿದೆ, ಮೈಸೂರು ನೋಂದಣಿ.
2) ಟಾಟಾ ಇಂಡಿಗೋ ಇ.ಸಿ.ಎಸ್. (2025 ಮಾಡೆಲ್). ಹಳದಿ ಬೋರ್ಡ್ – ಸಿಂಗಲ್ ಓನರ್. ಸಂಪರ್ಕಿಸಿ:

Mob: 9972837203

Site for Sale

40x60 E/F MUDA Auction site @ Vijayanagar 4th Stage, 1st Phase. 30x40 House for sale @ Vijayanagar 2nd Stage, 100x55 E/F @ Vijayanagar 4th Stage, 2nd Phase, 80 ft. Road.

9986773639, 9980039509

ಮನೆ ಮಾರಾಟಕ್ಕಿದೆ / ಬಾಡಿಗೆಗೆ

20x30, 3 BHK Duplex, ಲಲಿತಾದ್ರಿನಗರ ರಿಂಗ್ ರಸ್ತೆ ಹತ್ತಿರ.
30x40 G/F 1st & 2nd Floor duplex CFTRI Layout, Bogadi Road.
40x60, 2 BHK + ಕಾರ್ ಗ್ಯಾರೇಜ್‌ವುಳ್ಳ ಇಂಡಿಪೆಂಡೆಂಟ್ ಮನೆ ರಾಮಕೃಷ್ಣನಗರ 'ಹೆಚ್' ಬ್ಲಾಕ್‌ನಲ್ಲಿದೆ.
Wanted: MUDA site purchase.

9448938989, 7892035789

SITE FOR SALE

30x40 East facing, Vijayanagar 4th Stage, 2nd Phase, near Raju Corner.

9342188670, 8867213185

ಮನೆ ಮಾರಾಟಕ್ಕಿದೆ

20x30 ರಲ್ಲಿ 2 ಬೆಡ್ ರೂಂವುಳ್ಳ ಮುಡಾ ಅಲಾಟ್‌ಮೆಂಟ್ ಮನೆ ಪೇಟೆ ಬೀದಿ ಹತ್ತಿರ, ಕೆರೆ ಅಂಗಳ ಮಂಡ್ಯ ಸಿಟಿ ಬೆಲೆ – 21 ಲಕ್ಷ

8618083698

Go Mysore Holidays

ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್

20th February 2026(20/02/2026)

ಹೊರಡುವುದು, ಎರಡು ದಿನದ ಪ್ರವಾಸ, ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು

9448738617
9036154301

ಸೈಟು ಮಾರಾಟಕ್ಕಿದೆ

40x60 ಪೂರ್ವ ದಿಕ್ಕು ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ..
30x50 ಪೂರ್ವದಿಕ್ಕು ರಾಜರಾಜೇಶ್ವರಿನಗರ. ಸಂಪರ್ಕಿಸಿ..

8050216683

ಬೇಕಾಗಿದ್ದಾರೆ

ರಾತ್ರಿ ಪಾಳಿಗೆ ಸೆಕ್ಯೂರಿಟಿ ಗಾರ್ಡುಗಳು
ಸ್ಥಳ : 1) ಹೋಟೆಲ್ ಮೌರ್ಯ (ದೊಡ್ಡ ಗಡಿಯಾರ ಹತ್ತಿರ)
2) ಪಂಪ್ ಹೌಸ್ (K.R.S ರೋಡ್)
ಉಚಿತ ಊಟ/ ESI/PF

9686422400
9242406261

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:

ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10

ಬೇಕಾಗಿದ್ದಾರೆ

ಮೈಸೂರು ಜಿಲ್ಲೆಯಲ್ಲಿ ನೂತನವಾಗಿ ಪ್ರಾರಂಭವಾಗಿರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, CASHIER, BILLING, RECEPTIONIST, HR, ADMIN, ACCOUNTANT ETC, ಕೆಲಸಕ್ಕೆ, ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. EDUCATION: SSLC, PUC, ITI, DIPLOMA, DEGREE. SALARY (18k -38k),

Contact: 6366718368
9632659609, 7899627704

ಸದ್ಗುರು ಮ್ಯಾರೇಜಸ್

ವೀರಶೈವ, ಲಿಂಗಾಯತ, ಒಕ್ಕಲಿಗ, ಬ್ರಾಹ್ಮಣ, ಕುರುಬ, ನಾಯಕ, ಆದಿಕರ್ನಾಟಕ, ಕ್ರಿಶ್ಚಿಯನ್, ತಮಿಳು, ವಿಶ್ವಕರ್ಮ ಇನ್ನೂ ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ.

9448229184
7899625268

ಮನೆ ಸಾಲ

ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/A, ಸರಸ್ವತಿಪುರಂ, ಮೈಸೂರು.

ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದರು 11B, 9 & 11A, ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿ ಕೊಡಲಾಗುವುದು.

8088647887

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. (Only for male candidates) ಉತ್ತಮ ವೇತನ, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕ ನಗರ, ಮತ್ತು ಹಿನಕಲ್

7829393555
9886200104

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವಿಸ್‌ಗಾಗಿ ಸಂಪರ್ಕಿಸಿ

9964733988

ಬೇಕಾಗಿದ್ದಾರೆ

ಕಂಪ್ಯೂಟರ್ ಆಫೀಸ್ ನಲ್ಲಿ ಫ್ರಂಟ್ ಆಫೀಸ್ ಕೆಲಸಕ್ಕೆ, PUC(ಕಾಮರ್ಸ್) ಅಥವಾ B.Com ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಅಕೌಂಟ್ ಮತ್ತು ಕಂಪ್ಯೂಟರ್‌ನಲ್ಲಿ ಅನುಭವವಿರುವವರಿಗೆ ಆದ್ಯತೆ. ಸಂಪರ್ಕಿಸಿ:

8073393505

SHAHI EXPORTS PVT. LTD. ತಕ್ಷಣ ಬೇಕಾಗಿದ್ದಾರೆ

ಕಂಪನಿಗೆ ನೇರ ನೇಮಕಾತಿ 7th, SSLC, PUC / Degree ಪಾಸ್ / ಫೇಲ್ ಆಗಿರುವ, ಕೆಲಸ ಮಾಡಲು ಆಸಕ್ತಿ ಇರುವ ಮಹಿಳೆಯರಿಗೆ / ಪುರುಷರಿಗೆ ಕೆಲಸದ ಅವಕಾಶವಿದೆ. ಆಕರ್ಷಕ ಸಂಬಳ 13,000 ರಿಂದ 18,000 ಸಾವಿರವರಗೆ. ಕೂಡಲೇ ಸಂಪರ್ಕಿಸಿ:

8105731639

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ

ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಹುಣಸೂರಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ

ಹುಣಸೂರು, ಫೆ.11– ರಾಗಿ ಖರೀದಿ ಕೇಂದ್ರದಲ್ಲಿ ರೈತರಿಗೆ ಅನಾನುಕೂಲವಾಗುವ ಯಾವುದೇ ಕ್ರಮ ಅನುಸರಿಸಬಾರದು ಎಂದು ಶಾಸಕ ಜಿ.ಡಿ. ಹರೀಶ್‌ಗೌಡ ಅಧಿಕಾರಿಗಳಿಗೆ ತಾಕೀತು ಮಾಡಿದರು.

ನಗರದ ಎಪಿಎಂಸಿ ಆವರಣದಲ್ಲಿ ಪ್ರಸಕ್ತ ಸಾಲಿನ ರಾಗಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಈ ಬಾರಿ 60 ಲಕ್ಷ ಕ್ವಿಂಟಾಲ್ ಗುಣಮಟ್ಟದ ರಾಗಿ ಖರೀದಿಸಲು ನಿರ್ಧರಿಸಿದೆ ಎಂದ ಅವರು ಕಳೆದ ಸಾಲಿನಲ್ಲಿ ಒಂದು ಕ್ವಿಂಟಾಲ್ ರಾಗಿಯಲ್ಲಿ 4 ಕೆಜಿಯನ್ನು ಕಡಿತಗೊಳಿಸಿ ಹಣ ಪಾವತಿಸಲಾಗಿದೆ ಎಂದು ರೈತರು ಆರೋಪಿಸುತ್ತಿದ್ದಾರೆ. ಹೀಗಾಗಿ 640 ಗ್ರಾಂಗಿಂತ ಹೆಚ್ಚು ರಾಗಿ ಕಡಿತಗೊಳಿಸಬಾರದು ಎಂದರು.



ರಾಗಿ ಖರೀದಿ ಕೇಂದ್ರವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ನಿಗದಿಪಡಿಸಿದ ದಿನದಂದು ರಾಗಿ ಖರೀದಿ ಕೇಂದ್ರದಲ್ಲಿ ನೋಂದಾಯಿತ ರೈತರಿಂದ ರಾಗಿ ಖರೀದಿಸಬೇಕು. ಅಲ್ಲದೇ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇಲೆ ಕಾರ್ಮಿಕರ ನೇಮಕ ಕ್ರಮಬದ್ಧವಾಗಿರಬೇಕು. ರೈತರಿಂದ ಹಣಕ್ಕಾಗಿ ಒತ್ತಾಯಿಸಿದ ದೂರುಗಳು ಕೇಳಿ ಬಂದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಖರೀದಿ ಕೇಂದ್ರದ ಜಿಲ್ಲಾ ವ್ಯವಸ್ಥಾಪಕ ಬಿ.ಎಸ್.ಕಿರಣ್ ಮಾತನಾಡಿ, ಎಫ್‌ಎಕ್ಯೂ ಗುಣಮಟ್ಟದ ರಾಗಿಯನ್ನು ಖರೀದಿಸಲು ಸರ್ಕಾರ ನಿರ್ಧರಿಸಿದೆ. ಶೇ.12ರಷ್ಟು ತೇವಾಂಶ ಗರಿಷ್ಠ ಮಿತಿಯಾಗಿದೆ. ಅನ್ಯ ಪದಾರ್ಥಗಳು ಶೇ.1 ರಷ್ಟು, ಇತರೆ ಧಾನ್ಯಗಳು ಶೇ.1 ಮತ್ತು ಸ್ವಲ್ಪ ಹಾನಿಗೊಳಗಾದ ಧಾನ್ಯಗಳು ಶೇ.2 ರಷ್ಟು ಖರೀದಿಸಲು ಅವಕಾಶವಿದೆ. ಹೀಗಾಗಿ ರೈತರು ಮಧ್ಯವರ್ತಿಗಳ ಮೂಲಕ ಬೆಳೆಯನ್ನು ಮಾರಾಟ ಮಾಡಬಾರದು ಎಂದು ಮನವಿ ಮಾಡಿದರು.

ಖರೀದಿ ಕೇಂದ್ರದ ಅಧಿಕಾರಿ ಮೈಕಲ್ ಫರ್ನಾಂಡೀಸ್ ಮಾತನಾಡಿ, ಸರ್ಕಾರ ಪ್ರತಿ ಕ್ವಿಂಟಾಲ್ ರಾಗಿಗೆ 4886 ರೂ. ದರ ನಿಗದಿಗೊಳಿಸಿದೆ. ಹುಣಸೂರು ಎಪಿಎಂಸಿಯಲ್ಲಿ 5021, ರತ್ನಪುರಿ ಕೇಂದ್ರದಲ್ಲಿ 251 ಸೇರಿದಂತೆ ಒಟ್ಟು 5272 ರೈತರು ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ರೈತರಿಂದ 1.31 ಲಕ್ಷ ಕ್ವಿಂಟಾಲ್ ರಾಗಿ ಖರೀದಿಸಲಾಗುವುದು. ಅಲ್ಲದೇ ಹೆಚ್ಚಾಗಿ ಕುಪ್ಪಸ, ಕಲ್ಲು–ಮಣ್ಣು ಇದ್ದರೆ ರಾಗಿಯನ್ನು ತಿರಸ್ಕರಿಸಲಾಗುವುದು ಎಂದರು.

ಈ ವೇಳೆ ರೈತ ಮುಖಂಡರಾದ ಚಂದ್ರೇಗೌಡ, ವಿಷಕಂಠಪ್ಪ, ಬಸವರಾಜು, ಮುಖಂಡರಾದ ಬಸವರಾಜು, ಟಿಎಪಿಸಿಎಂಎಸ್ ನಿರ್ದೇಶಕ ಗೋವಿಂದೇಗೌಡ, ತಾಲೂಕು ಆಹಾರ ಮತ್ತು ನಾಗರಿಕ ಸರಬರಾಜು ಶಿರಸ್ತೇದಾರ್ ಲಕ್ಷ್ಮಿ, ಎಪಿಎಂಸಿ ಕಾರ್ಯದರ್ಶಿ ನಾಗೇಶ್ ಮತ್ತು ರೈತ ಮುಖಂಡರು ಹಾಜರಿದ್ದರು.

ವಿವಿಧ ಸಮಾಜ ಸೇವಾ ಕಾರ್ಯಗಳೊಂದಿಗೆ

ಇಂದು ಶಾಸಕ ಅನಿಲ್ ಚಿಕ್ಕಮಾದು ಹುಟ್ಟುಹಬ್ಬ ಆಚರಣೆ

ಹೆಚ್.ಡಿ.ಕೋಟೆ, ಫೆ.11– ಪಟ್ಟಣದಲ್ಲಿ ಫೆ.12 ರಂದು ವಿವಿಧ ಸಮಾಜ ಸೇವಾ ಕಾರ್ಯಗಳೊಂದಿಗೆ ಶಾಸಕ ಅನಿಲ್ ಚಿಕ್ಕಮಾದು ಅವರ 37ನೇ ವರ್ಷದ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅಭಿಮಾನಿಗಳು ತಿಳಿಸಿದ್ದಾರೆ.



ಹುಟ್ಟುಹಬ್ಬದ ಅಂಗವಾಗಿ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಪತ್ನಿ ಸೌಮ್ಯ ಮತ್ತು ಕುಟುಂಬದವರು ಶಿರಡಿಗೆ ತೆರಳಿದ್ದು, ಸಾಯಿಬಾಬಾ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಹೀಗಾಗಿ ಅವರ ಅನುಪಸ್ಥಿತಿಯಲ್ಲಿ ಪಟ್ಟಣದಲ್ಲಿ ಅವರ ಹುಟ್ಟುಹಬ್ಬವನ್ನು ಆಚರಿಸಲಾಗುವುದು ಎಂದರು.

ಹುಟ್ಟುಹಬ್ಬದ ಅಂಗವಾಗಿ ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಹುಟ್ಟುಹಬ್ಬದ ಶುಭ ಕೋರಿ ಶಾಸಕರ ಬ್ಯಾನರ್ ಹಾಕಲಾಗಿದೆ. ಅಲ್ಲದೇ ಇದೇ ಪ್ರಥಮ ಬಾರಿಗೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಜೂನಿಯರ್ ಕಾಲೇಜು, ಮಿನಿ ವಿಧಾನಸೌಧದ ಎದುರು ಶಾಸಕರ ಬೃಹತ್ ಕಟೌಟ್ ಅಳವಡಿಸಲಾಗಿದೆ ಎಂದರು.

ಬೆಳಗ್ಗೆ 9 ಗಂಟೆಗೆ ಪಟ್ಟಣದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಶಾಸಕರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿದೆ. ಬಳಿಕ ಕೋಟೆ ಮತ್ತು ಸರಗೂರು ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಗುವುದು. ಅಲ್ಲದೇ ಹಲವು ಸಮಾಜ ಸೇವಾ ಕಾರ್ಯಗಳೊಂದಿಗೆ ಪಟ್ಟಣದಲ್ಲಿ ಅಳವಡಿಸಿರುವ ಶಾಸಕರ ಬೃಹತ್ ಕಟೌಟ್ ಎದುರು ನೂರಾರು ಕಾರ್ಯಕರ್ತರು ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಗುವುದು ಎಂದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷಾ, ಮಾದಪ್ಪ, ಮುಖಂಡರಾದ ಪ್ರದೀಪ, ಹಿರೇಹಳ್ಳಿ ಸೋಮೇಶ್, ಈರೇಗೌಡ, ಪರಶಿವಮೂರ್ತಿ, ಶಿವಮಲ್ಲಪ್ಪ, ಜಿನ್ನಹಳ್ಳಿ ರಾಜನಾಯಕ, ನರಸೀಪುರ ರವಿ, ಶಂಭುಲಿಂಗ ನಾಯಕ, ಬಿ.ಸಿ.ಬಸಪ್ಪ, ಮೊಳೆಯೂರು ಆನಂದ, ಹೊಂಡಾ ನಯಾಜ್, ಕ್ಯಾತನಹಳ್ಳಿ ನಾಗರಾಜು, ಶಿವಪ್ಪ ಕೋಟೆ, ಬೈಪಾಸ್ ಮಂಜು, ಗಣೇಶಾಚಾರ್, ಕುಲುಮೆ ರಾಜು, ಬಿ.ವಿ.ಬಸವರಾಜ್, ಹೀರೋ ಜಯರಾಮ್, ಭಾಸ್ಕರ, ವಡ್ಡರಗುಡಿ ರವಿ, ನರಸಿಂಹಮೂರ್ತಿ, ಮಧು ಕುಮಾರ್, ಅನಿಲ್, ಸುಬ್ರಹ್ಮಣ್ಯ, ಕಂದೇಗಾಲ ಶಿವರಾಜ್, ಕೆಂಡಗಣ್ಣೇಗೌಡ, ತಿಮ್ಮರಾಜ್, ನಾಗರಾಜು, ಪುಟ್ಟಸ್ವಾಮಿ, ಬಾಲಯ್ಯ, ಗುರುಸ್ವಾಮಿ, ಸ್ಟುಡಿಯೋ ಪ್ರಕಾಶ್, ಮುರಳಿ, ನವೀನ್ ದಾಸ್, ಬಿರ್ವಾಳ್ ಚಿಕ್ಕಣ್ಣ, ಸೌಮ್ಯ ಮಂಜುನಾಥ್, ಅಶೋಕ, ಅಜರ್, ಶಶಿ, ಪಾಟೀಲ್, ಸಿದ್ದರಾಮ, ಕಬಿನಿ ಹೇಮಂತ, ವನಸಿರಿ ಉಮೇಶ, ಶಂಕರ, ಮಲ್ಲೇಶ್, ವೆಂಕಿ ಇತರರಿದ್ದರು.

> “ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಿಕೊಳ್ಳಲು ನನಗೆ ಇಷ್ಟ ಇಲ್ಲ. ಬಡವರಿಗೆ, ನೊಂದವರಿಗೆ, ಅಸಹಾಯಕರಿಗೆ ನೆರವು ನೀಡುವ ಮೂಲಕ ಹುಟ್ಟುಹಬ್ಬವನ್ನು ಕಾರ್ಯಕರ್ತರು, ಮುಖಂಡರು, ಹಿತೈಷಿಗಳು, ಅಭಿಮಾನಿಗಳು ನನ್ನ ಅನುಪಸ್ಥಿತಿಯಲ್ಲಿ ಅರ್ಥಪೂರ್ಣವಾಗಿ ಆಚರಿಸುತ್ತಿದ್ದಾರೆ. ಇದಕ್ಕಾಗಿ ನಾನು, ನನ್ನ ಕುಟುಂಬ ನಿಮ್ಮೆಲ್ಲರಿಗೂ ಆಭಾರಿಯಾಗಿರುತ್ತೇವೆ.
> – ಅನಿಲ್ ಚಿಕ್ಕಮಾದು, ಶಾಸಕ.

ಪ್ರತಿಯೊಬ್ಬರು ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಿ

ಆಲಗೂಡು ಪಿಎಸಿಎಸ್ ಅಧ್ಯಕ್ಷ ಹೆಳವರಹುಂಡಿ ಪಿ.ನಟರಾಜು ಸಲಹೆ

ತಿ.ನರಸೀಪುರ, ಫೆ.11– ಕಣ್ಣು ಮಾನವನ ದೇಹದ ಅತೀ ಸೂಕ್ಷ್ಮವಾದ ಅಂಗ. ಹೀಗಾಗಿ ಪ್ರತಿಯೊಬ್ಬರೂ ಜಾಗ್ರತೆ ವಹಿಸುವ ಮೂಲಕ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಆಲಗೂಡು ಪಿಎಸಿಎಸ್ ಅಧ್ಯಕ್ಷ ಹೆಳವರಹುಂಡಿ ಪಿ.ನಟರಾಜು ಸಲಹೆ ನೀಡಿದರು.

ತಾಲೂಕಿನ ಹೆಳವರಹುಂಡಿ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸಹಕಾರ ಸಂಘ ಹಾಗೂ ಬನ್ನೂರಿನ ಭೈರವೇಶ್ವರ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.



ಉಚಿತ ಕಣ್ಣಿನ ತಪಾಸಣಾ ಶಿಬಿರಕ್ಕೆ ಪಿಎಸಿಎಸ್ ಅಧ್ಯಕ್ಷ ಪಿ.ನಟರಾಜು ಚಾಲನೆ ನೀಡಿದರು.

ಕಣ್ಣಿನ ದೃಷ್ಟಿ ಎಲ್ಲರಿಗೂ ಅಮೂಲ್ಯವಾದದು. ಅದರಲ್ಲೂ ಹೆಚ್ಚಾಗಿ ವಯೋವೃದ್ಧರೇ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ಪೊರೆಗೆ ತುತ್ತಾಗುತ್ತಿದ್ದಾರೆ. ಹೀಗಾಗಿ ಸಾರ್ವಜನಿಕರ ಅನುಕೂಲಕ್ಕಾಗಿ ಈ ಉಚಿತ ಕಣ್ಣಿನ ಶಿಬಿರ ಆಯೋಜಿಸಲಾಗಿದೆ. ಯಶಸ್ವಿನಿ ಕಾರ್ಡ್ ಹೊಂದಿರುವ ಹಾಗೂ ಹೊಂದಿರದ ಬಡಜನರು ಪಾಲ್ಗೊಂಡು ಚಿಕಿತ್ಸೆ ಪಡೆಯುವ ಮೂಲಕ ಈ ಶಿಬಿರದ ಸದುಪಯೋಗ ಪಡೆಯಬಹುದು ಎಂದು ತಿಳಿಸಿದರು.

ನೇತ್ರಾಧಿಕಾರಿ ಚಂದನ ಮಾತನಾಡಿ, ಕಣ್ಣಿನ ಸಮಸ್ಯೆ ಇರುವವರಿಗೆ ಯಾವುದೇ ನೋವುಂಟು ಮಾಡದೇ ಅನಸ್ತೇಶಿಯ ನೀಡದೇ ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಕಣ್ಣಿನ ಲೇಸರ್ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಜೊತೆಗೆ ಇಂಜೆಕ್ಷನ್ ಇಲ್ಲದೇ ಹೊಲಿಗೆ ರಹಿತ ಲೆನ್ಸ್ ಅಳವಡಿಸುವ ಸೌಲಭ್ಯ ನಮ್ಮ ಆಸ್ಪತ್ರೆಯಲ್ಲಿದೆ. ರೈತರಿಗೆ ಅನುಕೂಲವಾಗುವ ಉದ್ದೇಶದಿಂದ ಈ ಶಿಬಿರ ಆಯೋಜಿಸಲಾಗಿದೆ. ಯಶಸ್ವಿನಿ ಕಾರ್ಡ್ ಇಲ್ಲದಿರುವ ರೈತರಿಗೂ ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡುವ ಸೌಲಭ್ಯ ನಮ್ಮಲ್ಲಿದ್ದು, ಈ ವೇಳೆ ಊಟ, ತಿಂಡಿ ಪಥ್ಯ ಕೂಡ ಇರುವುದಿಲ್ಲ. ಆಪರೇಷನ್ ನಂತರ ಎರಡೂವರೆ ಗಂಟೆಯಲ್ಲಿ ರೋಗಿ ಮನೆಗೆ ತೆರಳಬಹುದಾಗಿದೆ ಎಂದರು.

ಶಿಬಿರದಲ್ಲಿ ಸಂಘದ ಉಪಾಧ್ಯಕ್ಷ ಆಲಗೂಡು ನಂಜುಂಡ, ನಾಗಣ್ಣ, ಬಿ.ವೀರಭದ್ರಪ್ಪ, ಮಹದೇವ, ಶಿವಣ್ಣ, ಮಹದೇವಮ್ಮ, ಕಾಂತಮ್ಮ, ಹೆಚ್.ಮರಿಸ್ವಾಮಿ, ಮಲ್ಲಣ್ಣ, ಜಯಣ್ಣ, ಸಹದೇವ, ಎನ್.ಎಸ್.ಶೇಖರ್, ಮುಖ್ಯ ಕಾರ್ಯನಿರ್ವಾಹಕ ಗುರುಮಲ್ಲಪ್ಪ, ಸಿಬ್ಬಂದಿಗಳಾದ ಕುಮುದಾ ನಾಯಕ್, ಕೆ.ಎಸ್.ರೇಖಾ, ಭೈರವೇಶ್ವರ ನೇತ್ರಾಲಯದ ವ್ಯವಸ್ಥಾಪಕ ಸುರೇಶ್, ಅಂಜಲಿ, ಶಿಲ್ಪ, ಜಯಲಕ್ಷ್ಮಿ, ಮಂಜುನಾಥ್, ಸುನೀಲ್, ಬಿ.ಎಂ.ಚಂದನ ಹಾಜರಿದ್ದರು.

ನಾಳೆ ಪ್ರಜಾ ಸ್ನೇಹ ಚರ್ಚಾ ಕಾರ್ಯಕ್ರಮ

ನಂಜನಗೂಡು, ಫೆ.11– ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ವತಿಯಿಂದ ಪ್ರೊ.ನಂಜುಂಡಸ್ವಾಮಿ ಅವರ 90ನೇ ಹುಟ್ಟುಹಬ್ಬ ಅಂಗವಾಗಿ ಫೆ.13 ಬೆಳಗ್ಗೆ 11 ಗಂಟೆಗೆ ತಾಲೂಕಿನ ತಾಂಡವಪುರದ ಮಾರಮ್ಮನ ದೇವಾಲಯದ ಆವರಣದಲ್ಲಿ ರೈತರ ಹಕ್ಕೊತ್ತಾಯಗಳನ್ನು ಮಂಡಿಸುವ ನಿಟ್ಟಿನಲ್ಲಿ ಸ್ಥಳೀಯ ಶಾಸಕಾಂಗ ಹಾಗೂ ರೈತ, ದಲಿತ ಮುಖಂಡರ ಪ್ರಜಾ ಸ್ನೇಹ ಚರ್ಚಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.



ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ಮಾತನಾಡಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳೇ ಮೈಸೂರು ಭಾಗದ ರೈತರ ಬವಣೆ ಹೇಳ ತೀರದಾಗಿದ್ದು, ಯಾವುದೇ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಇದರಿಂದ ರೈತರು ಆತ್ಮಹತ್ಯೆ ದಾರಿ ತುಳಿಯುತ್ತಿದ್ದು, ರೈತರಿಗೆ ಆತ್ಮಸ್ಥೈರ್ಯ ತುಂಬುವ ಸಲುವಾಗಿ ಕಳೆದ ವರ್ಷ ರೈತರ ಸಮಸ್ಯೆಗಳನ್ನು ಪಟ್ಟಿ ಮಾಡಿ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಲಾಗಿತ್ತು. ಆದರೆ ಕಳೆದ ಬಾರಿಯ ಸಮಸ್ಯೆಗಳಲ್ಲಿ ಶೇ.50 ಬಗೆಹರಿದಿವೆ. ಈ ವರ್ಷವೂ ಹಲವಾರು ಸಮಸ್ಯೆಗಳನ್ನು ಪಟ್ಟಿ ಮಾಡಿ ಬಗೆಹರಿಸುವಂತೆ ಹಕ್ಕೊತ್ತಾಯ ಮಂಡಿಸುವ ಸಲುವಾಗಿ ಸ್ಥಳೀಯ ಶಾಸಕಾಂಗ ಹಾಗೂ ರೈತ, ದಲಿತ ಮುಖಂಡರ ಪ್ರಜಾ ಸ್ನೇಹ ಮುಖಾಮುಖಿ ಚರ್ಚಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ರೈತರು ಬೆಳೆದ ಪ್ರತಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಾಣಿಕೆ ವೆಚ್ಚ ಕಳೆದು 3300 ರೂ. ಬೆಲೆ ನಿಗದಿಪಡಿಸಬೇಕು. ಗ್ರಾಮಗಳ ಗ್ರಾಮ ಠಾಣಾ ಗಡಿಗಳನ್ನು ವಿಸ್ತರಿಸಿ ವೈಜ್ಞಾನಿಕ ಸರ್ವೇ ನಡೆಸಿ ಈ ಖಾತೆ ವಿತರಿಸಬೇಕು. ತಾಲೂಕಿನ ಹೆಮ್ಮರಗಾಲ ಬಳಿಯ ಹಳೆಗುಂಡ್ಲಾ ಚೆನ್ನಯ್ಯನ ಕೆರೆ ತುಂಬಿಸಬೇಕು. ನರೇಗಾ ಯೋಜನೆಯನ್ನು ಈ ಹಿಂದೆ ಇದ್ದ ಸವಲತ್ತುಗಳೊಡನೆ ಯಥಾ ಸ್ಥಿತಿಯಲ್ಲಿ ಮುಂದುವರಿಸಬೇಕು ಎಂಬುದು ಸೇರಿದಂತೆ 24 ಸಮಸ್ಯೆಗಳನ್ನು ಬಗೆಹರಿಸುವಂತೆ ಹಕ್ಕೊತ್ತಾಯ ಮಾಡಲಾಗುವುದು. ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಚಾಮರಾಜನಗರ, ವರುಣ, ಗುಂಡ್ಲುಪೇಟೆ, ತಿ.ನರಸೀಪುರ, ನಂಜನಗೂಡು ಕ್ಷೇತ್ರಗಳ ಶಾಸಕರು ಭಾಗಿಯಾಗಲಿದ್ದಾರೆ ಎಂದರು.

ರಾಜ್ಯ ಕಾರ್ಯದರ್ಶಿ ಇಮ್ಮಾವು ರಘು, ಜಿಲ್ಲಾಧ್ಯಕ್ಷ ಸತೀಶ್ ರಾವ್ ಮಾತನಾಡಿದರು. ತಾಲೂಕು ಅಧ್ಯಕ್ಷ ದೊಡ್ಡಯ್ಯ, ದೇವರಾಜು, ಬಸಪ್ಪ, ಶ್ವೇತಾ, ನಂಜುಂಡಸ್ವಾಮಿ, ತಿಮ್ಮಣ್ಣ ಉಪಸ್ಥಿತರಿದ್ದರು.

ಲಿವಿಂಗ್ ವಿತ್ ಸ್ನೇಕ್ ಶಿಕ್ಷಣ ಕೇಂದ್ರ ಉದ್ಘಾಟನೆ

ಹುಣಸೂರು, ಫೆ.11– ಮಾನವರಲ್ಲಿ ಹಾವುಗಳ ಬಗ್ಗೆ ತಪ್ಪು ಕಲ್ಪನೆ ಹಾಗೂ ಭಯವಿದೆ. ಅವುಗಳನ್ನು ಹೋಗಲಾಡಿಸಿದರೆ ಹಾವುಗಳ ಸಂತತಿ ಉಳಿದು ಪರಿಸರ ಚಕ್ರ ಕ್ರಮ ಬದ್ಧವಾಗಲಿದೆ ಎಂದು ಸಂಸದ ಯದುವೀರ್ ಅವರ ಪತ್ನಿ ತ್ರಿಷಿಕಾ ಕುಮಾರಿ ತಿಳಿಸಿದರು.

ತಾಲೂಕಿನ ರತ್ನಪುರಿ ಕಾಲೋನಿಯಲ್ಲಿ ಲಿವಿಂಗ್ ವಿತ್ ಸ್ನೇಕ್ ಶಿಕ್ಷಣ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ಹಾವು ಎಂದರೆ ಪ್ರತಿಯೊಬ್ಬರಿಗೂ ಭಯವಿದೆ. ಹೀಗಾಗಿ ಈ ಕೇಂದ್ರ ಹಲವು ಸಂಶೋಧನೆಯೊಂದಿಗೆ ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಹಾವುಗಳ ಸಂತತಿ ರಕ್ಷಿಸುವ ದಿಕ್ಕಿನಲ್ಲಿ ತೊಡಗಿಸಿಕೊಂಡಿದೆ ಎಂದರು.



ಕೇಂದ್ರವನ್ನು ತ್ರಿಷಿಕಾ ಕುಮಾರಿ ಉದ್ಘಾಟಿಸಿದರು.

ಇತ್ತೀಚಿನ ದಿನಗಳಲ್ಲಿ ಹಲವು ಪ್ರಭೇದಕ್ಕೆ ಸೇರಿದ ಹಾವುಗಳು ಕಣ್ಮರೆಯಾಗುತ್ತಿವೆ. ಈ ಸಂತತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಲಿವಿಂಗ್ ವಿತ್ ಸ್ನೇಕ್ ಶಿಕ್ಷಣ ಕೇಂದ್ರ ಶ್ರಮಿಸುತ್ತಿದೆ. ಅಲ್ಲದೇ ಭವಿಷ್ಯದ ಮಕ್ಕಳಿಗೆ ಹಾವು ಮತ್ತು ಅವುಗಳ ಉಪಯೋಗ ಕುರಿತು ಜಾಗೃತಿ ಮೂಡಿಸಿ ತಪ್ಪು ಕಲ್ಪನೆ ಹೋಗಲಾಡಿಸುವ ದಿಕ್ಕಿನಲ್ಲಿ ತೊಡಗಿದ್ದು, ಈ ರೀತಿಯ ಕೇಂದ್ರಗಳು ಸಮಾಜಕ್ಕೆ ಅಗತ್ಯ ಎಂದರು.

ಮಾನವ ಹಾಗೂ ಹಾವುಗಳ ನಡುವಿನ ಸಂಘರ್ಷ ನಿಯಂತ್ರಣದಿಂದ ಈ ಸಂತತಿ ಕಾಪಾಡಬಹುದು. ಸಾಮಾನ್ಯವಾಗಿ ಕೃಷಿ ಕ್ಷೇತ್ರದಲ್ಲಿ ಹೆಚ್ಚಾಗಿ ಹಾವು ಗೋಚರಿಸಲಿದ್ದು, ಅವುಗಳನ್ನು ಬದುಕಲು ಬಿಡಬೇಕು. ಹಾವು ಬೆಳೆ ನಾಶಪಡಿಸುವ ಇತರೆ ಪ್ರಾಣಿಗಳನ್ನು ಬೇಟೆಯಾಡುವುದರಿಂದ ಬೆಳೆ ಸಂರಕ್ಷಣೆಯಾಗಲಿದೆ. ಹೀಗಾಗಿ ಪ್ರಕೃತಿ ಚಕ್ರದ ನಿಯಮದಂತೆ ಪ್ರತಿಯೊಬ್ಬರೂ ಅವಲಂಬಿತರಾಗಿದ್ದು, ಹಾವು ಮತ್ತು ಮಾನವ ಸಂಘರ್ಷವಾಗದೆ ಪ್ರಕೃತಿಗೆ ಹೊಂದಿಕೊಂಡು ಬದುಕುವುದನ್ನು ಕಲಿಯಬೇಕು ಎಂದರು.

ಡಿ ಲಯನ್ ಟ್ರಸ್ಟ್ ಮುಖ್ಯಸ್ಥ ಮಾರ್ಟೀನ್ ಮಾತನಾಡಿ, ಹಾವುಗಳ ಬಗ್ಗೆ ಮಕ್ಕಳು ಹಾಗೂ ಹಿರಿಯರಿಗೆ ಕಾರ್ಯಾಗಾರ ಹಮ್ಮಿಕೊಂಡು ಜಾಗೃತಿ ಮೂಡಿಸುವ ಕಾರ್ಯ ನಿರಂತರವಾಗಿ ನಡೆದಿದೆ. ಅಲ್ಲದೇ ಈ ಕೇಂದ್ರದಲ್ಲಿ ಹಾವುಗಳ ಜೀವನ ಚರಿತ್ರೆ, ಆಹಾರ ಪದ್ಧತಿ ಮತ್ತು ವಾಸಸ್ಥಾನಗಳ ಬಗ್ಗೆ ತಿಳಿಸುವ ಕೆಲಸ ನಡೆದಿದೆ ಎಂದರು.

ಮುಂಬರುವ ದಿನಗಳಲ್ಲಿ ರಾಜ್ಯದ ವಿವಿಧೆಡೆಗಳಿಂದ ಮಕ್ಕಳನ್ನು ಆಹ್ವಾನಿಸಿ ಹಾವುಗಳ ಬಗ್ಗೆ ತಿಳುವಳಿಕೆ ನೀಡಿ ಜಾಗೃತಿ ಮೂಡಿಸುವ ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದರು. ಇದೇ ವೇಳೆ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು ತ್ರಿಷಿಕಾ ಕುಮಾರಿ ಅವರನ್ನು ಸನ್ಮಾನಿಸಲಾಯಿತು.

ಕ್ಷೇತ್ರದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದು

ಕೆ.ಆರ್.ನಗರ ಜೆಡಿಎಸ್ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿ

ಭೇರ್ಯ, ಫೆ.11– ಮುಂಬರುವ ಚುನಾವಣೆಗಳಲ್ಲಿ ಜಯ ಸಾಧಿಸಿ ಪಕ್ಷವನ್ನು ಅಧಿಕಾರಕ್ಕೆ ತಂದು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆ ಎಂಬುದನ್ನು ಮತ್ತೊಮ್ಮೆ ಸಾಬೀತು ಪಡಿಸಲು ಪಕ್ಷದ ಮುಖಂಡರು, ಕಾರ್ಯಕರ್ತರು ಸಂಕಲ್ಪ ಮಾಡಬೇಕು ಎಂದು ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್ ಮನವಿ ಮಾಡಿದರು.



ಹೊಸ ಅಗ್ರಹಾರದಲ್ಲಿ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಯಿತು.

ಹೊಸ ಅಗ್ರಹಾರ ಗ್ರಾಮದಲ್ಲಿ ಹೋಬಳಿ ಮಟ್ಟದ ಜೆಡಿಎಸ್ ಬೂತ್ ಮಟ್ಟದ ಕಾರ್ಯಕರ್ತರ ಸಭೆ ನಡೆಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಯನ್ನು ಜನತೆ ಕಳೆದ ಎರಡೂವರೆ ವರ್ಷದಿಂದ ಸೂಕ್ಷ್ಮವಾಗಿ ಗಮನಿಸಿದ್ದಾರೆ. ಕ್ಷೇತ್ರದ ಜನ ಇಟ್ಟಿದ್ದ ನಿರೀಕ್ಷೆ ಹುಸಿಯಾಗಿದೆ. ಹಾಗಾಗಿ ಪಕ್ಷ ಬಲವರ್ಧನೆಗೆ ಮುಖಂಡರು, ಕಾರ್ಯಕರ್ತರು ಮುಂದಾಗಬೇಕು ಎಂದು ಕರೆ ನೀಡಿದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಜ್ಯಾದ್ಯಂತ ಪ್ರವಾಸ ಮಾಡಿ ಜನಬೆಂಬಲ ಪಡೆಯುತ್ತಾ ಅಪಾರ ಅಭಿಮಾನಿಗಳನ್ನು ಗಳಿಸಿದ್ದಾರೆ. ಅವರ ಜನಪ್ರಿಯತೆ ದಿನದಿನಕ್ಕೂ ಹೆಚ್ಚಾಗಿ ಪಕ್ಷದ ಸಂಘಟನೆ ವೃದ್ಧಿಯಾಗುತ್ತಿದೆ. ಮುಂದಿನ ದಿನಗಳಲ್ಲಿ ಮೈತ್ರಿ ಸರ್ಕಾರ ರಾಜ್ಯದ ಚುಕ್ಕಾಣಿ ಹಿಡಿಯುವುದು ನಿಶ್ಚಿತ. ಆದ್ದರಿಂದ ಈಗಿನಿಂದಲೇ ಜೆಡಿಎಸ್ ಪಕ್ಷಕ್ಕೆ ಬರುವವರನ್ನು ಕರೆ ತಂದು ಸದಸ್ಯತ್ವ ನೋಂದಣಿ ಮಾಡಿಸಿ ಎಂದರು.

ಕೆ.ಆರ್.ನಗರ ಕ್ಷೇತ್ರದಲ್ಲಿ ಮತದಾರರ ಪರಿಷ್ಕರಣೆ ನಡೆಯುತ್ತಿದೆ. ಹೀಗಾಗಿ ಜೆಡಿಎಸ್ ಯುವ ಮುಖಂಡ ಹಾಗೂ ವಕೀಲ ತಿಮ್ಮಪ್ಪ ಅವರನ್ನು ಮತಗಟ್ಟೆ ಪರಿಷ್ಕರಣಾಧಿಕಾರಿಯಾಗಿ ನೇಮಿಸಲಾಗಿದೆ. ಬೂತ್ ಮಟ್ಟದ ಮತಗಟ್ಟೆಗಳು, ಹೊಸದಾಗಿ ಸೇರ್ಪಡೆ ಮಾಡಲು, ಮೃತಪಟ್ಟವರ ಹೆಸರು ಡಿಲೀಟ್ ಮಾಡಲು ತಿಮ್ಮಪ್ಪ ಅವರನ್ನು ಸಂಪರ್ಕಿಸಿ ಎಂದರು.

ಸಭೆಯಲ್ಲಿ ಜೆಡಿಎಸ್ ಯುವ ಮುಖಂಡ ಹಾಗೂ ವಕೀಲ ತಿಮ್ಮಪ್ಪ, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಯೋಗೇಶ್, ವೀರಶೈವ ಮುಖಂಡ ಬಾಲಾಜಿ ಗಣೇಶ್, ಜ್ಞಾನಾನಂದ, ಎಲ್‌ಐಸಿ ಮಂಜುನಾಥ್, ಸ್ವಾಮಿ, ಗಣೇಶ್, ಮುಖಂಡರಾದ ರಾಮೇಗೌಡ, ಡೈರಿ ರಾಜೇಗೌಡ, ಚಂದು, ಜಯಮ್ಮ, ಸೀತಾರಾಮು, ಬಂಡೆ ಕುಮಾರ್, ಚಂದ್ರೇಗೌಡ, ನಾರಾಯಣ, ಮಧುಕುಮಾರ್, ಗುರು, ರಂಗಪ್ಪ, ರಾಘವೇಂದ್ರ, ಕಾಶಿ ಇತರರಿದ್ದರು.

ವಿಜೃಂಭಣೆಯ ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ

ಸರಗೂರು, ಫೆ.11– ತಾಲೂಕಿನ ಸಾಗರೆ ಗ್ರಾಮದಲ್ಲಿ ಜೋಡಿಲಿಂಗ ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ದನಗಳ ಜಾತ್ರೆ, ಕೊಂಡೋತ್ಸವ ವಿಜೃಂಭಣೆಯಿಂದ ನೆರವೇರಿತು.



ಜಾತ್ರೆ ಹಿನ್ನೆಲೆಯಲ್ಲಿ ದೇವಾಲಯದಲ್ಲಿ ಸ್ವಾಮಿಗೆ ಅಭಿಷೇಕ ಸೇರಿದಂತೆ ವಿವಿಧ ಪೂಜೆ ನಡೆಸಲಾಯಿತು. ಬಳಿಕ ಉತ್ಸವ ಮೂರ್ತಿಯನ್ನು ನದಿಗೆ ಮೆರವಣಿಗೆಯಲ್ಲಿ ಕರೆದೊಯ್ದು ಪೂಜೆ ಸಲ್ಲಿಸಲಾಯಿತು. ನಂತರ ಹಾಲರವಿ ಸೇವೆ ನಡೆಸಿ, ಕಳಸದೊಂದಿಗೆ ಹುಲಿವಾಹನದಲ್ಲಿ ಮಹದೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಕಂಸಾಳೆ ಪದ, ವೀರಗಾಸೆ, ನಂದಿಧ್ವಜ ಹಾಗೂ ವಾದ್ಯಗೋಷ್ಠಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ದೇವಾಲಯಕ್ಕೆ ಕರೆತರಲಾಯಿತು. ಬಳಿಕ ಮಹದೇಶ್ವರಸ್ವಾಮಿ ದೇವರ ಬಿರುದು ಹೊತ್ತ ಅರ್ಚಕರು ಕೊಂಡ ಹಾಯ್ದರು. ಕೊಂಡೋತ್ಸವ ಕಣ್ತುಂಬಿಕೊಂಡ ಭಕ್ತರು ತೆಂಗಿನಕಾಯಿ ಮತ್ತು ದವಸ ಧಾನ್ಯಗಳನ್ನು ಕೊಂಡಕ್ಕೆ ಹಾಕಿ ಪೂಜೆ ಸಲ್ಲಿಸಿದರು.

ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು. ನಂತರ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಲಾಯಿತು. ಸಂಜೆ ಹುಲಿವಾಹನ, ಮಹದೇಶ್ವರಸ್ವಾಮಿ ಉತ್ಸವ ಮೂರ್ತಿ ಮತ್ತು ಬಿರುದು ಬಾವಲಿಗಳನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ಜೋಡಿಲಿಂಗ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವಕ್ಕೆ ತೆರೆ ಬಿದ್ದಿತು. ಈ ವೇಳೆ ದನಗಳ ಪ್ರದರ್ಶನ ನಡೆಸಲಾಯಿತು. ಉತ್ತಮ ರಾಸುಗಳಿಗೆ ಬಹುಮಾನ ವಿತರಿಸಲಾಯಿತು. ಅಲ್ಲದೆ ಜಾತ್ರಾ ಮಹೋತ್ಸವ ಅಂಗವಾಗಿ ವಾಲಿಬಾಲ್, ಕಬ್ಬಡಿ, ಕ್ರಿಕೆಟ್ ಪಂದ್ಯಾವಳಿ ನಡೆಸಿದ್ದು ವಿಶೇಷವಾಗಿತ್ತು.

ಸನ್ಮಾನ



ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜಣ್ಣ ಅವರನ್ನು ತಿ.ನರಸೀಪುರ ತಾಲೂಕು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಅಧ್ಯಕ್ಷ ದಣಾಯಕನಪುರ ಸಿದ್ದರಾಜು, ಪದಾಧಿಕಾರಿಗಳಾದ ತಿರುಮಕೂಡಲು ಜೋಗಿ, ಕಿರಗಸೂರು ಮಣಿ, ಕೇತಹಳ್ಳಿ ಚೆಲುವರಾಜು ಸನ್ಮಾನಿಸಿದರು. ಕರ್ನಾಟಕ ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ ಇದ್ದರು.

ಫೆ.20ಕ್ಕೆ, 92 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ

ಪೂರ್ವಭಾವಿ ಸಭೆಯಲ್ಲಿ ಅಗತ್ಯ ಕ್ರಮಗಳ ಕುರಿತು ಚರ್ಚೆ

ತಿ.ನರಸೀಪುರ, ಫೆ.11– ತಾಲೂಕಿನ ಚಿದರವಳ್ಳಿಯಲ್ಲಿ ಫೆ.20ರಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಕೋಟ್ಯಾಂತರ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಕುರಿತು ಚರ್ಚಿಸಲಾಯಿತು.



ಕೋಟ್ಯಾಂತರ ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನಡೆಯುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಭೆ ನಡೆಸಿ ಚರ್ಚಿಸಿದರು.

ಬಹು ನಿರೀಕ್ಷಿತ ನಂಜಾಪುರ–ಚಿದರವಳ್ಳಿ ಹಾಗೂ ನಂಜಾಪುರ–ಉಕ್ಕಲಗೆರೆ ನಾಲಾ ಕಾಮಗಾರಿಗೆ ಸರ್ಕಾರ 92 ಕೋಟಿ ರೂ. ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಫೆ.20ರಂದು ಚಿದರವಳ್ಳಿ ಗ್ರಾಮದ ಸಿದ್ದೇಶ್ವರ ದೇವಸ್ಥಾನದ ಬಳಿ ಮಧ್ಯಾಹ್ನ 12 ಗಂಟೆಗೆ ನಡೆಯುವ ಭೂಮಿ ಪೂಜೆಗೆ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಆಗಮಿಸುತ್ತಿದ್ದಾರೆ. ಹೀಗಾಗಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಕಾರ್ಯಕ್ರಮದ ರೂಪುರೇಷೆ ಬಗ್ಗೆ ವಿಸ್ತೃತ ಚರ್ಚೆ ನಡೆಸಿ ಕಾರ್ಯಕ್ರಮವನ್ನು ಅದ್ಧೂರಿಯಾಗಿ ನಡೆಸಲು ನಿರ್ಧಾರ ಕೈಗೊಂಡರು.

ಬಹು ನಿರೀಕ್ಷಿತ ನಾಲಾ ಕಾಮಗಾರಿ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ನಾಲೆ ಹಾದು ಹೋಗುವ ಗ್ರಾಮಗಳ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಗತ್ಯ ಕ್ರಮ ಕೈಗೊಳ್ಳುವ ಜೊತೆಗೆ ಅವರನ್ನು ಕರೆತರುವ ಜವಾಬ್ದಾರಿ ಕಾರ್ಯಕರ್ತರು ತೆಗೆದುಕೊಳ್ಳಬೇಕು ಎಂದರು.

ಸೋಸಲೆ ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಂ.ಪರಶಿವಮೂರ್ತಿ ಮಾತನಾಡಿ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಚಿದರವಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ನಾಲಾ ನಿರ್ಮಾಣಕ್ಕಾಗಿ ಕೋಟ್ಯಾಂತರ ರೂ. ಅನುದಾನ ಬಿಡುಗಡೆ ಮಾಡಿದ್ದು, ಇಲ್ಲಿವರೆಗೆ ಯಾವುದೇ ಶಾಸಕರು ಇಷ್ಟು ದೊಡ್ಡ ಮೊತ್ತದ ಅನುದಾನ ಬಿಡುಗಡೆ ಮಾಡಿದ ಉದಾಹರಣೆ ಇಲ್ಲ. ಹಾಗಾಗಿ ಅಂದು ನಡೆಯುವ ಭೂಮಿ ಪೂಜೆ ಕಾರ್ಯಕ್ರಮ ವಿಜೃಂಭಣೆ ಹಾಗೂ ಅದ್ಧೂರಿಯಾಗಿ ನಡೆದು ಇತಿಹಾಸ ಸೃಷ್ಟಿಯಾಗಬೇಕು. ಕಾರ್ಯಕರ್ತರು, ಮುಖಂಡರು ತಮ್ಮ ಗ್ರಾಮಗಳಿಂದ ಜನರನ್ನು ಕರೆತರುವ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಬೇಕು. ಹೊಸ ನಾಲೆ ಆಧುನೀಕರಣವಾಗಿ ಪ್ರಾರಂಭವಾಗಲಿರುವುದರಿಂದ ಈ ಭಾಗದ ರೈತರು ಮತ್ತಷ್ಟು ಹೆಚ್ಚಿನ ವ್ಯವಸಾಯದಲ್ಲಿ ತೊಡಗಿಕೊಂಡು ಆರ್ಥಿಕವಾಗಿ ಮುಂದುವರೆಯಲು ಸಹಕಾರಿಯಾಗಲಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಉಕ್ಕಲಗೆರೆ ಬಸವಣ್ಣ ಮಾತನಾಡಿದರು. ಸಚಿವರ ಆಪ್ತ ಕಾರ್ಯದರ್ಶಿ ಬಸವರಾಜು, ಮೀನುಗಾರರ ಘಟಕದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೊಳತ್ತೂರ್ ಕುಮಾರ್, ಚಿದರವಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರಶೇಖರ್, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ರಾಮಲಿಂಗಯ್ಯ, ಬೂದಹಳ್ಳಿ ಸಿದ್ದರಾಜು, ಅತ್ತಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಸುನೀಲ್, ಭಾಸ್ಕರ್, ನಾಗರಾಜು, ಡೊಳ್ಳಪ್ಪ, ಕುಮಾರ್, ರಾಮೇಗೌಡ, ಮರಿಸ್ವಾಮಿ, ಮನೋಜ್, ಎಂ.ಎಲ್.ಹುಂಡಿ ಪ್ರಭುಸ್ವಾಮಿ, ಶ್ರೀಕಂಠಸ್ವಾಮಿ ಮತ್ತಿತರರಿದ್ದರು.

> “ಉದ್ದೇಶಿತ ನಾಲಾ ಕಾಮಗಾರಿಯಿಂದ ನಂಜಾಪುರ, ಸಿ.ವಿ.ಕೊಪ್ಪಲು, ಹೊಸಕೊಪ್ಪಲು, ಬೋಳೇಗೌಡನ ಹುಂಡಿ, ಚಿಮಲಿ, ಚಿಕ್ಕ ಕಲ್ಲುಣಿ, ಬೊಮ್ಮನಹಳ್ಳಿ, ಚಿದರವಳ್ಳಿ, ಮುಡುಕನಪುರ, ಹುಲವಾರ, ದೊಡ್ಡೇಬಾಗಿಲು, ಸೀಗೋಡಿಪುರ, ಕೊಳತ್ತೂರು, ರಾಮೇಗೌಡನಪುರ, ಕೆಂಪನಪುರ, ಎಸ್.ದೊಡ್ಡಪುರ, ಕೋಣಗಳ್ಳಿ, ಚಿಟಗಯ್ಯನಕೊಪ್ಪಲು, ವಡ್ಡರಕೊಪ್ಪಲು, ಮಲಿಯೂರು, ಬಿ.ಬೆಟ್ಟಹಳ್ಳಿ, ಅತ್ತಹಳ್ಳಿ, ಮೇಗಳಕೊಪ್ಪಲು, ಕೇತುಪುರ, ಎಂ.ಎಲ್.ಹುಂಡಿ, ಉಕ್ಕಲಗೆರೆ, ಕನ್ನಾಯಕನಹಳ್ಳಿ, ಕಳ್ಳೀಪುರ, ಬೂದಹಳ್ಳಿ, ನಾಗಲಗೆರೆ ಹಾಗೂ ನೆರಗ್ಯಾತನಹಳ್ಳಿ ಭಾಗದ ರೈತರಿಗೆ ಅನುಕೂಲವಾಗಲಿದೆ.
> – ಸೋಸಲೆ ಮಹದೇವಸ್ವಾಮಿ, ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ.

ಕಿರನೆಲ್ಲಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಪಲ್ಲಕ್ಕಿ ಉತ್ಸವ



ಕಿರನೆಲ್ಲಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಕಂಪಲಾಪುರ, ಫೆ.11– ಇಲ್ಲಿಗೆ ಸಮೀಪದ ಕಿರನೆಲ್ಲಿ ಗ್ರಾಮದಲ್ಲಿ ಅಯ್ಯಪ್ಪ ಸ್ವಾಮಿ ಪಲ್ಲಕ್ಕಿ ಉತ್ಸವ ಸಂಭ್ರಮದಿಂದ ನಡೆಯಿತು.

ಹರಿಲಾಪುರ ಪುರುಷೋತ್ತಮ್ (ಗುರುಸ್ವಾಮಿ) ನೇತೃತ್ವದಲ್ಲಿ ಬೆಳಗ್ಗೆಯಿಂದ ಅಯ್ಯಪ್ಪ ಸ್ವಾಮಿಗೆ ಗಣಪತಿ ಹೋಮ, ನವಗ್ರಹ ಹೋಮ ನೆರವೇರಿಸಲಾಯಿತು. ಸಂಜೆ ಅಯ್ಯಪ್ಪ ಮಾಲಾಧಾರಿಗಳಿಂದ ಕಜ್ಜಾಯ ಪೂಜೆ ನಡೆಯಿತು. ಕುದಿಯುವ ಎಣ್ಣೆಯಲ್ಲಿ ಬರಿಗೈಯಿಂದ ಕಜ್ಜಾಯ ತೆಗೆಯುವುದು ನೋಡುಗರ ಮನಸ್ಸು ಪುಳಕಿತಗೊಳಿಸುವಂತಿತ್ತು. ನಂತರ ಅಯ್ಯಪ್ಪ ಸ್ವಾಮಿಯನ್ನು ಬಗೆ ಬಗೆಯ ಹೂಗಳಿಂದ ಅಲಂಕಾರ ಮಾಡಿ ವಾಹನದ ಮೇಲೆ ಪ್ರತಿಷ್ಠಾಪಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಉತ್ಸವ ನಡೆಸಲಾಯಿತು. ರಾತ್ರಿ 11 ಗಂಟೆಗೆ ಅಯ್ಯಪ್ಪ ಮಾಲಾಧಾರಿಗಳು ಕೊಂಡಹಾಯ್ದರು.

ಈ ವೇಳೆ ಗುರುಸ್ವಾಮಿಗಳಾದ ಈಶ್ವರ್, ಕೆ.ಟಿ.ಮಹದೇವ್, ಗ್ರಾಪಂ ಸದಸ್ಯ ಮಂಜುನಾಥ್, ಮಹದೇವ್, ಮಣಿ, ಸೋಮಶೇಖರ್, ಶಿವ, ನಾಗೇಶ್, ಶೇಖರ, ಬಸವರಾಜು, ರವಿ, ಜಯಣ್ಣ, ಶ್ರೀನಾಥ್, ಪ್ರಸನ್ನ, ಸುರೇಶ್ ಸೇರಿದಂತೆ ಕಿರನಲ್ಲಿ ಹಾಗೂ ಅಕ್ಕಪಕ್ಕದ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಮಿತ್ರ

ಬಾಲ್ಯ ವಿವಾಹ ತಡೆಗೆ ಜಾಗೃತಿ ಜಾಥಾ

ಮೈಸೂರು ಜಿಲ್ಲೆಯಲ್ಲಿ ಎಷ್ಟೇ ಪ್ರಯತ್ನಿಸಿದರೂ 24 ಬಾಲ್ಯ ವಿವಾಹ ನಡೆದಿವೆ: ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ



ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಬಾಲ್ಯ ವಿವಾಹ ನಿಷೇಧ ಕಾಯ್ದೆ ಮತ್ತು ಪೋಕ್ಸೋ ಕಾಯ್ದೆಗಳ ಕುರಿತು ತರಬೇತಿ ಮತ್ತು ಅರಿವು ಕಾರ್ಯಾಗಾರವನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಉದ್ಘಾಟಿಸಿದರು.

ಮೈಸೂರು, ಫೆ.11(ಬಿಎಲ್‌ಯು)– ಮೈಸೂರು ಜಿಲ್ಲೆಯಲ್ಲಿ 24 ಬಾಲ್ಯ ವಿವಾಹಗಳು ನಡೆದಿದ್ದು, ಬಾಲ್ಯ ವಿವಾಹವನ್ನು ಶೂನ್ಯ ಪ್ರಮಾಣಕ್ಕೆ ತರಲು ಎಷ್ಟೇ ಪ್ರಯತ್ನಿಸಿದರೂ ವಿಫಲವಾಗುತ್ತಿರುವುದು ನಮ್ಮೆಲ್ಲರ ವೈಫಲ್ಯ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಇಂದು ನಡೆದ ಬಾಲ್ಯ ವಿವಾಹ ಮುಕ್ತ ಜಿಲ್ಲೆ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 2024ರಲ್ಲಿ 224 ಬಾಲ್ಯ ವಿವಾಹ ತಡೆಯಲಾಗಿತ್ತು. ಆದರೂ ಸಹ 56 ಬಾಲ್ಯ ವಿವಾಹಗಳು ನಡೆದವು. ಕಳೆದ ವರ್ಷ 268 ಬಾಲ್ಯ ವಿವಾಹ ತಡೆದರೂ 24 ಬಾಲ್ಯ ವಿವಾಹಗಳನ್ನು ಮಾಡಲಾಗಿದೆ. ಬಾಲ್ಯ ವಿವಾಹವನ್ನು ಶೂನ್ಯಕ್ಕೆ ತರುವ ನಮ್ಮ ಪ್ರಯತ್ನದ ವೈಫಲ್ಯತೆಗೆ ಇದು ಸ್ಪಷ್ಟ ನಿದರ್ಶನ ಎಂದು ಹೇಳಿದರು.

ಬಾಲ್ಯ ವಿವಾಹ ತಡೆಯುವುದು ಒಂದು ಇಲಾಖೆಯ ಜವಾಬ್ದಾರಿಯಲ್ಲ. ಪ್ರತೀ ಇಲಾಖೆಯವರು ಇದರಲ್ಲಿ ಕಾರ್ಯೋನ್ಮುಖವಾಗಬೇಕು ಎಂದು ಇದೇ ವೇಳೆ ಅವರು ಸಲಹೆ ನೀಡಿದರು.

ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಹಾಗೂ ಪಿಡಿಓಗಳಿಗೆ ಬಾಲ್ಯ ವಿವಾಹದ ಬಗ್ಗೆ ಮಾಹಿತಿ ಇರುತ್ತದೆ. ಆದರೂ ಇದನ್ನು ತಡೆಗಟ್ಟಲು ವಿಫಲರಾಗಿದ್ದೀರಿ. ಈ ಹಿನ್ನೆಲೆಯಲ್ಲಿ ಇದರ ದುಷ್ಪರಿಣಾಮವನ್ನು ಅರಿತು ಮೈಸೂರು ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡಬೇಕೆಂದು ಲಕ್ಷ್ಮೀಕಾಂತರೆಡ್ಡಿ ತಾಕೀತು ಮಾಡಿದರು.

ತರುವಾಯ ಮಾತನಾಡಿದ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಉಷಾರಾಣಿ ಅವರು ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳು ಅವರ ಬಾಲ್ಯವನ್ನು ಕಸಿದುಕೊಳ್ಳುವ ಗಂಭೀರ ಸಮಸ್ಯೆಯಾಗಿದೆ. ಇದರಿಂದ ಮಕ್ಕಳ ಶಿಕ್ಷಣ, ಆರೋಗ್ಯ, ಆಟ, ವಿಶ್ರಾಂತಿ ಸೇರಿದಂತೆ ಇತರ ಹಕ್ಕುಗಳನ್ನು ಕಸಿದುಕೊಂಡು ಅವರ ಭವಿಷ್ಯವನ್ನೇ ಹಾಳು ಮಾಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದಕ್ಕೂ ಮುನ್ನ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಡಾ. ಪಿ.ಶಿವರಾಜ್ ಅವರು, ಬಾಲ್ಯ ವಿವಾಹ ಹೆಣ್ಣು ಮಕ್ಕಳಿಗೆ ದೊಡ್ಡ ಶಾಪವಾಗಿದ್ದು, ಏನೇ ಸಂಕಷ್ಟ ಇದ್ದರೂ ಪೋಷಕರು ಮಕ್ಕಳಿಗೆ ಬಾಲ್ಯದಲ್ಲಿ ಮದುವೆ ಮಾಡದೆ ವಿದ್ಯಾಭ್ಯಾಸ ನೀಡಬೇಕು ಎಂದು ಸಲಹೆ ನೀಡಿದರು.

ಬಾಲ್ಯ ವಿವಾಹದ ದುಷ್ಪರಿಣಾಮ ಕುರಿತು ಅರಿವು ಮೂಡಿಸಲು ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿಯಿಂದ ಕಲಾಮಂದಿರದವರೆಗೆ ನಡೆದ ಜಾಗೃತಿ ಜಾಥಾದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಾಲ್ಯ ವಿವಾಹದ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಸರ್ಕಾರ ಪರಿಣಾಮಕಾರಿ ಕಾರ್ಯಕ್ರಮಗಳನ್ನು ರೂಪಿಸಿದೆ ಎಂದು ಹೇಳಿದರು.

ಮೈಸೂರು ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಮಾದರಿ ಜಿಲ್ಲೆಯನ್ನಾಗಿಸುವ ಗುರಿ ಹೊಂದಲಾಗಿದೆ. ಇದಕ್ಕೆ ಪೋಷಕರು ಕೂಡ ಕೈಜೋಡಿಸಬೇಕು. ಇದರಿಂದ ಹೆಣ್ಣು ಮಕ್ಕಳು ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿ, ಶಿಕ್ಷಣದಿಂದ ವಂಚಿತವಾಗುವುದು ತಪ್ಪುತ್ತದೆ ಎಂದು ಅಭಿಪ್ರಾಯಪಟ್ಟರು.

ಬಾಲ್ಯ ವಿವಾಹ ತಡೆಗಟ್ಟಲು ಜಿಲ್ಲಾಡಳಿತ ಹಲವು ಕ್ರಮಗಳನ್ನು ಕೈಗೊಂಡಿದೆ. ಬಾಲ್ಯ ವಿವಾಹ ಕಂಡು ಬಂದಲ್ಲಿ ಸಾರ್ವಜನಿಕರು ಸಹಾಯ ವಾಣಿ ಸಂಖ್ಯೆ 1098ಗೆ ಕರೆ ಮಾಡಿ ದೂರ ನೀಡಬಹುದು ಎಂದು ಡಾ.ಶಿವರಾಜ್ ಸಲಹೆ ನೀಡಿದರು.

ವಿದ್ಯಾರ್ಥಿಗಳ ಜಾಗೃತಿ ಜಾಥಾದಲ್ಲಿ ಬಾಲ್ಯ ವಿವಾಹ ಬೇಡ. ಮಕ್ಕಳಿಗೆ ಬೇಡ ದುಡಿತದ ಬವಣೆ. ಶಿಕ್ಷಣ ಕೊಡುವುದು ನಮ್ಮೆಲ್ಲರ ಹೊಣೆ ಎಂಬ ಘೋಷಣಾ ಫಲಕಗಳನ್ನು ಹಿಡಿದು ಅರಿವು ಮೂಡಿಸಿದರು.

ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್, ಡಿಸಿಪಿ ಸುಂದರ್ ರಾಜ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್ ನಾಥ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಎಸ್.ಮಂಜು, ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಡಾ.ಸಿ.ವಿ.ಸ್ನೇಹ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಪಿ.ಕೆ.ಜೋಸ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಾಲ್ಯ ವಿವಾಹ ತಡೆಗಟ್ಟದಿದ್ದರೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

ಬಾಲ್ಯ ವಿವಾಹ, ಬಾಲ ಗರ್ಭಿಣಿ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ವಿಫಲರಾದರೆ ವಿವಿಧ ಇಲಾಖೆಗಳ ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ರಾಜ್ಯ ಸರ್ಕಾರ ಎಚ್ಚರಿಸಿದೆ.

ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇರಿದಂತೆ ಇತರೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳ ಮಟ್ಟದ ಸಭೆಯಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಬಾಲ್ಯ ವಿವಾಹ, ಬಾಲ ಗರ್ಭಿಣಿ, ಪೋಕ್ಸೋ ಪ್ರಕರಣಗಳನ್ನು ತಡೆಗಟ್ಟಲು ಬಾಲ್ಯ ವಿವಾಹ ನಿಷೇಧಾಧಿಕಾರಿಗಳು ವಿಫಲರಾದಲ್ಲಿ ಅಥವಾ ನಿರ್ಲಕ್ಷ್ಯ ತೋರಿದಲ್ಲಿ 2023ರ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 199(ಸಿ)ರಂತೆ ಶಿಸ್ತು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಎಚ್ಚರಿಸಲಾಗಿದೆ.

ಕೌಟುಂಬಿಕ ಸಮಸ್ಯೆ, ಸಾಮಾಜಿಕ ಜಾಲತಾಣದ ಅತಿಯಾದ ಬಳಕೆಯಿಂದ ಬಾಲ್ಯ ವಿವಾಹ, ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ ಶಿಕ್ಷಣದ ಕೊರತೆ ಕೂಡ ಒಂದು ಪ್ರಮುಖ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಬಾಲ ಗರ್ಭಾವಸ್ಥೆಯಿಂದ ಆಗುವ ಮಾನಸಿಕ, ದೈಹಿಕ, ಸಾಮಾಜಿಕ ದುಷ್ಪರಿಣಾಮ ಕುರಿತು ಕಡ್ಡಾಯವಾಗಿ ಜಾಗೃತಿ ಮೂಡಿಸಬೇಕು, ಶಾಲೆ, ವಸತಿ ಶಾಲೆಗಳಲ್ಲಿ ಬಾಲಕಿಯರು ಯಾವುದೇ ಮಾಹಿತಿ ನೀಡದೆ 3 ದಿನಕ್ಕಿಂತ ಹೆಚ್ಚು ಗೈರಾದರೆ ಅಂತಹ ಬಾಲಕಿಯರ ಮಾಹಿತಿಯನ್ನು ಸಂಗ್ರಹಿಸಿ ಸಹಾಯವಾಣಿ ಸಂಖ್ಯೆ 1098ಗೆ ನೀಡಬೇಕು ಎಂದು ಸಭೆಯಲ್ಲಿ ತಾಕೀತು ಮಾಡಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತೀ ಟೀಚರ್(ಕ) + ಮನಶಂಕರ ವರಪ್ರಸಾದ್ (ತೆ)	1+3 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮರ್ದಾನಿ–3 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ವಿತ್ ಲವ್ (ತ)	4 ಪ್ರದರ್ಶನಗಳು
ಸಂಗಂ	
ಕರಿಕಾಡ (ಕ) + ಜೆ.ಸಿ.(ಕ)	2+2 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಡ್ರಗ್ಸ್ ಮುಕ್ತ ಸಮಾಜ ರೂಪಿಸುವ ಪೊಲೀಸರ 'ವಿಮುಕ್ತಿ' ಅರಿವು ಕಾರ್ಯಕ್ರಮ





ಮೈಸೂರಿನ ವಿವಿಧ ಶಾಲಾ–ಕಾಲೇಜುಗಳು, ಪ್ರವಾಸಿ ತಾಣಗಳಲ್ಲಿ ಡ್ರಗ್ಸ್ ವಿರುದ್ಧ ಪೊಲೀಸರು ಅರಿವು ಮೂಡಿಸಿದರು.

ಮೈಸೂರು,ಫೆ.11(ಬಿಎಲ್‌ಯು)– ಯುವ ಪೀಳಿಗೆಯ ಬದುಕಿಗೆ ಮಾರಕವಾಗಿರುವ ಡ್ರಗ್ಸ್ ವಿರುದ್ಧ ಮೈಸೂರಿನ ಹಲವು ಶಾಲಾ–ಕಾಲೇಜುಗಳಲ್ಲಿ ಪೊಲೀಸರು ಅರಿವು ಕಾರ್ಯಕ್ರಮ ಆಯೋಜಿಸಿದ್ದರು.

ವಿಮುಕ್ತಿ ಹೆಸರಿನಡಿ ಆಯೋಜಿಸಿದ್ದ ಈ ಅರಿವು ಕಾರ್ಯಕ್ರಮದಲ್ಲಿ ಡ್ರಗ್ಸ್‌ನಿಂದ ಏನೆಲ್ಲಾ ದುಷ್ಪರಿಣಾಮ ಎದುರಿಸಬೇಕಾಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿದರು.

ಮೈಸೂರಿನ ಮಾನಂದವಾಡಿಯ ಅಂಬೇಡ್ಕರ್ ವಸತಿ ಶಾಲೆ, ಲಕ್ಷ್ಮೀಪುರಂನ ಹಾರ್ಡ್ವಿಕ್ ಪದವಿ ಪೂರ್ವ ಕಾಲೇಜು, ಕೆ.ಆರ್ ಪೊಲೀಸ್ ಠಾಣೆ ವ್ಯಾಪ್ತಿಯ ಹೊಂಬಾಳೆ ಪಿಯು ಕಾಲೇಜು, ಗೋಕುಲಂ 3ನೇ ಹಂತದ ಲಯನ್ಸ್ ಸ್ಕೂಲ್‌ನಲ್ಲಿ ಜಾಗೃತಿ ಮೂಡಿಸಲಾಯಿತು.

ಇದಲ್ಲದೆ ವಿಜಯನಗರದ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಕಾಲೇಜು, ವಿವೇಕಾನಂದ ಪಿ.ಯು.ಕಾಲೇಜು, ಕೆ.ಪುಟ್ಟಸ್ವಾಮಿ ಪ್ರಥಮ ದರ್ಜೆ ಕಾಲೇಜು, ವಿದ್ಯಾವರ್ಧಕ ಸಂಘ, ಬನ್ನೂರು ರಸ್ತೆಯ ಜೀನಿಯಸ್ ಕಾಲೇಜು, ಶಾಂತಿನಗರದ ಅಲ್ ಕರೀಂ ಶಾಲೆ, ಕುವೆಂಪು ನಗರದ ಜ್ಯೋತಿ ಪಿ.ಯು.ಕಾಲೇಜು, ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಶ್ರೀರಾಂಪುರದ ಚೈತ್ರ ಪಿ.ಯು. ಕಾಲೇಜಿನಲ್ಲಿ ಅರಿವು ಮೂಡಿಸಲಾಯಿತು.

ತ್ಯಾಜ್ಯ ನಿರ್ವಹಣೆ ಉಲ್ಲಂಘನೆ; 14.35 ಲಕ್ಷ ದಂಡ ವಸೂಲಿ

ಮೈಸೂರು, ಫೆ.11(ಎಂಕೆ)– ಮೈಸೂರಿನಲ್ಲಿ ಪ್ಲಾಸ್ಟಿಕ್ ನಿಷೇಧವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವ ನಗರಪಾಲಿಕೆ, ಅಕ್ರಮವಾಗಿ ಪ್ಲಾಸ್ಟಿಕ್ ಬಳಕೆ ಸೇರಿದಂತೆ ಘನತ್ಯಾಜ್ಯ ನಿರ್ವಹಣೆ ನಿಯಮ ಉಲ್ಲಂಘಿಸುವವರಿಂದ 14,35,500 ರೂ.ದಂಡ ವಸೂಲಿ ಮಾಡಿದೆ.

2025ರ ಮಾ.1 ರಿಂದ 2026ರ ಫೆ.10ರವರೆಗೆ ನಡೆದಿರುವ ವ್ಯಾಪಕ ಕಾರ್ಯಾಚರಣೆಯಲ್ಲಿ ಎಲ್ಲೆಂದರಲ್ಲಿ ತ್ಯಾಜ್ಯ ಹಾಕುವವರಿಂದ 1,89,000 ರೂ., ಮನೆ ಮನೆಗಳಿಂದ ಮಿಶ್ರ ತ್ಯಾಜ್ಯ ನೀಡುವವರಿಂದ 13,600 ರೂ., ವಾಣಿಜ್ಯ ಮಳಿಗೆಗಳಿಂದ ಮಿಶ್ರ ತ್ಯಾಜ್ಯ ನೀಡುವವರಿಂದ 66,000 ರೂ., ಹೊಲಸು ನೀರು ಹಾಗೂ ಇನ್ನಿತರೆ ದ್ರವ್ಯ ತ್ಯಾಜ್ಯವನ್ನು ರಸ್ತೆಗಳಿಗೆ ಹರಿಯಲು ಬಿಡುವವರಿಂದ 9500 ರೂ., ಪ್ರಾಣಿ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡದೆ ಇರುವವರಿಂದ 3500 ರೂ., ಕಟ್ಟಡ ಭಗ್ನಾವಶೇಷ ತ್ಯಾಜ್ಯವನ್ನು ನಿಗದಿತ ಸ್ಥಳಕ್ಕೆ ವಿಲೇವಾರಿ ಮಾಡದಿರುವುದರಿಂದ 55000 ರೂ., ತೆರೆದ ಚರಂಡಿಯಲ್ಲಿ ಕಸ ಬಿಸಾಡುವವರಿಂದ 9000 ರೂ., ರಸ್ತೆ ಬದಿಯಲ್ಲಿ ಎಲೆಗಳನ್ನು ಸುಡುವವರಿಂದ 700 ರೂ., ಪ್ಲಾಸ್ಟಿಕ್ ವಸ್ತು ಮತ್ತು ಒಣತ್ಯಾಜ್ಯ ಸುಡುವವರಿಂದ 6000 ರೂ. ದಂಡ ವಸೂಲಿ ಮಾಡಲಾಗಿದೆ.

ಹಾಗೆಯೇ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ಮಾಡಿರುವ 23200 ಮಂದಿ ಸಾರ್ವಜನಿಕರು, 4,05,000 ಬೀದಿ ಬದಿ ವ್ಯಾಪಾರಿಗಳು, 53,000 ವಾಣಿಜ್ಯದಾರರು ಹಾಗೂ 1,25,000 ಉದ್ದಿಮೆದಾರರಿಂದ 1,83,200 ರೂ. ಸೇರಿ ಒಟ್ಟು 14,35,500 ರೂ.ದಂಡ ವಸೂಲಿ ಮಾಡಲಾಗಿದೆ.

ಕಾರ್ಯಾಚರಣೆ ಮುಂದುವರೆಯಲಿದೆ: ನಿಷೇದಿತ ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಮೈಸೂರಿನಲ್ಲಿ ಕಾರ್ಯಾಚರಣೆ ಮುಂದುವರೆಯಲಿದೆ. ನಿಷೇಧಿತ ಪ್ಲಾಸ್ಟಿಕ್ ಬಳಕೆ ಮಾಡುವವರಿಗೆ ಸ್ಥಳದಲ್ಲೇ ದಂಡ ವಿಧಿಸಿ, ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರಿಗೆ ಆಗಮಿಸಿದ ರೈತ ಜಾಗೃತಿ ಜಾತ್ರೆ

ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದ ಹೋರಾಟಗಾರರು



ಕೇಂದ್ರ ಸರ್ಕಾರ ಅಮೆರಿಕಾ ದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡು ರೈತರಿಗೆ ಮರಣ ಶಾಸನ ರೂಪಿಸುತ್ತಿದೆ ಎಂದು ಆರೋಪಿಸಿ ರೈತ ನಾಯಕ ಜಗಜಿತ್ ಸಿಂಗ್ ದಲ್ಲೈವಾಲಾ ನೇತೃತ್ವದಲ್ಲಿ ನಡೆಯುತ್ತಿರುವ ಸಂಯುಕ್ತ ಕಿಸಾನ್ ಮೋರ್ಚ ರೈತ ಜಾಗೃತಿ ಯಾತ್ರೆ ಬುಧವಾರ ಮೈಸೂರಿಗೆ ಆಗಮಿಸಿತು.

ಮೈಸೂರು ಫೆ.11(ಎಂಟಿವೈ)–ಕೇಂದ್ರ ಸರ್ಕಾರ ಅಮೆರಿಕಾದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡು ರೈತರಿಗೆ ಮರಣ ಶಾಸನ ರೂಪಿಸುತ್ತಿದೆ ಎಂದು ಆರೋಪಿಸಿ ರೈತ ನಾಯಕ ಜಗಜಿತ್ ಸಿಂಗ್ ದಲ್ಲೈವಾಲಾ ನೇತೃತ್ವದಲ್ಲಿ ದೇಶದಾದ್ಯಂತ ಸಂಚರಿಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚ ರೈತ ಜಾಗೃತಿ ಯಾತ್ರೆ ಬುಧವಾರ ಮೈಸೂರಿಗೆ ಆಗಮಿಸಿತು.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮ ಬಳಿ ಆಗಮಿಸಿದ ಸಂಯುಕ್ತ ಕಿಸಾನ್ ಮೋರ್ಚ ರೈತ ಜಾಗೃತಿ ಯಾತ್ರೆಯನ್ನು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತ ಕುಮಾರ್ ಸ್ವಾಗತಿಸಿ ಗಣಪತಿ ಆಶ್ರಮಕ್ಕೆ ಕರೆದೊಯ್ದರು. ಅಲ್ಲಿ ಯಾತ್ರೆಯಲ್ಲಿ ಆಗಮಿಸಿದ್ದ ರೈತ ನಾಯಕ ಜಗಜಿತ್ ಸಿಂಗ್ ದಲ್ಲೈವಾಲಾ ಹಾಗೂ ಇನ್ನಿತರರು ಶ್ರೀಗಳ ಆಶೀರ್ವಾದ ಪಡೆದು, ಯಾತ್ರೆ ನಡೆಸುತ್ತಿರುವ ಉದ್ದೇಶವನ್ನು ವಿವರಿಸಿದರು.

ಇದೇ ವೇಳೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ರೈತರನ್ನು ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ರೈತರು ಹಾಗೂ ಸೈನಿಕರು ದೇಶದ ಎರಡು ಕಣ್ಣುಗಳಿದ್ದಂತೆ. ರೈತರು ಬೆಳೆ ಬೆಳೆದು ದೇಶದ ಜನರ ಹಸಿವು ತಣಿಸುತ್ತಿದ್ದರೆ, ರೈತರು ಗಡಿಯಲ್ಲಿ ಕಾವಲು ಕಾಯುತ್ತಾ ಜನರನ್ನು ರಕ್ಷಣೆ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರ ಸಂಕಷ್ಟ ನಿವಾರಿಸಲು ಸರ್ಕಾರ ವಿಶೇಷ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತ ಕುಮಾರ್ ಮಾತನಾಡಿ, ಸ್ವಾತಂತ್ರ ಪೂರ್ವದಲ್ಲಿ ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ದೇಶ ಆಳಿದರು. ಈಗ ಕೇಂದ್ರ ಸರ್ಕಾರ ಅಮೆರಿಕಾದೊಂದಿಗೆ ವ್ಯಾಪಾರದ ಒಪ್ಪಂದ ಮಾಡಿಕೊಂಡು ರೈತರಿಗೆ ಮರಣ ಶಾಸನ ಬರೆಯುತ್ತಿದೆ ಎಂದರು.

ಕಳೆದ ವರ್ಷ ಜಗಜಿತ್ ಸಿಂಗ್ ದಲ್ಲೈವಾಲಾ ಹೋರಾಟ ನಡೆಸಿದಾಗ ಸರ್ವೋಚ್ಚ ನ್ಯಾಯಾಲಯ ನವಾಬ್ ಸಿಂಗ್ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತು. ಈ ಸಮಿತಿ ರೈತರ ಪರವಾಗಿ ವರದಿ ಸಲ್ಲಿಸಿದೆಯಾದರೂ ಇದುವರೆಗೂ ರೈತರ ಪರ ಯಾವುದೇ ತೀರ್ಮಾನ ಕೈಗೊಂಡಿಲ್ಲ. ವರದಿಯಲ್ಲಿ ಎಂಎಸ್‌ಪಿ ಗ್ಯಾರಂಟಿ ಕಾನೂನು ಅವಶ್ಯಕತೆ ಇದೆ ಎಂದು ಉಲ್ಲೇಖಿಸಲಾಗಿದೆ. ಯಾವುದೇ ತೀರ್ಮಾನ ಆಗಿಲ್ಲ ಎಂದರು.

ಸ್ವತಂತ್ರ ಪೂರ್ವದಲ್ಲಿ ರೈತರು ಚಳುವಳಿ ಮಾಡುವ ಎಚ್ಚರಿಕೆ ನೀಡಿದರೆ ಬ್ರಿಟಿಷ್ ಆಡಳಿತ ತಕ್ಷಣವೇ ಸ್ಪಂದಿಸಿ ಸಮಸ್ಯೆ ಬಗೆ ಹರಿಸುತ್ತಿತ್ತು. ಆದರೆ ಇಂದಿನ ಸರ್ಕಾರಗಳು ನಾಟಕೀಯವಾಗಿ ವರ್ತಿಸುತ್ತಿವೆ. ಇದರ ವಿರುದ್ಧ ರೈತರು ನಿಲ್ಲಲೇ ಬೇಕು. ಅದಕ್ಕಾಗಿ ಮಾ.19ರಂದು ದೆಹಲಿಯಲ್ಲಿ ರಾಮ ಲೀಲಾ ಮೈದಾನದಲ್ಲಿ ಬೃಹತ್ ರೈತರ ಸಮಾವೇಶ ನಡೆಸಲಾಗುತ್ತಿದೆ. ರೈತ ಜಾಗೃತಿ ಯಾತ್ರೆ 40 ದಿನಗಳ ಕಾಲ ದೇಶವನ್ನು ಸುತ್ತಿ ರೈತರ ಸಹಿ ಪಡೆದು ಪ್ರಧಾನಮಂತ್ರಿಗೆ ರವಾನಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಹರಿಯಾಣದ ಮುಖಂಡ ಅಭಿಮನ್ಯು ಕೋಹರ್, ಉತ್ತರ ಪ್ರದೇಶ ನಿತಿನ್ ಬಾಲ್ಯ, ರಾಜಸ್ಥಾನ್‌ದ ಇಂದ್ರಜಿತ್ ಪಲ್ಲಿವಾನ್, ಮಧ್ಯ ಪ್ರದೇಶದ ಲೀಲಾಧರ್ ರಜಪೂತ್, ಅರುಣ್ ಪಟೇಲ್, ಪಂಜಾಬ್ ಹರ್ಸುಲಿಂದರ್ ಸಿಂಗ್, ಅತ್ತಹಳ್ಳಿ ದೇವರಾಜ್, ಬಡನಪುರ ನಾಗರಾಜ್, ಬಲ್ಲೂರು ರವಿಕುಮಾರ್, ಲಕ್ಷ್ಮೀದೇವಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಮನೆ ಮನೆಗೂ ತೆರಳಿ ಹನುಮಾನ್ ಚಾಲೀಸ ಪಾರಾಯಣ



ಶ್ರೀ ಹನುಮಾನ್ ಚಾಲೀಸ ಪಾರಾಯಣ ಮಹಾಯಜ್ಞ ಫೆ.14 ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಹಿನ್ನೆಲೆಯಲ್ಲಿ ಚಾಮರಾಜ ಕ್ಷೇತ್ರದ 23ನೇ ವಾರ್ಡಿನ ಗಾಣಿಗರ ಬೀದಿ ಸುತ್ತಮುತ್ತ ಮನೆ ಮನೆಗೆ ತೆರಳಿ ಆಹ್ವಾನ ಪತ್ರ ನೀಡಿ ಶ್ರೀ ಹನುಮಾನ್ ಚಾಲೀಸ್ ಕಾರ್ಯಕ್ರಮ ಆಗಮಿಸಬೇಕೆಂದು ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಭಕ್ತ ವೃಂದ ಆಹ್ವಾನಿಸಿತು. ಈ ಸಂದರ್ಭದಲ್ಲಿ ವಾರ್ಡ್ ನಂಬರ್ 23ರ ಬಿಜೆಪಿ ಮುಖಂಡರಾದ ಆರ್. ಪರಮೇಶ್ ಗೌಡ, ಪ್ರದೀಪ್ ಕುಮಾರ್, ಬ್ರಹ್ಮಚಾರ್, ಪ್ರಮೋದ್, ಟಿ.ಎಸ್.ಅರುಣ್, ವಿ.ಎಸ್.ಕಿರಣ್, ಗ್ಯಾರೇಜ್ ರಮೇಶಣ್ಣ, ಅಭಿಷೇಕ್ ಗೌಡ, ದೀಪು, ಸ್ವಾಮಿ, ಮೋಹನ್, ನಾಗೇಶ್ ಯಾದವ್ ಮತ್ತಿತರರು ಉಪಸ್ಥಿತರಿದ್ದರು.

ಸಮಾಜ ಸೇವಕ ಎಸ್.ಶ್ರೀಕಾಂತ್‌ಗೆ ಸನ್ಮಾನ...



ಮೈಸೂರು ತಾಲೂಕು ಜಯಪುರ ಹೋಬಳಿಯ ದೊಡ್ಡಹುಂಡಿ ಗ್ರಾಮದ ಮುರುಡ ಬಸವೇಶ್ವರಸ್ವಾಮಿ ಓಕಳಿ ಜಾತ್ರಾ ಮಹೋತ್ಸವ ಪೂಜಾ ಕಾರ್ಯಕ್ರಮಕ್ಕೆ 50 ಸಾವಿರ ರೂ. ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಬಸವೇಶ್ವರ ಸ್ವಾಮಿ ಮತ್ತು ಮಾರಮ್ಮ ಸೇವಾಭಿವೃದ್ಧಿ ಕಾರ್ಯಕಾರಿ ಸಮಿತಿ ಸದಸ್ಯರು ಸನ್ಮಾನಿಸಿದರು. ತಾಪಂಮಾಜಿ ಸದಸ್ಯರಾದ ಸಿದ್ದರಾಮೇಗೌಡ, ನಂಜುಂಡೇಗೌಡ, ಚಿಕ್ಕಣ್ಣ, ಬಸವೇಗೌಡ, ಸಿಮೆಂಟ್ ಸಿದ್ದರಾಮೇಗೌಡ, ಕೃಷ್ಣಮೂರ್ತಿ, ಬಸಪ್ಪ, ಮರೀಗೌಡ, ತಮ್ಮಡಿಗೌಡ, ದೇವಾಲಯ ಪ್ರಧಾನ ಅರ್ಚಕರಾದ ರವೀಶ್ ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.

ಫೆ.14,ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು, ಫೆ. 11– ಮೈಸೂರಿನ ಕುವೆಂಪುನಗರದ ಸುರುಚಿ ರಂಗ ಮನೆಯಲ್ಲಿ ಫೆ.14 ರಂದು ಸಂಜೆ 4–30 ರಿಂದ 5–30 ರವರೆಗೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಥೆ ಹೇಳುವವರು: ಚಿಕ್ಕಮಳಲಿ ಆರ್ ಮಹಾದೇವ, ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು, ಕರಿಮುದ್ದನಹಳ್ಳಿ, ಹುಣಸೂರು ತಾಲೂಕು. ಹೆಚ್ಚಿನ ಮಾಹಿತಿಗೆ ಮೊ.ನಂ. 9243581097, 9945943115 ನ್ನು ಸಂಪರ್ಕಿಸಬಹುದು.

ಪಿಹೆಚ್‌ಡಿ, ಫೆಲೋಶಿಪ್‌ನಲ್ಲಿ ಮಾದಿಗ ಸಮುದಾಯಕ್ಕೆ ಅನ್ಯಾಯ

ಹಿರಿಯ ವಕೀಲ ಅರುಣ್ ಕುಮಾರ್ ಆರೋಪ



ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್‌ಡಿ ಹಾಗೂ ಫೆಲೋಶಿಪ್ ಹಂಚಿಕೆಯಲ್ಲಿ ಮಾದಿಗ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿ ಹಿರಿಯ ವಕೀಲ ಅರುಣ್ ಕುಮಾರ್ ಅವರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅವರಿಗೆ ಮನವಿ ಸಲ್ಲಿಸಿದರು.

ಮೈಸೂರು, ಫೆ.11(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್‌ಡಿ ಮತ್ತು ಫೆಲೋಶಿಪ್ ಹಂಚಿಕೆಯಲ್ಲಿ ಮಾದಿಗ ಸಮುದಾಯದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಹಿರಿಯ ವಕೀಲ ಅರುಣ್ ಕುಮಾರ್ ಆರೋಪಿಸಿದ್ದಾರೆ. ಈ ಸಂಬಂಧ ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ನಾಗರಾಜ್ ಅವರಿಗೆ ಮನವಿ ಸಲ್ಲಿಸಿ ವಸ್ತು ಸ್ಥಿತಿಯನ್ನು ವಿವರಿಸಿದರು.

ಒಬ್ಬ ಪ್ರಾಧ್ಯಾಪಕ ಪಿಹೆಚ್‌ಡಿಗೆ 8 ವಿದ್ಯಾರ್ಥಿಯನ್ನು ಮಾತ್ರ ತೆಗೆದುಕೊಳ್ಳಲು ಮಾರ್ಗಸೂಚಿ ಹೇಳುತ್ತದೆ. ಆದರೆ ಕೆಲವು ವಿಭಾಗಗಳಲ್ಲಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ನೇಮಕ ಮಾಡಿಕೊಂಡು ಯುಜಿಸಿ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ದೂರಿದರು. ಈ ಸಂಬಂಧ ಕೂಡಲೇ ಸಮಸ್ಯೆ ಪರಿಹಾರ ಮಾಡಬೇಕೆಂದು ಅರುಣ್ ಕುಮಾರ್ ಮನವಿ ಮಾಡಿದರು.

ಹೈ ಲೈಫ್‌ನಿಂದ ಮದುವೆ, ಲಕ್ಸುರಿ ಫ್ಯಾಷನ್ ಪ್ರದರ್ಶನ, ಮಾರಾಟಕ್ಕೆ ಚಾಲನೆ



ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈ ಲೈಫ್ ವಸ್ತುಪ್ರದರ್ಶನಕ್ಕೆ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರು ಚಾಲನೆ ನೀಡಿದರು.

ಮೈಸೂರು,ಫೆ.11(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈ ಲೈಫ್ ಸಂಸ್ಥೆ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಭಾರತದ ಪ್ರಮುಖ ಮತ್ತು ಪ್ರೀಮಿಯಂ ಮದುವೆ ಹಾಗೂ ಲಕ್ಸುರಿ ಫ್ಯಾಷನ್ ಪ್ರದರ್ಶನ ಮತ್ತು ಮಾರಾಟಕ್ಕೆ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರು ಚಾಲನೆ ನೀಡಿದರು.

ಈ ಪ್ರದರ್ಶನದಲ್ಲಿ ವಧುವಿನ ಉಡುಪುಗಳು, ಡಿಸೈನರ್ ಸೀರೆಗಳು, ಲೆಹೆಂಗಾಗಳು, ಆಧುನಿಕ ಗೌನ್‌ಗಳು, ಕೈಮಗ್ಗ ಆಭರಣಗಳು ಹಾಗೂ ಲಕ್ಸುರಿ ಆಕ್ಸೆಸರಿಗಳನ್ನು ದೇಶದ ವಿವಿಧ ಖ್ಯಾತ ಡಿಸೈನರ್‌ಗಳು ಮತ್ತು ಬ್ರ್ಯಾಂಡ್‌ಗಳು ಪ್ರದರ್ಶಿಸುತ್ತಿವೆ ಪಾರಂಪರಿಕ ಶೈಲಿಯೊಂದಿಗೆ ಸಮಕಾಲೀನ ವಿನ್ಯಾಸಗಳ ಸುಂದರ ಸಂಯೋಜನೆ ಎಲ್ಲರ ಗಮನ ಸೆಳೆಯುತ್ತಿದೆ.

ಕಾರ್ಯಕ್ರಮ ಸಂಯೋಜಕ ಎಸ್. ಶ್ರೀಕಾಂತ್ ಮಾತನಾಡಿ, ಹೈ ಲೈಫ್ ವೇದಿಕೆ ನವೀನತೆ, ಸಾಂಸ್ಕೃತಿಕ ವೈವಿಧ್ಯತೆಯನ್ನು ಉತ್ತೇಜಿಸುವ ಮೂಲಕ ಭಾರತೀಯ ಫ್ಯಾಷನ್‌ನ ಭವಿಷ್ಯವನ್ನು ಪ್ರತಿಬಿಂಬಿಸುತ್ತಿದೆ. ಮದುವೆ ಹಾಗೂ ಹಬ್ಬಗಳ ಕಾಲ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ಹೈ ಲೈಫ್ ಬ್ರೈಡ್ಸ್ ಮೈಸೂರಿನ ವಧು ವರರು, ಕುಟುಂಬಗಳು ಮತ್ತು ಫ್ಯಾಷನ್ ಆಸಕ್ತರಿಗೆ ಒನ್–ಸ್ಟಾಪ್ ಲಕ್ಸುರಿ ಶಾಪಿಂಗ್ ತಾಣವಾಗಲಿದೆ ಎಂದು ತಿಳಿಸಿದರು.

ಹೈ ಲೈಫ್ ಎಕ್ಸಿಬಿಷನ್ಸ್‌ನ ಆಯೋಜಕಿ ಶೋಮಿಕಾ ಎಸ್.ರಾವ್ ಮಾತನಾಡಿ, ಮೈಸೂರಿನ ಸಂಸ್ಕೃತಿ, ಪರಂಪರೆ ಮತ್ತು ಸೊಗಸು ಹೈ ಲೈಫ್ ಬ್ರೈಡ್ಸ್‌ಗೆ ಸೂಕ್ತ ನಗರವಾಗಿದ್ದು, ಈ ಆವೃತ್ತಿಯಲ್ಲಿ ಪಾರಂಪರಿಕ ಹಾಗೂ ಆಧುನಿಕ ಫ್ಯಾಷನ್‌ಗಳ ಮಿಶ್ರಣವನ್ನು ನೀಡಲಾಗಿದೆ ಎಂದರು.

ಉದ್ಘಾಟನಾ ಸಮಾರಂಭದಲ್ಲಿ ಹೈ ಲೈಫ್ ಎಕ್ಸಿಬಿಷನ್ಸ್‌ನ ಪ್ರಾದೇಶಿಕ ವ್ಯವಸ್ಥಾಪಕಿ ರಿಯಾ, ವರ್ಷಾ ಎನ್‌ಕ್ಲೇವ್‌ನ ವ್ಯವಸ್ಥಾಪಕ ನಿರ್ದೇಶಕಿ ಪ್ರಿಯಾಂಕಾ ಅಜಿತ್ ಗೌಡ, ವರ್ಷಾ ಟೆಕ್ ಪಾರ್ಕ್‌ನ ಮುಖ್ಯಸ್ಥೆ ಸಾಧ್ನಾ, ವರ್ಷ ಅಸೋಸಿಯೇಟ್ಸ್ ನಿರ್ದೇಶಕಿ ವಿ.ಎನ್. ನಿಧಿಶ್ರೀ, ಐಕ್ಯೂವಿಯಾ ಸಂಸ್ಥೆ ಸಂಸ್ಥಾಪಕಿ ನೇಹಾ ಭಟ್, 'ರಿವಾಲ್ವ್ ಬೈ ಪ್ರೀತಿ' ಸಂಸ್ಥೆಯ ಸ್ಥಾಪಕಿ ಪ್ರೀತಿ ಪಡಕಿ, ಹೆಚ್‌ಎಸ್ ಜಿ ಇನ್ಫ್ರಾ ಸಂಸ್ಥೆಯ ವ್ಯವಸ್ಥಾಪಕ ಪಾಲುದಾರ್ತಿ ಹೆಚ್.ಎಸ್.ರಮ್ಯಾ, ನೇಲ್ ಟೆಕ್ನಿಷಿಯನ್ ರಶ್ಮಿ ಜಯಂತ್, ಹ್ಯಾಂಡ್ ಬುಕ್ ಸಂಸ್ಥೆಯ ವಾಸ್ತುಶಿಲ್ಪಿ ಸಂಜನಾ ಶ್ರೀಹರಿ, ಉದ್ಯಮಿ ರಮ್ಯಾ ಕೋಟೆ, ಉದ್ಯಮಿ ಸೌಜನ್ಯ ಶಿವಣ್ಣ ಅವರು ವಸ್ತು ಪ್ರದರ್ಶನ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಎರಡು ದಿನಗಳ ಪ್ರದರ್ಶನ ಮತ್ತು ಮಾರಾಟವು ಬೆಳಿಗ್ಗೆ 10ರಿಂದ ರಾತ್ರಿ 9 ರವರೆಗೆ ಸಾರ್ವಜನಿಕರಿಗೆ ತೆರೆದಿರಲಿದೆ.



ಏಳನೇ ವರ್ಷದ ಸವಿನೆನಪು

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀಮತಿ ತಿಮ್ಮಮ್ಮ

ಇಂತಿ ದುಃಖತಪ್ತರು ಲೇಟ್ ಕಲಾಚಿ ಮೊಳ್ಳಣ್ಣನವರ ಕುಟುಂಬ, ಲೇಟ್ ಬಳ್ಳನ ಕರಿಯಪ್ಪನವರ ಕುಟುಂಬ, ಕೆ.ಜಿ.ಕೊಪ್ಪಲು, ಮೈಸೂರು



ಎರಡನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾಯಿತು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ ಮತ್ತು ಸದಾ ನಿಮ್ಮ ನೆನಪಿನಲ್ಲೇ ಇರುವ

ಶ್ರೀ ಎನ್. ವೆಂಕಟಾಚಲಪ್ಪ
ನಿವೃತ್ತ ತಹಶೀಲ್ದಾರ್

ಪತ್ನಿ: ನಾಗಮಣಿ ಮತ್ತು ಕುಟುಂಬವರ್ಗ, ಕಂದಾಯನಗರ, ಮೈಸೂರು




ಹಸಿರು ನಮ್ಮ ಉಸಿರು

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, **Fortuner** ಮತ್ತು **Automatic** ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಬಳ: **25,000-30,000** ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ

9187412584 / 9187312582





WANTED IMMEDIATELY

Reputed Hospital Front Office, MRD, ICU / NICU Staff HOUSE KEEPING, Security Guards. all Above Experienced


Walk in Direct interview on Friday 13/02/2026, 11am-3pm

9986011605

ಬೇಕಾಗಿದ್ದಾರೆ

ಸೆಕ್ಯೂರಿಟಿ ಗಾರ್ಡ್ & ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಹಾಗೂ **SSLC & ITI** ಓದಿರುವ ಹುಡುಗರು ಫ್ಯಾಕ್ಟರಿ ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಮೈಸೂರು

7676948164
9900747093
8792537093



5ನೇ ವರ್ಷದ ಪುಣ್ಯಸ್ಮರಣೆ

ಶ್ರೀಯುತ ಹೆಚ್ ಲಿಂಗಯ್ಯರವರು

ನಿವೃತ್ತ ಮುಖ್ಯ ವ್ಯವಸ್ಥಾಪಕರು, ಕಾವೇರಿ ಗ್ರಾಮೀಣ ಬ್ಯಾಂಕ್ ಹಾಗೂ ಸಂಸ್ಥಾಪಕ ಧರ್ಮದರ್ಶಿಗಳು, ಪ್ರಗತಿ ವಿದ್ಯಾಸಂಸ್ಥೆ

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು

ಪತ್ನಿ: ಬಿ ರಾಜಮ್ಮರವರು, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಕುಟುಂಬಸ್ಥರು ಹಾಗೂ ಪ್ರಗತಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಮತ್ತು ಶಿಕ್ಷಕವರ್ಗ

ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರಾದ ಶ್ರೀಮತಿ ಉಮಾ ನಾಗಾನಂದ್ ಕೋಂ ನಾಗಾನಂದ್ ಜಿ. ಪಿ. ರವರು ಷೆಡ್ಯೂಲ್ ಸ್ವತ್ತನ್ನು ಕುಮಾರ ಎಂ. ಬಿನ್ ಮಹದೇವ, ಮೂಡಲಹುಂಡಿ ಗ್ರಾಮ, ವರುಣಾ ಹೋಬಳಿ, ಮೈಸೂರು ತಾಲ್ಲೂಕು ರವರಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಖರೀದಿ ಮಾಡಲು ಇಚ್ಛಿಸಿರುತ್ತಾರೆ ಹಾಗೂ ಅದರಂತೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರನ್ನು ಮಾಡಿಕೊಳ್ಳಲು ಇಚ್ಛಿಸಿರುತ್ತಾರೆ. ಆದ್ದರಿಂದ, ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ನಮ್ಮ ಕಕ್ಷಿದಾರರ ವಕೀಲರ ಕಛೇರಿಗೆ ಪತ್ರಿಕಾ ಪ್ರಕಟಣೆಯ ಮೂವತ್ತು (30) ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಸರ್ವೆ ನಂ.381/11 ರಲ್ಲಿ 0–30.00 (ಮೂವತ್ತು ಗುಂಟೆ) ಖುಷ್ಕಿ ಜಮೀನು. ಮೈಸೂರು ತಾಲ್ಲೂಕು, ವರುಣ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಸರ್ವೆ ನಂ.381/12ರಲ್ಲಿ 0–35 (ಮೂವತ್ತೈದು ಗುಂಟೆ) ಖುಷ್ಕಿ ಜಮೀನು. ಮೈಸೂರು ತಾಲ್ಲೂಕು, ವರುಣ ಹೋಬಳಿ, ವರಕೋಡು ಗ್ರಾಮದ ಹಳೇ ಸರ್ವೆ ನಂ.381/7 ಹಾಲೀ ಸರ್ವೆ ನಂ.381/10 ರಲ್ಲಿರುವ 0–20.00 (ಇಪ್ಪತ್ತು ಗುಂಟೆ) ಖುಷ್ಕಿ ಜಮೀನು, ಮೈಸೂರು ತಾಲ್ಲೂಕು, ವರುಣ ಹೋಬಳಿ, ವರಕೋಡು ಗ್ರಾಮದ ಹಳೇ ಸರ್ವೆ ನಂ.381/7 ಹಾಲೀ ಸರ್ವೆ ನಂ.381/9 ರಲ್ಲಿರುವ 0–20.00 (ಇಪ್ಪತ್ತು ಗುಂಟೆ) ಖುಷ್ಕಿ ಜಮೀನು, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವರಕೋಡು ಗ್ರಾಮದ ಜಮೀನಿನ ಸರ್ವೆ ನಂ.377/1 ರಲ್ಲಿ 1–11.08 (ಒಂದು ಎಕರೆ ಹನ್ನೊಂದುವರೆ ಗುಂಟೆ) ಖುಷ್ಕಿ ಜಮೀನು, ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ವರುಣ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಸರ್ವೆ ನಂ.701/3 ರಲ್ಲಿ 1–00 (ಒಂದು ಎಕರೆ) ಖುಷ್ಕಿ ಜಮೀನು, ಮೈಸೂರು ಜಿಲ್ಲೆ ಮತ್ತು ತಾಲ್ಲೂಕು. ವರುಣ ಹೋಬಳಿ, ವರಕೋಡು ಗ್ರಾಮಕ್ಕೆ ಸೇರಿದ ಸರ್ವೆ ನಂ 701/2 ರಲ್ಲಿ 1–00 (ಒಂದು ಎಕರೆ) ಖುಷ್ಕಿ ಜಮೀನು,

ಸಹಿ/– ಸಿ. ಸಿದ್ದರಾಮ
BA.L, LL.B, ವಕೀಲರು,
KAR 1810/20215
2852/1, 2ನೇ ಮೇನ್, 4ನೇ ಕ್ರಾಸ್, ಜಯನಗರ, ಮೈಸೂರು. ಮೊ: 9916472436

G9 projects Designing your Dreams — Vee2 Developers

POORVA SHELTERS PHASE - I, II & III

Price Starts from ₹ 2,299/-sq.ft

20×30 | 30×40 & 20×40 | 30×50

Near to Marvel PU College
Lalithadripura Ring road Mysuru

8055-004-400

JOBS IN GSS

IT Application Manager
REQUIREMENT - 1
EXPERIENCE - 2-6 YEARS

Graphic Designer
REQUIREMENT - 1
EXPERIENCE - 1 YEAR

Logistics - Driver
REQUIREMENT - 3
EXPERIENCE - 2 YEARS

E-Mail: hr@gssprojects.in 8050001572

MAHATHMA GANDHI B.ED COLLEGE

Sathagalli, Mysuru

Academic Year: 2025-2026
ADMISSION FOR B.Ed (Last Few Seats Left)

Contact No:
● 0821-2420374 ● 93438 28203

Office: Mahathma Gandhi Trust, #27, Sri Lalitha, Sonar Street, Chamaraja Mohalla, Mysore
Email : mahatmagandhitrust@gmail.com

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

BHARATIYA VIDYA BHAVAN

CA-14, Vijayanagar 1st Stage, Mysore – 570017
Phone: 0821 – 2412141, Email – bvbmysore@gmail.com

BUS FOR SALE

SML IZUZU 26+1 Seater school bus in excellent running condition is for sale.

Those who are interested may inspect the bus at the above address between 16.02.2026 and 25.02.2026. (From 10:00 hrs. to 15:30 hrs.), and quote their price.

Note: - Along with the quote you are supposed to enclose an EMD of Rs. 15000.00.

Sd/- Administrator
9986002207

SHAH SINCE 1947 — **SPOT HIRING NOW !** — Hero

Sl. No.	Designation	Salary/ Month	Requirement
1	Sales Executives	18000	1 Year in Automobile
2	Sales Manager	25000	3 Year in Automobile
3	Service Manager	25000	3 Year in Automobile
4	Spare Parts Manager	25000	3 Year in Automobile
5	Front Line Supervisor	18000	1 Year in Automobile
6	Technician	18000	2 Year Mechanic Experience / ITI Mech
7	Tele Caller	14000	Fresher : Kannada & English
8	Digital Marketing	20000	Content Creation Experience
Walk in Interview with Spot Hiring			Carry Resume, Aadhar and DL
Date : 17.02.2026	Day : Tuesday		Time : 10 AM

Venue : **SHAH MOBIKES** Nazarbad, Mysore — Clarification call : **97422-97450**

FOR SALE

Prime Location Site For Sale
43x93
East Facing, 100 Mtr from Ashoka Puram Railway Station Near Bedarakannappa Temple

30x40, 30x50
Residential Sites for Sale Various Locations

Ready to Move-in Houses for SALE Prime Locations, Vijayanagar
40x60, 50x80

Commercial Property for Sale Dattagalli, 80Ft Road South East Corner, G+2


Commercial Property for Sale
42.5x100
80Ft Road, Near NIE College

Srirampura Commercial Property for Sale
50x80
North Facing, Rent Expected 3 lakhs

40x60
Commercial Site, East Facing Ramakrishna Nagar, 'H' Block

(Brokers Excuse)
9008111454

ಹನ್ಸ್‌ಪ್ಲೈ ಪ್ಲೈವುಡ್ ಮತ್ತು ವೆನೀರ್‌ಗಳೊಂದಿಗೆ ಸುಂದರವಾದ ಒಳಾಂಗಣಗಳನ್ನು ನಿರ್ಮಿಸಿ.



HUNSPLY® A Cut Above

ಪ್ಲೈವುಡ್ — MR GRADE, BWR GRADE, BWP GRADE

ವುಡ್ ವೆನೀರ್

ಅಶೋಕ ಹಾರ್ಡ್‌ವೇರ್
#22, Devaraja Urs Road, Opp to Soch, Mysuru.
Ph: 9986090193 / 9449228005
Whatsapp: 7019353906

ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ (ನಿ.),

#43, 1ನೇ ಕ್ರಾಸ್, ಹೆಚ್.ಡಿ.ದೇವೇಗೌಡ ವೃತ್ತ, ಬನ್ನೂರು ಮುಖ್ಯ ರಸ್ತೆ, ರಿಂಗ್ ರೋಡ್ ಹತ್ತಿರ, ಮೈಸೂರು – 28
(ನೋಂದಣಿ ಸಂಖ್ಯೆ: ಡಿಆರ್‌ಎಂ/ಸಿ–3, ಆರ್‌ಜಿಎನ್/42502/2012–13, ದಿನಾಂಕ: 04–06–2012)

ಪತ್ರಿಕಾ ಪ್ರಕಟಣೆ

ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಆಸ್ತಿಗಳ ಸಂಬಂಧ ವಿವಿದ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿರುತ್ತದೆ, ಈ ಆಸ್ತಿಗಳು ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ, ಮೈಸೂರು ವತಿಯಿಂದ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಿಸಲಾಗಿದೆ, ಈ ಸಂಬಂಧಪಟ್ಟ ಆಸ್ತಿಗಳ ವ್ಯವಹಾರಗಳನ್ನು ಮಾಡಬಾರದಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ, ಕಾನೂನು ಬಾಹಿರವಾಗಿ ಯಾವುದೇ ವ್ಯವಹಾರವನ್ನು ಮಾಡಿದಲ್ಲಿ ಅವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಮತ್ತು ಮುಂದಿನ ಯಾವುದೇ ವ್ಯತ್ಯಾಸಗಳಿಗೆ ಸಂಘವು ಜವಾಬ್ದಾರಿಯಾಗಿರುವುದಿಲ್ಲ.

ಕ್ರ ಸಂ	ಮಾಲೀಕರ ಹೆಸರು	ಆಸ್ತಿಯ ವಿವರ	ವಿಸ್ತೀರ್ಣ	ಆದೇಶ ಸಂಖ್ಯೆ ಮತ್ತು ದಿನಾಂಕ
1	ಶ್ರೀ ಸಿ.ಕೆ.ದೇವರಾಜು	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/4	21.08 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
2	ಶ್ರೀಮತಿ ರೂಪಕಲಾ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/5	0.18 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
3	ಶ್ರೀಮತಿ ರೂಪಕಲಾ	ಮನೆ ನಂ. ಡಿ3/2365/ಕೆ.ಎಲ್. 356, ಮಂಡ್ಯ ಟೌನ್,	ಪೂರ್ವ, ಪಶ್ಚಿಮ 80ಅಡಿಗಳು, ಉತ್ತರ ದಕ್ಷಿಣ 53 ಅಡಿಗಳು	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
4	ಶ್ರೀ ಸಿ.ಕೆ.ದೇವರಾಜು	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/8	0.15 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
5	ಶ್ರೀ ಸಿ.ಕೆ.ದೇವರಾಜು	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/9	0.15 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
6	ಶ್ರೀಮತಿ ಲಲಿತಾ & ಉಮಾದೇವಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 169/6 (ಹೊಸ ನಂ 169/11)	0–32.08 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
7	ಶ್ರೀ ಸ್ಮಾರ್ಟಿರೆಗೋ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 241/2 (ಹಳೇ ನಂ.241)	01 ಎಕರೆ 24 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
8	ಶ್ರೀ ಸ್ಮಾರ್ಟಿರೆಗೋ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/1	0–10 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
9	ಶ್ರೀ ಸ್ಮಾರ್ಟಿರೆಗೋ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 232/2	2 ಎಕರೆ 03 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
10	ಶ್ರೀ ಸ್ಮಾರ್ಟಿರೆಗೋ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/10	0–35.08 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
11	ಶ್ರೀ ಸ್ಮಾರ್ಟಿರೆಗೋ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 150/3	0–15 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
12	ಶ್ರೀ ಜಿ. ಗಿರಿವೆಂಕಟೇಶ್ &	ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ. 77/1	01 ಎಕರೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
13	ಶ್ರೀ ಎಸ್. ನಾಥೇಶ್ವರನ್	ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ. 77/1	01 ಎಕರೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
14	ಶ್ರೀಮತಿ ಕೆ. ಲಕ್ಷ್ಮಿ	ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ 83/2	03 ಎಕರೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
15	ಶ್ರೀ ಎನ್. ರವಿ	ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ 82/2	02 ಎಕರೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
16	ಶ್ರೀ ಎನ್. ರವಿ	ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮಂಡಕಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ 76/2	01 ಎಕರೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
17	ಶ್ರೀ ಗುರಕಾರ್ ಪುಟ್ಟಬುದ್ದಿ	ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮ ವ್ಯಾಪ್ತಿಯ ಸರ್ವೇ ನಂ. 53	01 ಎಕರೆ 27 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
18	ಶ್ರೀ ಪ್ರಮುದ ಬಿಲ್ಡರ್ಸ್	ಮೈಸೂರು ತಾಲ್ಲೂಕು ವರುಣಾ ಹೋಬಳಿ, ಚಿಕ್ಕಹಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ. 95/2	01 ಎಕರೆ 36 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 25.09.2023
19	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಾತಗಳ್ಳಿ ಗ್ರಾಮ ವ್ಯಾಪ್ತಿಯ ಸರ್ವೇ ನಂ. 117/4	0.16 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
20	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 228/5	0.18 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
21	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 228/1	10.19 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
22	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 225/3	0.11 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
23	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 213	1 ಎಕರೆ 23 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
24	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 219/1	2 ಎಕರೆ 10 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
25	ಶ್ರೀ ಕೆ.ಎ.ಮೂರ್ತಿ	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹಂಚ್ಯಾ ಗ್ರಾಮ ವ್ಯಾಪ್ತಿಯ ಸರ್ವೇ ನಂ. 218/2	1 ಎಕರೆ 6–08 ಗುಂಟೆ	ಸಿಓ/71/ಸಿಎಲ್‌ಎಂ/2016, ದಿನಾಂಕ: 04.09.2023
26	ಶ್ರೀ ಮಹದೇವಸ್ವಾಮಿ ಟಿ.	ಆಲನಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯ ಜಂಜರ್ ನಂ. 552, ಪ್ರಾಪರ್ಟಿ ನಂ. 470/7	30 X 35 ಅಡಿ	ಸಂಖ್ಯೆ:ಅನಿ(ವ&ಇ)/ಡಿ2/ ಎಂಡಿ/01/ 2020–21, ದಿನಾಂಕ: 06–09–2024
27	ಶ್ರೀ ಮಹದೇವಸ್ವಾಮಿ ಟಿ.	ಆಲನಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯ ಜಂಜರ್ ನಂ. 909, 808/9, ಪ್ರಾಪರ್ಟಿ ನಂ. 470/7	30 X 35 ಅಡಿ	ಸಂಖ್ಯೆ:ಅನಿ(ವ&ಇ)/ಡಿ2/ ಎಂಡಿ/01/2020–21, ದಿನಾಂಕ:06–09–2024
28	ಶ್ರೀ ಮಹದೇವಸ್ವಾಮಿ ಟಿ.	ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರ ಹೋಬಳಿ ವ್ಯಾಪ್ತಿಯ ಸರ್ವೇ ನಂ.23/2	4 ಎಕರೆ 2.05 ಗುಂಟೆ	ಸಂಖ್ಯೆ:ಅನಿ(ವ&ಇ)/ಡಿ2/ ಎಂಡಿ/01/2020–21, ದಿನಾಂಕ: 06–09–2024
29	ಶ್ರೀ ಬಿ.ಎಸ್.ಲೋಕೇಶ್ವರ್	ಆಲನಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯ ಜಂಜರ್ ನಂ. 443/392 /48/04 ಪ್ರಾಪರ್ಟಿ ನಂ 152200433036020174 ನಿವೇಶನ ಸಂಖ್ಯೆ 04.	12.0192 X 9.144 ಒಟ್ಟು 111.48 ಚದರ ಮೀಟರ್	ಸಂಖ್ಯೆ:ಅನಿ(ವ&ಇ)ಡಿ2/ ಎಂಡಿ/01/2020–21 ದಿನಾಂಕ 06–09–2024
30	ಶ್ರೀ ಬಿ.ಎಸ್.ಲೋಕೇಶ್ವರ್	ಆಲನಹಳ್ಳಿ ಗ್ರಾಮ ಠಾಣಾ ವ್ಯಾಪ್ತಿಯ ಜಂಜರ್ ನಂ. 443/392/48/05 ಪ್ರಾಪರ್ಟಿ ನಂ 152200433036020175 ನಿವೇಶನ ಸಂಖ್ಯೆ 05.	12.192 X 9.144 ಒಟ್ಟು 111.48 ಚದರ ಮೀಟರ್	ಸಂಖ್ಯೆ:ಅನಿ(ವ&ಇ)ಡಿ2/ ಎಂಡಿ/01/2020–21 ದಿನಾಂಕ 06–09–2024
31	ಶ್ರೀ ಜಿ.ಕೆ ಮಂಜು	ಮೈಸೂರು ತಾಲ್ಲೂಕು, ಕಸಬ ಹೋಬಳಿ, ವಾಜಮಂಗಲ ಗ್ರಾಮದ ಸರ್ವೇ ನಂ. 64/2	1 ಎಕರೆ 35 ಗುಂಟೆ	ಸಂಖ್ಯೆ:ಅನಿ(ವ&ಇ)/ಡಿ2/ ಎನ್‌ಎಂಡಿ/08/2023–24, ದಿನಾಂಕ 06–09–2024
32	ಯಶಸ್ವಿ ಗ್ರೂಪ್ಸ್ ಶ್ರೀ ಎಸ್. ಸೋಮಶೇಖರ್	ಕಿಲ್ಲೆ ಮೊಹಲ್ಲ ಮಧುವನ ಹರಿಶ್ಚಂದ್ರ ರಸ್ತೆ, ನಂಜನಗೂಡು ಬ್ರಿಡ್ಜ್ ಹತ್ತಿರ, ಮೈಸೂರು ವ್ಯಾಪ್ತಿಯ ನಿವೇಶನ ಸಂಖ್ಯೆ 38ರ ಸರ್ವೇ ನಂ. 69/1 ಬ್ಲಾಕ್ ನಂ.2	ಪೂರ್ವ ಪಶ್ಚಿಮ 28 ಅಡಿ, ಉತ್ತರ ದಕ್ಷಿಣ 92 ಅಡಿ ವಿಸ್ತೀರ್ಣ ಮತ್ತು	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
33	ಯಶಸ್ವಿ ಗ್ರೂಪ್ಸ್ ಶ್ರೀ ಎಸ್. ಸೋಮಶೇಖರ್	ಕಿಲ್ಲೆ ಮೊಹಲ್ಲ ಮಧುವನ ಹರಿಶ್ಚಂದ್ರ ರಸ್ತೆ, ನಂಜನಗೂಡು ಬ್ರಿಡ್ಜ್ ಹತ್ತಿರ, ಮೈಸೂರು ವ್ಯಾಪ್ತಿಯ ನಿವೇಶನ ಸಂಖ್ಯೆ 341ರ	ಪೂರ್ವ ಪಶ್ಚಿಮ 28 ಅಡಿ, ಉತ್ತರ ದಕ್ಷಿಣ 40 ಅಡಿ, ವಿಸ್ತೀರ್ಣ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
34	ಯಶಸ್ವಿ ಗ್ರೂಪ್ಸ್ ಶ್ರೀ ಎಸ್. ಸೋಮಶೇಖರ್	ಕಿಲ್ಲೆ ಮೊಹಲ್ಲ ಮಧುವನ ಹರಿಶ್ಚಂದ್ರ ರಸ್ತೆ, ನಂಜನಗೂಡು ಬ್ರಿಡ್ಜ್ ಹತ್ತಿರ, ಮೈಸೂರು ವ್ಯಾಪ್ತಿಯ ನಿವೇಶನ ಸಂಖ್ಯೆ411ರ	ಪೂರ್ವ ಪಶ್ಚಿಮ 28 ಅಡಿ, ಉತ್ತರ ದಕ್ಷಿಣ 52 ಅಡಿ	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
35	ಯಶಸ್ವಿ ಗ್ರೂಪ್ಸ್ ಶ್ರೀ ಎಸ್. ಸೋಮಶೇಖರ್	ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಬೂದನೂರು ಗ್ರಾಮದ ಸರ್ವೇ ನಂ. 357/5	01 ಎಕರೆ 39 ಗುಂಟೆ.	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025
36	ಯಶಸ್ವಿ ಗ್ರೂಪ್ಸ್ ಶ್ರೀ ಎಸ್. ಸೋಮಶೇಖರ್	ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಬೂದನೂರು ಗ್ರಾಮದ ಸರ್ವೇ ನಂ. 356/4	01 ಎಕರೆ 06 ಗುಂಟೆ.	ಸಿಓ/71/ಸಿಎಲ್‌ಎಂ/2016, ದಿನಾಂಕ: 22.05.2025

ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ (ನಿ.), ಮೈಸೂರು.